# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಮಾರ್ಚ್ 27, 2021

ಸಂಪುಟ : 47 ಸಂಚಿಕೆ : 327 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


### ಪಾಲಿಕೆ ಉಪ ಚುನಾವಣೆ: ಬಹಿರಂಗ ಪ್ರಚಾರ ಅಂತ್ಯ

## ಬಿಜೆಪಿ-ಕಾಂಗ್ರೆಸ್ ಬಲಾಬಲ ಪ್ರದರ್ಶನ

ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಪ್ರಾಬಲ್ಯ ಕಂಡುಕೊಳ್ಳಲು ಹೆಣಗಾಡುತ್ತಿರುವ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳಿಗೆ ಇದೇ 29 ರಂದು ಎರಡು ವಾರ್ಡುಗಳಲ್ಲಿ ನಡೆಯುವ ಉಪ ಚುನಾವಣೆ ಮಹತ್ವದ್ದಾಗಿದೆ. ಪ್ರಚಾರದ ಭರಾಟೆಯ ಕಾವು ಹೆಚ್ಚಾಗಿದ್ದು, ಚುನಾವಣಾ ಕಣ ರಂಗೇರಿದೆ.

2020ರ ರಲ್ಲಿ ನಡೆದ ಮೇಯರ್ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷದಿಂದ ಗೆದ್ದಿದ್ದ ಯಶೋಧ ಉಮೇಶ್ 2021ರ ಮೇಯರ್ ಚುನಾವಣೆ ವೇಳೆ ಕಾಂಗ್ರೆಸ್‌ನ ದೇವರಮನೆ ಶಿವಕುಮಾರ್ ರಾಜೀನಾಮೆ ನೀಡಿದ್ದರಿಂದ ಇದೇ ಮಾ.29 ರಂದು ಬೆಳಿಗ್ಗೆ 7 ರಿಂದ ಸಂಜೆ 5ರವರೆಗೆ ಉಪ ಚುನಾವಣೆ ನಡೆಯಲಿದೆ.



'ಕೈ' ಜಾರಿದ ಸ್ಥಾನಗಳನ್ನು ಮರಳಿ ಪಡೆಯಲು ಕಾಂಗ್ರೆಸ್ ಹರ ಸಾಹಸ ಮಾಡುತ್ತಿದ್ದರೆ, ಸೋತ ವಾರ್ಡುಗಳಲ್ಲಿ ಕಮಲ ಅರಳಿಸಿ ತಾಕತ್ತು ಪ್ರದರ್ಶಿಸಲು ಬಿಜೆಪಿ ಹೊಂಚು ಹಾಕಿದೆ.

ಬಹಿರಂಗ ಪ್ರಚಾರಕ್ಕೆ ಕೊನೆಯ ದಿನವಾದ ಶುಕ್ರವಾರ ಕಾಂಗ್ರೆಸ್ ಹಿರಿಯರೂ, ಶಾಸಕರೂ ಆದ ಶಾಮನೂರು ಶಿವಶಂಕರಪ್ಪ ಎರಡೂ ವಾರ್ಡ್‌ಗಳಲ್ಲಿ ತಮ್ಮ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿರುವುದು ಕೈ ಪಾಳೆಯದಲ್ಲಿ ಸಂಚಲನ ಮೂಡಿಸಿದೆ.

ಇತ್ತ ಬಿಜೆಪಿ ಆರಂಭದಿಂದಲೂ ಸಂಸದ ಜಿ.ಎಂ. ಸಿದ್ದೇಶ್ವರ ಅವರ ನೇತೃತ್ವದಲ್ಲಿ ಗೆಲುವಿಗೆ ಕಸರತ್ತು ನಡೆಸುತ್ತಲೇ ಇದೆ. ಶುಕ್ರವಾರವೂ ಸಹ 20ನೇ ವಾರ್ಡ್‌ನಲ್ಲಿ ಸಂಸದ ಸಿದ್ದೇಶ್ವರ ಪ್ರಚಾರ ನಡೆಸಿದರೆ, 22ನೇ ವಾರ್ಡ್‌ನಲ್ಲಿ ಶಾಸಕ ಎಸ್.ಎ ರವೀಂದ್ರನಾಥ್ ಸ್ಥಳೀಯ ಮುಖಂಡರೊಂದಿಗೆ ಅಭ್ಯರ್ಥಿಗಳ ಪರ ಮತ ಯಾಚನೆ ಮಾಡಿದರು. ಚುನಾವಣೆ ನಡೆಯಲಿರುವ ಎರಡೂ ವಾರ್ಡ್‌ಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ನೇರ ಸ್ಪರ್ಧೆ ನಡೆಯಲಿದೆ. (2ನೇ ಪುಟಕ್ಕೆ)



ಮಹಾನಗರ ಪಾಲಿಕೆ 22ನೇ ವಾರ್ಡ್‌ನಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಶಾಸಕ ಎಸ್.ಎ. ರವೀಂದ್ರನಾಥ್ ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ನಡೆಸುವ ವೇಳೆ ಎದುರು ಬದುರಾದರು.

### ಕಾಂಗ್ರೆಸ್ ಅಭ್ಯರ್ಥಿಯನ್ನು ಬಹುಮತದಿಂದ ಗೆಲ್ಲಿಸಿ : ಎಸ್ಸೆಸ್

ದಾವಣಗೆರೆ, ಮಾ.26- ಇದೇ 29 ರಂದು 20ನೇ ವಾರ್ಡ್‌ಗೆ ನಡೆಯಲಿರುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮೀನಾಕ್ಷಿ ಜಗದೀಶ್ ಅವರನ್ನು ಪ್ರಚಂಡ ಬಹುಮತದಿಂದ ಆಯ್ಕೆ ಮಾಡುವಂತೆ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಹಾಗೂ ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ ಅವರು ಮತದಾರರಿಗೆ ಕರೆ ನೀಡಿದರು. ಶುಕ್ರವಾರ ಬೆಳಿಗ್ಗೆ ಭಾರತ್ ಕಾಲೋನಿ, ಹೆಚ್ ಕೆ.ಆರ್.ನಗರ, (2ನೇ ಪುಟಕ್ಕೆ)

### ನಗರದ ಅಭಿವೃದ್ಧಿಯೇ ಬಿಜೆಪಿ ಮಂತ್ರ : ಸಿದ್ದೇಶ್ವರ

ದಾವಣಗೆರೆ, ಮಾ.26- ಪಾಲಿಕೆ ಉಪ ಚುನಾವಣೆ ಪ್ರಯುಕ್ತ 20ನೇ ವಾರ್ಡ್ ಭಾರತ್ ಕಾಲೋನಿಯಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀಮತಿ ರೇಣುಕಾ ಕೃಷ್ಣ ರವರ ಪರವಾಗಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ಸ್ಥಳೀಯ ಮುಖಂಡರೊಂದಿಗೆ ಬಿರುಸಿನ ಪ್ರಚಾರ ನಡೆಸಿದರು.

ಈ ಸಂದರ್ಭದಲ್ಲಿ ಬಹಿರಂಗ (2ನೇ ಪುಟಕ್ಕೆ)

## ಜಾರಕಿಹೊಳಿಗೆ ಬಂಧನದ ಭೀತಿ

### ಅತ್ಯಾಚಾರ ಆರೋಪದ ದೂರು ದಾಖಲಿಸಿದ ಸಿ.ಡಿ. ಯುವತಿ

ಬೆಂಗಳೂರು, ಮಾ. 26 - ಅತ್ಯಾಚಾರ ಆರೋಪದಡಿ ಮಾಜಿ ಸಚಿವ, ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಬಂಧನದ ಭೀತಿಯಲ್ಲಿದ್ದಾರೆ.

ಜಾರಕಿಹೊಳಿ ರಾಸಲೀಲೆ ಸಿಡಿ ಹಗರಣ ಬಯಲಿಗೆ ಬಂದ 24 ದಿನಗಳ ನಂತರ ಸಂತ್ರಸ್ಥೆ ಯುವತಿ ಇಂದು ತಮ್ಮ ವಕೀಲರ ಮೂಲಕ ರಮೇಶ್ ವಿರುದ್ಧ ದೂರು ದಾಖಲಿಸಿ, ರಾಜ್ಯ ರಾಜಕೀಯದಲ್ಲಿ ಅಲೋಲ ಕಲ್ಲೋಲ ಉಂಟು ಮಾಡಿದ್ದಾರೆ.

ಸಂತ್ರಸ್ತೆಯು ಹಿರಿಯ ವಕೀಲ ಜಗದೀಶ್ ಮತ್ತು ಅವರ ತಂಡ ಇಂದು ಮಧ್ಯಾಹ್ನ ನಗರದ ಪೊಲೀಸ್ ಕಮೀಷನರ್ ಅವರನ್ನು ಭೇಟಿ ಮಾಡಿ, ತಮ್ಮ ಕಕ್ಷಿದಾರರು ನೀಡಿರುವ ದೂರನ್ನು ದಾಖಲಿಸಿಕೊಳ್ಳುವಂತೆ ಮನವಿ ಮಾಡಿದರು.

ವಕೀಲರು ಸಲ್ಲಿಸಿದ ದೂರಿನ ಪತ್ರವನ್ನು ಸಂತ್ರಸ್ತೆ ಯುವತಿಯು ತನ್ನ ಕೈಬರಹದಲ್ಲಿ ಬರೆದು, ರಮೇಶ್ ಜಾರಕಿಹೊಳಿ ಅವರು ತಮಗೆ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ, ನನ್ನನ್ನು ಬಳಸಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ.

ಬಳಸಿಕೊಂಡಿರುವುದಷ್ಟೇ ಅಲ್ಲ, ನನ್ನ ನಗ್ನ ಚಿತ್ರ ಹಾಗೂ ಅವರು ಬಳಸಿಕೊಂಡ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಿ, ನಮ್ಮ ಕುಟುಂಬದ ಮಾನಹರಣ ಮಾಡಿದ್ದಾರೆ. ಕೆಲಸ ಕೊಡಿಸುವ ನೆಪದಲ್ಲಿ ತಮಗೆ ಬೇಕಾದಗೆಲ್ಲ ಬಳಸಿಕೊಂಡಿದ್ದಾರೆ ಮತ್ತು ನನ್ನ ನಗ್ನವಾಗಿರುವ ಛಾಯಾಚಿತ್ರಗಳನ್ನು ತೆಗೆಸಿ, ಆನಂದಪಟ್ಟಿದ್ದಾರೆ ಎಂದು ದೂರಿದ್ದಾರೆ.

ಕೆಲಸ ಪಡೆಯಲು ಲಕ್ಷಾಂತರ ರೂ ಹಣವಿಲ್ಲದ ಕಾರಣ, ಅವರ ಜೊತೆ ಸಹಕರಿಸಿ, ಖುಷಿ ನೀಡಬೇಕೆಂದು ಕೇಳಿದ್ದರಿಂದ ನಂಬಿ ಅವರು ಹೇಳಿದಂತೆ ನಡೆದುಕೊಂಡು ಬಂದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ನಾನು ಯಾವಾಗ ಅವರಿಗೆ ನನ್ನನ್ನು ಹೇಗೆ (2ನೇ ಪುಟಕ್ಕೆ)

### ಹತ್ತು ಸಿಡಿ ಬಂದರೂ ಎದುರಿಸುತ್ತೇನೆ

ಬೆಂಗಳೂರು, ಮಾ.26 - ಸರ್ಕಾರ ತೆಗೆದು, ಸರ್ಕಾರ ಮಾಡಿದವನಿಗೆ ಸಿ.ಡಿ. ಎದುರಿಸುವುದು ಗೊತ್ತಿಲ್ಲವೇ? ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಗುಡುಗಿದ್ದಾರೆ.



ಅಶ್ಲೀಲ ಸಿ.ಡಿ.ಯ ಸಂತ್ರಸ್ತೆ ಇಂದು ಪೊಲೀಸರಿಗೆ ರಮೇಶ್ ವಿರುದ್ಧ ದೂರು ದಾಖಲಿಸುತ್ತಿದ್ದಂತೆ ಸುದ್ದಿಗಾರರ ಜತೆ ಮಾತನಾಡಿದ ಅವರು, ಇನ್ನೂ ಇಂಥ ಹತ್ತು ಸಿಡಿ ಬರಲಿ, ಅವೆಲ್ಲವನ್ನೂ ಎದುರಿಸುತ್ತೇನೆ. ನಾಳೆಯಿಂದ ನನ್ನ ಆಟ ಶುರು ಎಂದಿದ್ದಾರೆ.

ನನ್ನ ವಿರುದ್ಧ ಷಡ್ಯಂತ್ರ ನಡೆಸಿದವರು ಕೊನೆಯ ಅಸ್ತ್ರ ಪ್ರಯೋಗಿಸಿದ್ದಾರೆ. ಇನ್ನು ನಾನು ಬಿಡುವ ಬಾಣಗಳನ್ನು ಅವರು ಎದುರಿಸಲಿ. ಸಿ.ಡಿ.ಯ ಕಿಂಗ್‌ಪಿನ್ ಯಾರು ಎಂಬ ಸಂಗತಿ ಸೇರಿದಂತೆ ಎಲ್ಲ ಸಂಗತಿಗಳನ್ನು, ಎಲ್ಲರ ಬಣ್ಣವನ್ನೂ (2ನೇ ಪುಟಕ್ಕೆ)

### ಸಂತ್ರಸ್ತೆ ಕುಟುಂಬಕ್ಕೆ ರಕ್ಷಣೆ: ಬೊಮ್ಮಾಯಿ

ಬೆಂಗಳೂರು, ಮಾ. 26 - ಮಾಜಿ ಸಚಿವ ರಮೇಶ್ ಜಾರಕಿಹೊಳಿ ರಾಸಲೀಲೆ ಸಿಡಿಯ ಸಂತ್ರಸ್ತೆ ಹಾಗೂ ಅವರ ಕುಟುಂಬಕ್ಕೆ ರಕ್ಷಣೆ ನೀಡುವಂತೆ ಸಂಬಂಧಪಟ್ಟ ಪೊಲೀಸರಿಗೆ ಆದೇಶ ನೀಡಿರುವುದಾಗಿ ಗೃಹ ಸಚಿವ ಬಸವರಾಜ್ ಬೊಮ್ಮಾಯಿ ತಿಳಿಸಿದ್ದಾರೆ. ಸಂತ್ರಸ್ತೆ ಪರ ವಕೀಲರು ದೂರು ನೀಡಿರುವುದಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಮುಂದಿನ ಕ್ರಮ ಕೈಗೊಳ್ಳುತ್ತದೆ ಎಂದು ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರಿಗೆ ತಿಳಿಸಿದರು. ಯಾರೇ ರಕ್ಷಣೆ ಕೋರಿ ಬಂದರೂ, ಅವರಿಗೆ ರಕ್ಷಣೆ ನೀಡಬೇಕಾದುದ್ದು ನಮ್ಮ ಕರ್ತವ್ಯ ಅದನ್ನು ಪೊಲೀಸರು ಮಾಡುತ್ತಾರೆ ಎಂದರು.

## ರೈತರ ಭಾರತ್ ಬಂದ್ ಕರೆಗೆ ದೊರೆಯದ ಪ್ರತಿಕ್ರಿಯೆ

### ಪಂಜಾಬ್-ಹರಿಯಾಣದಲ್ಲಿ ಮಾತ್ರ ಸ್ಪಂದನೆ

ನವದೆಹಲಿ, ಮಾ. 26 – ಮೂರು ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರು ಕರೆ ನೀಡಿದ್ದ ಭಾರತ್ ಬಂದ್ ಹಿನ್ನೆಲೆಯಲ್ಲಿ ಪಂಜಾಬ್ ಹಾಗೂ ಹರಿಯಾಣಗಳಲ್ಲಿ ಹಲವೆಡೆ ರೈಲು ತಡೆ ಹಾಗೂ ರಸ್ತೆ ತಡೆ ನಡೆಸಲಾಗಿದೆ.

ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸಂಯುಕ್ತ ಕಿಸಾನ್ ಮೋರ್ಚ್ (ಎಸ್.ಕೆ.ಎಂ.) ಬಂದ್‌ಗೆ ಕರೆ ನೀಡಿತ್ತು. ಸಿಂಘು, ಘಾಜಿಪುರ ಹಾಗೂ ಟಿಕ್ರಿಗಳಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ.

ಪಂಜಾಬ್‌ನ ಹಲವಾರು ತಾಣಗಳಲ್ಲಿ ಅಂಗಡಿಗಳು ಬಂದ್ ಆಗಿದ್ದವು. ಸಾರ್ವಜನಿಕ ಹಾಗೂ ಖಾಸಗಿ ಸಾರಿಗೆ ರಸ್ತೆಗಿಳಿದಿರಲಿಲ್ಲ. ಹರಿಯಾಣದಲ್ಲೂ ಅಂಗಡಿಗಳು ಬಂದ್ ಆಗಿದ್ದವು.

ಚುನಾವಣೆ ನಡೆಯುತ್ತಿರುವ 4 ರಾಜ್ಯ ಹಾಗೂ ಒಂದು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬಂದ್‌ಗೆ ಕರೆ ನೀಡಿರಲಿಲ್ಲ. ಉಳಿದಂತೆ ದೇಶದ ಬೇರೆ ಭಾಗಗಳಲ್ಲಿ ಬಂದ್‌ಗೆ ಹೆಚ್ಚೇನೂ ಸ್ಪಂದನೆ ಸಿಗಲಿಲ್ಲ.

## ಕೊರೊನಾ ಆಸ್ಪತ್ರೆಗೆ ಬೆಂಕಿ: 10 ಸಾವು

ನವದೆಹಲಿ, ಮಾ. 26- ಕೊರೊನಾಗೆ ಚಿಕಿತ್ಸೆ ನೀಡುತ್ತಿದ್ದ ಮುಂಬೈನ ಮಾಲ್ ಆಸ್ಪತ್ರೆಯಲ್ಲಿ ಬೆಂಕಿ ಕಾಣಿಸಿಕೊಂಡು ಹತ್ತು ರೋಗಿಗಳು ಸಾವನ್ನಪ್ಪಿದ್ದಾರೆ ಎಂದು ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಂಡುಪ್ ಪ್ರದೇಶದಲ್ಲಿರುವ ಡ್ರೀಮ್ಸ್ ಮಾಲ್ ಕಟ್ಟಡದಲ್ಲಿರುವ ಸನ್‌ರೈಸ್ ಆಸ್ಪತ್ರೆಯಲ್ಲಿ ಮಧ್ಯರಾತ್ರಿ ಅವಘಡ ಸಂಭವಿಸಿದೆ.

ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಮಧ್ಯಾಹ್ನ ಆಸ್ಪತ್ರೆಗೆ ಭೇಟಿ ನೀಡಿದ್ದಾರೆ. ತಾತ್ಕಾಲಿಕವಾಗಿ ಚಿಕಿತ್ಸಾ ಸೌಲಭ್ಯ ಕಲ್ಪಿಸಲು ಈ ತಾಣಕ್ಕೆ ಅನುಮತಿ ನೀಡಲಾಗಿತ್ತು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ನಾಲ್ಕು ಅಂತಸ್ತಿನ ಮಾಲ್ ಕಟ್ಟಡದ ಮೇಲಿನ ಮಹಡಿಯಲ್ಲಿ ಆಸ್ಪತ್ರೆಯನ್ನು ಸ್ಥಾಪಿಸಲಾಗಿತ್ತು. ಅಲ್ಲಿ 76 ರೋಗಿಗಳಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿ ದ್ದಾರೆ. ಮುಂಬೈನಲ್ಲಿ ಕೊರೊನಾ ಸೋಂಕು ದಿನೇ ದಿನೇ ಹೆಚ್ಚಾಗುತ್ತಿದೆ. ನಗರದಲ್ಲಿ ಗುರುವಾರ ಒಂದೇ ದಿನ 5,504 ರೋಗಿಗಳು ಕಂಡು ಬಂದಿದ್ದು ದಾಖಲೆಯಾಗಿತ್ತು.

### ಆರು ರಾಜ್ಯಗಳಲ್ಲಿ ಕೊರೊನಾ ಸೋಂಕು ಹೆಚ್ಚಳ

ನವದೆಹಲಿ, ಮಾ. 26 – ದೇಶದಲ್ಲಿ ಶುಕ್ರವಾರ ಅತಿ ಹೆಚ್ಚಿನ 59,118 ಕೊರೊನಾ ಸೋಂಕುಗಳು ಪತ್ತೆಯಾಗಿವೆ. ಕರ್ನಾಟಕ ಸೇರಿದಂತೆ 6 ರಾಜ್ಯಗಳಲ್ಲಿ ಸೋಂಕು ಹೆಚ್ಚಾಗಿದೆ. ಫೆಬ್ರವರಿಯಲ್ಲಿ ಅತಿ ಕಡಿಮೆ ಹಂತಕ್ಕೆ ತಲುಪಿದ್ದ ಕೊರೊನಾ ಸೋಂಕು ನಂತರದಲ್ಲಿ ನಿರಂತರವಾಗಿ ಏರಿಕೆ ಕಾಣುತ್ತಿದೆ. ದೇಶದಲ್ಲೀಗ 4.21 ಲಕ್ಷ ಸಕ್ರಿಯ ಸೋಂಕುಗಳಿವೆ. ಮಹಾರಾಷ್ಟ್ರ, ಕೇರಳ ಹಾಗೂ ಪಂಜಾಬ್‌ಗಳಲ್ಲಿ ಒಟ್ಟು ಸಕ್ರಿಯ ಸೋಂಕುಗಳ ಪಾಲು ಶೇ.73.64ರಷ್ಟಿದೆ.

ಮಹಾರಾಷ್ಟ್ರ, ಪಂಜಾಬ್, ಕರ್ನಾಟಕ, ಛತ್ತೀಸ್‌ಘಡ, ಕೇರಳ ಹಾಗೂ ಗುಜರಾತ್‌ಗಳಲ್ಲಿ ಹೊಸ ಕೊರೊನಾ ಸೋಂಕುಗಳಲ್ಲಿ ಶೇ.80ರಷ್ಟು ಪಾಲಿದೆ.

## ಕೊರೊನಾ ತಡೆಗೆ ಮಾಸ್ಕ್ ಧರಿಸಿ

### ಹರಿಹರ ತಹಶೀಲ್ದಾರ್ ತಂಡದಿಂದ ದಂಡ, ಜಾಗೃತಿ



ಹರಿಹರ, ಮಾ.26- ಕೊರೊನಾ ರೋಗ ಅಧಿಕ ಪ್ರಮಾಣದಲ್ಲಿ ಹರಡುವ ಲಕ್ಷಣಗಳು ಕಾಣಿಸುತ್ತಿದ್ದು, ರೋಗ ಹರಡದಂತೆ ತಡೆಗಟ್ಟಲು ಮಾಸ್ಕ್ ಧರಿಸದೆ ಓಡಾಡುವ ಜನರಿಗೆ ದಂಡವನ್ನು ಹಾಕಲು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಸಿಪಿಐ ಸತೀಶ್ ಕುಮಾರ್, ಪಿಎಸ್‌ಐ ಬಸವರಾಜ್ ತೆಲಿ ತಂಡ ನಗರದ ಪ್ರಮುಖ ರಸ್ತೆಯಲ್ಲಿರುವ ಅಂಗಡಿಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಿದರು.

ಈ ವೇಳೆ ಮಾತನಾಡಿದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಕಳೆದ ಒಂದು ವರ್ಷದಿಂದ ಸಾರ್ವಜನಿಕರ ನೆಮ್ಮದಿ ಹಾಳು ಮಾಡುತ್ತಿರುವ ಕೊರೊನಾ ರೋಗದ ಹೆಮ್ಮಾರಿ ಇತ್ತೀಚಿನ ದಿನಗಳಲ್ಲಿ ಸ್ವಲ್ಪ ಮಟ್ಟಿಗೆ ನಿಯಂತ್ರಣಕ್ಕೆ ಬಂದಿತ್ತು. ಆದರೆ ಮತ್ತೆ ಹೆಚ್ಚಾಗುತ್ತಿದ್ದು, ರೋಗ ತಡೆಗಟ್ಟಲು ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಅನವಶ್ಯಕವಾಗಿ ಓಡಾಡುವುದು, ಜನ ಸಂದಣಿ ಇರುವ ಸ್ಥಳದಲ್ಲಿ ಸೇರುವುದನ್ನು ಬಿಟ್ಟರೆ ಕೊರೊನಾ ರೋಗವನ್ನು ನಿಯಂತ್ರಣ ಮಾಡಲು ಸಾಧ್ಯವಿದೆ. (2ನೇ ಪುಟಕ್ಕೆ)

### ಹೊನ್ನಾಳಿ ಹಿರೇಕಲ್ಮಠ ಅಭಿವೃದ್ಧಿಗೆ ಒಂದು ಕೋಟಿ ರೂ.ಬಿಡುಗಡೆ

**ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಎಂಪಿಆರ್**

ಹೊನ್ನಾಳಿ, ಮಾ.26- ರಾಜ್ಯ ಸರ್ಕಾರ ಹಿರೇಕಲ್ಮಠದ ಅಭಿವೃದ್ಧಿಗೆ ಒಂದು ಕೋಟಿ ಹಣ ಬಿಡುಗಡೆ ಮಾಡಿದ್ದು ,ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ಬಿಡುಗಡೆ ಮಾಡಿಸುವುದಾಗಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಒಡೆಯರ್ ಮೃತ್ಯುಂಜಯ ಸ್ವಾಮಿಗಳ 51ನೇ ವಾರ್ಷಿಕ ಪುಣ್ಯಾರಾಧನೆ, ಒಡೆಯರ್ ಚಂದ್ರಶೇಖರ ಸ್ವಾಮಿಗಳ 6ನೇ ಪುಣ್ಯಸ್ಮರಣೆ ನಿಮಿತ್ತ ಹಮ್ಮಿಕೊಂಡಿದ್ದ ನವೋದ್ಯಮ ಕಾರ್ಯಾಗಾರ 2021 ದತ್ತಿ ಉಪನ್ಯಾಸ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಹಿರೇಮಠದಲ್ಲಿ ಕೃಷಿ ಕಾಲೇಜು ಆರಂಭಿಸಬೇಕೆಂಬುದು ಶ್ರೀಗಳ ಆಸೆಯಾಗಿದ್ದು, ಇದಕ್ಕೆ ಸಂಬಂಧ ಪಟ್ಟಂತೆ ಮುಖ್ಯಮಂತ್ರಿಗಳ ಬಳಿ (2ನೇ ಪುಟಕ್ಕೆ)


## ರಾಜ್‌ಕಮಲ್ ಹೋಟೆಲ್ ಮಾಲೀಕರಾದ ಹನುಮಂತರಾವ್ ಜಾಧವ್ ನಿಧನ



ದಾವಣಗೆರೆ ಕೊಂಡಜ್ಜಿ ರಸ್ತೆಯ ಹನುಮಂತ ನಗರ - ಶಿವಪುರ ವಾಸಿ,

**ಶ್ರೀ ಹನುಮಂತರಾವ್ ಜಾಧವ್** (ರಾಜ್‌ಕಮಲ್) ಅವರು

ದಿನಾಂಕ 26.03.2021ರ ಶುಕ್ರವಾರ ರಾತ್ರಿ 8 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 85 ವರ್ಷ ವಯಸ್ಸಾಗಿತ್ತು. ಮೃತರ ಪಾರ್ಥಿವ ಶರೀರವನ್ನು ಕೊಂಡಜ್ಜಿ ರಸ್ತೆಯ ಹನುಮಂತ ನಗರ - ಶಿವಪುರದಲ್ಲಿರುವ ಅವರ ಸ್ವಗೃಹದಲ್ಲಿ ದಿನಾಂಕ 27.03.2021ರ ಶನಿವಾರ ಮಧ್ಯಾಹ್ನ 1.30 ರವರೆಗೆ ಇಡಲಾಗಿದ್ದು, ನಂತರ ಮಧ್ಯಾಹ್ನ 2 ಗಂಟೆಗೆ ದಾವಣಗೆರೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

✦ ಮೃತರ ಧರ್ಮಪತ್ನಿ : ಶ್ರೀಮತಿ ಲೀಲಾವತಿಬಾಯಿ ಹನುಮಂತರಾವ್ ಜಾಧವ್
✦ ಮಕ್ಕಳಾದ : ಶಿವಾಜಿ ಜಾಧವ್ ✦ ಸೊಸೆ : ಶ್ರೀಮತಿ ರೇಖಾ ಜಾಧವ್
✦ ಶ್ರೀಮತಿ ಕಲಾವತಿ ಜಾಧವ್ ದಾವಣಗೆರೆ. ✦ ಶ್ರೀಮತಿ ಪುಷ್ಪಾ ಮಾನೆ, ದಾವಣಗೆರೆ
✦ ಶ್ರೀಮತಿ ಗೀತಾ ಬಿಸ್ಲೆ, ಚಿಕ್ಕಮಗಳೂರು.
ಮತ್ತು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು, ಮೊ. : 98866 90008

# ಬಿಜೆಪಿ-ಕಾಂಗ್ರೆಸ್ ಬಲಾಬಲ ಪ್ರದರ್ಶನ




ಮಹಾನಗರ ಪಾಲಿಕೆ 20ನೇ ವಾರ್ಡ್‌ನಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಸಂಸದ ಜಿ.ಎಂ. ಸಿದ್ದೇಶ್ವರ ಅವರು ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ನಡೆಸಿದರು.

## ಕಾಂಗ್ರೆಸ್ ಅಭ್ಯರ್ಥಿಯನ್ನು ಬಹುಮತದಿಂದ ಗೆಲ್ಲಿಸಿ : ಎಸ್ಸೆಸ್

**(1ನೇ ಪುಟದಿಂದ)** ಅಣ್ಣಾ ನಗರ ಸೇರಿದಂತೆ ವಾರ್ಡ್‌ನ ಎಲ್ಲಾ ಭಾಗಗಳಲ್ಲಿ ಸ್ಥಳೀಯ ಮುಖಂಡರೊಂದಿಗೆ ರೋಡ್ ಷೋ ನಡೆಸಿ ಬಹಿರಂಗ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಬಿಜೆಪಿಗರ ಅಧಿಕಾರದ ದುರಾಸೆಯಿಂದ ಮತ್ತೆ ಚುನಾವಣೆ ಬಂದಿದೆ. ಈ ಉಪಚುನಾವಣೆಯಲ್ಲೂ ಸಹ ಕಾಂಗ್ರೆಸ್ ಪಕ್ಷವನ್ನು ಒಗ್ಗಟ್ಟಿನ ಮೂಲಕ ಗೆಲ್ಲಿಸಬೇಕೆಂದು ಕರೆ ನೀಡಿದರು.

ಬಿಜೆಪಿ ಪಕ್ಷದವರ ಅಧಿಕಾರ ದಾಹದಿಂದ ದೇಶ ಮತ್ತು ರಾಜ್ಯಗಳು ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲೂ ಇಂದು ಉಪಚುನಾವಣೆ ಎದುರಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ಮಧ್ಯೆ ನೇರ ಹಣಾಹಣಿ ಇರುವುದರಿಂದ ಕಳೆದ ಬಾರಿ ಪಕ್ಷದ ಅಭ್ಯರ್ಥಿಗೆ 2ನೇ ದೊಡ್ಡ ಜಯಭೇರಿ ನೀಡಿದ್ದ ಈ ವಾರ್ಡಿನ ಜನತೆ ಈ ಬಾರಿ ಬಿಜೆಪಿ ಅಭ್ಯರ್ಥಿಗೆ ಠೇವಣಿ ಸಿಗದಂತೆ ಕಾಂಗ್ರೆಸ್ ಅಭ್ಯರ್ಥಿಯನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸಬೇಕೆಂದು ಕರೆ ನೀಡಿದರು.

ಈ ದೇಶದಲ್ಲಿ ಕಾಂಗ್ರೆಸ್ ಪಕ್ಷ ಒಂದೇ ಅಭಿವೃದ್ಧಿ ಚಿಂತನೆ ಮಾಡಲಿದೆ ಎಂಬುದಕ್ಕೆ ಕಳೆದ 7 ವರುಷಗಳ ದುರಾಡಳಿತ ನೋಡಿರುವ ಜನತೆ ಸರ್ಕಾರದ ಜನ ವಿರೋಧಿ ನೀತಿಗಳಿಂದ ಬೇಸತ್ತು ಬೀದಿಗಿಳಿದು ಹೋರಾಟ ನಡೆಸುತ್ತಿರುವುದೇ ಸಾಕ್ಷಿ ಎಂದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಈ ವಾರ್ಡಿನ ಎಲ್ಲರ ಆಶಯದಂತೆ ನೀವೇ ಹೇಳಿದ ಅಭ್ಯರ್ಥಿಗೆ ಪಕ್ಷ ಮಣೆ ಹಾಕಿದ್ದು, ತಾವುಗಳು ಯಾವುದೇ ಆಸೆ ಆಮಿಷಕ್ಕೆ ಒಳಗಾಗದೇ ಸ್ವಾಭಿಮಾನದ ಸಂಕೇತವಾಗಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಮೀನಾಕ್ಷಿ ಜಗದೀಶ್ ಮಾತನಾಡಿ ಈ ಭಾಗದ ಜನರು ಸ್ವಾಭಿಮಾನದ ಪ್ರತೀಕವಾಗಿದ್ದು, ಪ್ರಚಂಡ ಬಹುಮತದಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಶಂಕರ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಜಿಲ್ಲಾ ಪಂಚಾಯತ್ ಸದಸ್ಯ ಕೆ.ಹೆಚ್.ಓಬಳಪ್ಪ, ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸದಸ್ಯ ಜಿ.ಎಸ್. ಮಂಜುನಾಥ್, ಕೆ.ಚಮನ್‌ಸಾಬ್, ಪಾಮೇನಹಳ್ಳಿ ನಾಗರಾಜ್, ಜಿ.ಡಿ.ಪ್ರಕಾಶ್, ಜಾಕೀರ್, ಕಲ್ಲಹಳ್ಳಿ ನಾಗರಾಜ್, ಸೈಯದ್ ಚಾರ್ಲಿ, ಸವಿತಾ ಗಣೇಶ್ ಹುಲ್ಮನಿ, ಸುಧಾ ಇಟ್ಟಿಗುಡಿ ಮಂಜುನಾಥ್, ಶಿವಲೀಲಾ ಕೊಟ್ರಯ್ಯ, ಆಶಾ ಉಮೇಶ್, ಮಾಜಿ ಸದಸ್ಯ ಬಸಪ್ಪ, ಉದ್ಯಮಿ ಕೋಗುಂಡಿ ಬಕ್ಕೇಶಪ್ಪ ಎಪಿಎಂಸಿ ಸದಸ್ಯರಾದ ಮುದೇಗೌಡ್ರು ಗಿರೀಶ್, ದೊಗ್ಗಳ್ಳಿ ಬಸವರಾಜ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಸ್.ಮಲ್ಲಿಕಾರ್ಜುನ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಅನಿತಾಬಾಯಿ ಮಾಲತೇಶ್, ಸುಷ್ಮಾ ಪಾಟೀಲ್, ಅನ್ನಪೂರ್ಣಮ್ಮ, ಬಸಾಪುರ ಕೊಟ್ರಯ್ಯ, ನಗರಸಭೆ ಮಾಜಿ ಅಧ್ಯಕ್ಷ ಎಂ. ಮಂಜುನಾಥ್, ಸ್ಥಳೀಯ ಮುಖಂಡರುಗಳಾದ ವೆಂಕಟೇಶ್ ನಾಯ್ಕ, ಸೊಸೈಟಿ ವೆಂಕಟೇಶನಾಯ್ಕ, ಟಿ.ಡಿ.ಹಾಲೇಶ್, ರಾಕಿ, ರಘು, ಚಂದ್ರು, ದುಗ್ಗೇಶ್, ಅಲೆಕ್ಸಾಂಡರ್(ಜಾನು), ಮುನಿಸ್ವಾಮಿ, ವೀರೇಶ್, ರಾಜಶೇಖರ್ ಬೆಂಡಿಗೇರಿ, ದಾದು, ಮಾದೇಶಣ್ಣ, ಪೆರುಮಾಳ್, ಸಾವನ್, ದಾದಾಪೀರ್ ಮತ್ತಿತರರಿದ್ದರು.

## ನಗರದ ಅಭಿವೃದ್ಧಿಯೇ ಬಿಜೆಪಿ ಮಂತ್ರ : ಸಿದ್ದೇಶ್ವರ

**(1ನೇ ಪುಟದಿಂದ)** ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಉಪ ಚುನಾವಣೆಯಲ್ಲಿ ಈ ಎರಡೂ ವಾರ್ಡ್‌ಗಳಲ್ಲಿ ಬಿಜೆಪಿ ಅತ್ಯಧಿಕ ಮತಗಳಿಂದ ಜಯಗಳಿಸುತ್ತದೆ ಎಂದು ವಿಶ್ವಾಸ ವ್ಯಕ್ತ ಪಡಿಸಿದರು.

ನಗರದ ಸ್ವಚ್ಚತೆ ಹಾಗೂ ಸುಗಮ ಆಡಳಿತ ಬಿ.ಜೆ.ಪಿ. ಪಕ್ಷದ ಮೂಲಮಂತ್ರವಾಗಿದೆ. ಈ ಹಿನ್ನೆಲೆಯಲ್ಲಿ ದಾವಣಗೆರೆ ನಗರವು ಇತ್ತೀಚಿಗೆ ಕೇಂದ್ರ ನಗರಾಭಿವೃದ್ಧಿ ಇಲಾಖೆ ನಡೆಸಿದ ಸರ್ವೆಯಲ್ಲಿ ಇಡೀ ದೇಶದಲ್ಲಿಯೇ ವಾಸ ಮಾಡಲು ಹಿತಕರವಾದ ನಗರ ಎನ್ನುವ ಪಟ್ಟಿಯಲ್ಲಿ 9 ನೇ ಸ್ಥಾನದಲ್ಲಿದೆ. ಇದಕ್ಕೆ ಕಾರಣ ಪಾಲಿಕೆಯಲ್ಲಿ ಆಡಳಿತದಲ್ಲಿರುವ ಭಾರತೀಯ ಜನತಾ ಪಾರ್ಟಿ ಎಂದರೆ ಅತಿಶಯೋಕ್ತಿಯಾಗಲಾರದು ಎಂದು ದಾವಣಗೆರೆ ಮಹಾನಗರ ಪಾಲಿಕೆಯ 20 ನೇ ವಾರ್ಡಿನ ಉಪಚುನಾವಣೆಯ ಬಹಿರಂಗ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ದಾವಣಗೆರೆ ನಗರಕ್ಕೆ ಈಗಾಗಲೇ ಸ್ಮಾರ್ಟ್ ಸಿಟಿ ಯೋಜನೆಯಡಿ 1000 ಕೋಟಿ, ದಿನದ 24 ಗಂಟೆಯೂ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಜಲಸಿರಿ ಯೋಜನೆಯಡಿ 629 ಕೋಟಿ ಅನುದಾನದಲ್ಲಿ ಕಾಮಗಾರಿಗಳು ಭರದಿಂದ ಸಾಗಿವೆ, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ, ಸಾರ್ವಜನಿಕ ಖಾಸಗಿ ಬಸ್ ನಿಲ್ದಾಣ ಕಾಮಗಾರಿ ಜಗಳೂರು ರಸ್ತೆಯ ಬಸ್ ನಿಲ್ದಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಇಡೀ ನಗರಕ್ಕೆ ಕಳಸವಿಟ್ಟಂತೆ 20 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ರೈಲ್ವೆ ನಿಲ್ದಾಣ ಲೋಕಾರ್ಪಣೆಗೆ ಸಿದ್ದವಾಗಿದೆ. ಈ ಎಲ್ಲಾ ಯೋಜನೆಗಳು ಅನುಷ್ಠಾನಗೊಳ್ಳಲು ನಮ್ಮಲ್ಲಿರುವ ಇಚ್ಚಾಶಕ್ತಿ ಹಾಗೂ ಬದ್ದತೆ ಕಾರಣವಾಗಿದೆ, ಅಭಿವೃದ್ದಿಯನ್ನೇ ಮೂಲಮಂತ್ರವನ್ನಾಗಿಸಿ ಕೊಂಡಿರುವ ಬಿ.ಜೆ.ಪಿಗೆ ತಾವುಗಳು ಆಶೀರ್ವಾದ ಮಾಡಿದರೆ ಮಹಾನಗರ ಪಾಲಿಕೆ ಇನ್ನಷ್ಟು ಸುಭದ್ರವಾಗಲಿದೆ ಎಂದರು.

ನಗರಕ್ಕೆ ಮುಖ್ಯಮಂತ್ರಿಗಳು 125 ಕೋಟಿ ರೂ. ಅನುದಾನ ನೀಡಿದ್ದು ಇನ್ನು ಕೆಲವೇ ದಿನಗಳಲ್ಲಿ ಟೆಂಡರ್ ಕರೆದು ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದಲೂ ಕೂಡ ದಾವಣಗೆರೆ ನಗರದ ಅಭಿವೃದ್ದಿಗೆ ನೀಲನಕ್ಷೆ ತಯಾರಿಸಲಾಗಿದ್ದು ದಾವಣಗೆರೆ ನಗರದ ಸುತ್ತ ಇರುವ ಕೆರೆಗಳನ್ನು ಪ್ರವಾಸಿ ತಾಣಗಳನ್ನಾಗಿ ಮಾಡುವ ನಿಟ್ಟಿನಲ್ಲಿ ಪ್ರಾಧಿಕಾರ ದಿಟ್ಟ ಹೆಜ್ಜೆಯನ್ನು ಇಟ್ಟಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತ್ ರಾವ್ ಜಾಧವ್, ಪಾಲಿಕೆ ಮೇಯರ್ ಎಸ್.ಟಿ.ವೀರೇಶ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವ ಕುಮಾರ್, ಅಭ್ಯರ್ಥಿ ಶ್ರೀಮತಿ ರೇಣುಕಾ ಕೃಷ್ಣ, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಎಲ್.ಡಿ.ಗೋಣೆಪ್ಪ, ದೂಡಾ ಸದಸ್ಯೆ ಶ್ರೀಮತಿ ದೇವೀರಮ್ಮ ರಾಮಚಂದ್ರಪ್ಪ, ಪಾಲಿಕೆ ಸದಸ್ಯ ಆರ್.ಎಲ್. ಶಿವಪ್ರಕಾಶ್ ಇತರರು ಉಪಸ್ಥಿತರಿದ್ದರು.

## ಗ್ರಾ.ಪಂ, ಮಹಾ ನಗರಪಾಲಿಕೆ ಚುನಾವಣೆ : ರಜೆ

ದಾವಣಗೆರೆ, ಮಾ.26 - ಮಹಾನಗರ ಪಾಲಿಕೆ ವಾರ್ಡ್ ನಂ.20 ಮತ್ತು 22 ರ ಉಪ ಚುನಾವಣೆ ಹಾಗೂ ವಿವಿಧ ಗ್ರಾಮ ಪಂಚಾಯತ್‌ಗಳಿಗೆ ಮಾ. 29 ರಂದು ಮತದಾನ ನಡೆಯಲಿದ್ದು, ಮತದಾನ ವ್ಯಾಪ್ತಿಯ ಕ್ಷೇತ್ರಗಳ ಮತದಾರರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ರಜೆ ಘೋಷಿಸಲಾಗಿದೆ.

ಮಹಾನಗರ ಪಾಲಿಕೆ ವಾರ್ಡ್ ನಂ.20 ಮತ್ತು 22 ರ ಉಪ ಚುನಾವಣೆ ಹಾಗೂ ಮೇ-2021ರ ಮಾಹೆಯ ವರೆಗೆ ಅವಧಿ ಮುಕ್ತಾಯವಾಗುತ್ತಿರುವ ದಾವಣಗೆರೆ ತಾಲ್ಲೂಕಿನ 37-ಬೇತೂರು, 40-ಕನಗೊಂಡನಹಳ್ಳಿ ಮತ್ತು 41-ಕುಕ್ಕುವಾಡ ಗ್ರಾಮ ಪಂಚಾಯಿತಿಗಳ ಚುನಾವಣೆ ಹಾಗೂ ವಿವಿಧ ಕಾರಣಗಳಿಂದ ಹೊನ್ನಾಳಿ ತಾಲ್ಲೂಕಿನ 7-ಅರಬಗಟ್ಟೆ ಗ್ರಾಮ ಪಂಚಾಯತಿಯ 3-ಸುಂಕದಕಟ್ಟೆ ಕ್ಷೇತ್ರದ ಉಪ ಚುನಾವಣೆ-2021ರ ಸಂಬಂಧ ಮತದಾನ ನಡೆಯುವ ಕ್ಷೇತ್ರಗಳಲ್ಲಿನ ಸರ್ಕಾರಿ ಹಾಗೂ ಖಾಸಗಿ ಶಾಲಾ-ಕಾಲೇಜುಗಳು, ಅನುದಾನಿತ ಹಾಗೂ ಅನುದಾನ ರಹಿತ ವಿದ್ಯಾಸಂಸ್ಥೆಗಳು, ಎಲ್ಲಾ ಶೈಕ್ಷಣಿಕ ಸಂಸ್ಥೆಗಳು, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಚೇರಿಗಳು, ರಾಷ್ಟ್ರೀಕೃತ ಹಾಗೂ ಇತರೆ ಬ್ಯಾಂಕುಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾರ್ಖಾನೆಗಳು, ಉಳಿದ ಕೈಗಾರಿಕಾ ಸಂಸ್ಥೆಗಳು ಹಾಗೂ ಸಹಕಾರಿ ರಂಗದ ಸಂಘ ಸಂಸ್ಥೆಗಳಲ್ಲಿ ಎಲ್ಲಾ ವ್ಯವಹಾರಿಕ ಸಂಸ್ಥೆಗಳಲ್ಲಿ, ಔದ್ಯಮಿಕ ಸಂಸ್ಥೆಗಳಲ್ಲಿ ಮತ್ತು ಇತರೆ ಸ್ಥಾಪಿತ ಸಂಸ್ಥೆಗಳಲ್ಲಿ ಖಾಯಂ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಅರ್ಹ ಮತದಾರ ನೌಕರರಿಗೆ ಸೀಮಿತವಾಗುವಂತೆ ಮಾ.29 ರಂದು ವೇತನ ಸಹಿತ ರಜೆಯನ್ನು ಘೋಷಿಸಿ ಸರ್ಕಾರ ಅಧಿಸೂಚನೆ ಹೊರಡಿಸಿರುತ್ತದೆ.

ಈ ರಜೆಯು ತುರ್ತು ಸೇವೆಗಳ ಮೇಲೆ ಇರುವ ಸರ್ಕಾರಿ ನೌಕರರಿಗೆ ಅನ್ವಯಿಸುವುದಿಲ್ಲ. ಆದಾಗ್ಯೂ ಕೂಡ ತುರ್ತು ಸೇವೆಯಡಿ ಕೆಲಸ ಮಾಡುವ ನೌಕರರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಆಯಾ ಇಲಾಖೆಯ ಮುಖ್ಯಸ್ಥರು ವ್ಯವಸ್ಥೆ ಮಾಡಬೇಕು. ಚುನಾವಣಾ ಕಾರ್ಯಗಳಿಗೆ ನಿಯೋಜಿಸಲ್ಪಟ್ಟ ಎಲ್ಲಾ ಸರ್ಕಾರಿ ನೌಕರರು ಚುನಾವಣಾ ಕಾರ್ಯಕ್ಕೆ ಹಾಜರಾಗಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

## ಬಂಧನದ ಭೀತಿ

**(1ನೇ ಪುಟದಿಂದ)** ಬೇಕೋ ಹಾಗೆ ಬಳಸಿಕೊಂಡು ಈಗ ಯಾಕೆ ಕೆಲಸ ಕೊಡಿಸುತ್ತಿಲ್ಲ ಎಂದು ಕೇಳಿದಾಗ, ನಿಂದಿಸಿ ಬೈದು ಕಳುಹಿಸಿದರು. ಇದಾದ ನಂತರ ಅವರು ನನ್ನೊಂದಿಗೆ ಮಾತನಾಡಿದ ಮತ್ತು ಲೈಂಗಿಕ ಸಂಭೋಗ ನಡೆಸಿದ ಅಶ್ಲೀಲ ವಿಡಿಯೋ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ ಎಂದು ಯುವತಿ ದೂರಿನಲ್ಲಿ ಹೇಳಿದ್ದಾರೆ.

ರಮೇಶ್ ಜಾರಕಿಹೊಳಿ ಅವರಿಂದ ನನಗೂ ಮತ್ತು ನನ್ನ ಕುಟುಂಬದ ಸದಸ್ಯರಿಗೂ ಜೀವ ಭಯವಿದೆ. ರಕ್ಷಣೆ ನೀಡುವಂತೆಯೂ ಅವರು ಕೋರಿದ್ದಾರೆ.

ವಕೀಲರು ಸಲ್ಲಿಸಿರುವ ದೂರನ್ನು ಪೊಲೀಸಿನವರು ಸೆಕ್ಷನ್ 376 ಸಿ, ಮತ್ತು ಇತರೆ ಕಲಂಗಳ ಅಡಿ ಎಫ್‌ಐಆರ್ ದಾಖಲಿಸಬಹುದಾಗಿದೆ.

ಎಫ್‌ಐಆರ್ ದಾಖಲಿಸಿದ ತಕ್ಷಣ ತನಿಖಾಧಿಕಾರಿಗಳು ರಮೇಶ್ ಜಾರಕಿಹೊಳಿ ಅವರನ್ನು ವಶಕ್ಕೆ ಪಡೆದು, ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ.

ದೂರು ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಕೀಲ ಜಗದೀಶ್, ನಮ್ಮಿಂದ ನ್ಯಾಯ ದೊರಕಬಹುದೆಂಬ ಉದ್ದೇಶದಿಂದ ಹುಡುಗಿ ದೂರಿನ ಪತ್ರವನ್ನು ದಾಖಲಿಸುವ ಹೊಣೆಗಾರಿಕೆ ನೀಡಿದ್ದರು ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸರ್ಕಾರ, ಪೊಲೀಸಿನವರು ಹಾಗೂ ಎಸ್‌ಐಟಿ ಅಧಿಕಾರಿಗಳು ಆಕೆ ಮತ್ತು ಅವರ ಕುಟುಂಬಕ್ಕೆ ರಕ್ಷಣೆ ನೀಡುತ್ತಾರೆ ಎಂಬ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ.

## ಹಿರೇಕಲ್ಮಠ ಅಭಿವೃದ್ಧಿಗೆ ಒಂದು ಕೋಟಿ ರೂ.ಬಿಡುಗಡೆ



**(1ನೇ ಪುಟದಿಂದ)** ಚರ್ಚೆ ಕೂಡ ನಡೆಸಲಾಗಿದೆ. ಈಗಾಗಲೇ ಸರ್ಕಾರದಿಂದ ಶಿವಮೊಗ್ಗದ ಕೃಷಿ ವಿಶ್ವವಿದ್ಯಾಲಯಕ್ಕೆ ಮಾಹಿತಿ ಕಳುಹಿಸಿಕೊಟ್ಟಿದ್ದು, ಕೆಲ ತಾಂತ್ರಿಕ ತೊಂದರೆಯಿಂದ ವಿಳಂಬವಾಗಿದೆ. ಶೀಘ್ರವೇ ಕೃಷಿ ಕಾಲೇಜು ಮಂಜೂರು ಮಾಡಿಸುವುದಾಗಿ ತಿಳಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ್ ಮಾತನಾಡಿ, ಶ್ರೀ ಮಠವು ಜ್ಞಾನ ದಾಸೋಹದ ಜೊತೆಗೆ ಕಲೆ, ಸಂಸ್ಕೃತಿಗೆ ಹೆಚ್ಚಿನ ಒತ್ತು ನೀಡುತ್ತಾ ಬರುತ್ತಿದೆ ಎಂದರು. ಪ್ರತಿವರ್ಷ ಮಠದಲ್ಲಿ ಸರಳ ವಿವಾಹ ಮಠದಲ್ಲಿ ನಡೆಸುತ್ತಿದ್ದು, ಪ್ರತಿವರ್ಷ ಮಠದಲ್ಲಿ ಪಾಲ್ಗೊಳ್ಳುತ್ತಿದ್ದೇನೆ ಎಂದರು. ನವ ಜೋಡಿಗಳಿಗೆ ಶುಭ ಕೋರಿ, ಕಿವಿ ಮಾತು ಹೇಳಿದರು. ಕೊರೊನಾ ಕಾರಣದಿಂದ ಸರಳವಾಗಿ ಆಚರಿಸುತ್ತಿದ್ದು, ಸರ್ಕಾರದ ನಿಯಮಗಳನ್ನು ಪಾಲಿಸಿ ಎಂದು ಕರೆ ನೀಡಿದರು. ಮಾಜಿ ಶಾಸಕ ಶಾಂತನಗೌಡರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಒಡೆಯರ್ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಶಿವಕುಮಾರ ರಾಂಪುರ ಬೃಹನ್ಮಠದ ಹಾಲಸ್ವಾಮಿಗಳು, ಕರ್ಜಗಿ ಗೌರಿಮಠದ ಶ್ರೀ ಶಿವಯೋಗಿ ಸ್ವಾಮಿಗಳು ಉಪಸ್ಥಿತರಿದ್ದರು.

## ಹಾಡುಹಗಲೇ ಮನೆಗಳ್ಳತನ: ಚಿನ್ನಾಭರಣ-ನಗದು ಕಳವು

ದಾವಣಗೆರೆ, ಮಾ.26- ಹಾಡುಹಗಲೇ ಮನೆ ಬಾಗಿಲು ಮುರಿದು ಕಳ್ಳತನ ಮಾಡಿರುವ ಘಟನೆ ಇಲ್ಲಿನ ಹಳೇ ಕುಂದುವಾಡದಲ್ಲಿ ನಡೆದಿದೆ.

ಹಳೇ ಕುಂದವಾಡದ ಶಿವಣ್ಣ ಎಂಬುವರು ಕುಟುಂಬ ಸಮೇತ ಗುರುವಾರ ಮಧ್ಯಾಹ್ನ ಲೋಕಿಕೆರೆ ಗ್ರಾಮಕ್ಕೆ ಹಬ್ಬಕ್ಕೆಂದು ಹೋಗಿದ್ದರು. ಈ ವೇಳೆ ಯಾರೂ ಇಲ್ಲದ್ದನ್ನು ಗಮನಿಸಿದ ಕಳ್ಳರು ಬಾಗಿಲು ಮುರಿದು ಮನೆಯೊಳಗೆ ಪ್ರವೇಶಿಸಿ, ಗಾಡ್ರೇಜ್ ಮುರಿದು 1 ಲಕ್ಷ ರೂ. ಮೌಲ್ಯದ 20 ಗ್ರಾಂ ಚಿನ್ನಾಭರಣ ಮತ್ತು 10 ಸಾವಿರ ನಗದನ್ನು ಕಳವು ಮಾಡಿ ಪರಾರಿಯಾಗಿದ್ದಾರೆ. ಶಿವಣ್ಣ ಜಾತ್ರೆ ಮುಗಿಸಿಕೊಂಡು ಮನೆಗೆ ಬಂದಾಗ ಕಳ್ಳತನದ ಕೃತ್ಯ ಬೆಳಕಿಗೆ ಬಂದಿದೆ. ಘಟನಾ ಸ್ಥಳದಲ್ಲಿ ಶ್ವಾನ ದಳ ಪರಿಶೀಲನೆ ನಡೆಸಿದೆ. ಈ ಸಂಬಂಧ ವಿದ್ಯಾ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಈಜಲು ಹೋದ ಯುವಕ ನೀರು ಪಾಲು

ದಾವಣಗೆರೆ, ಮಾ.26- ಈಜಲು ಹೋಗಿ ಹೊಳೆಯಲ್ಲಿ ಮುಳುಗಿ ಯುವಕನೋರ್ವ ಸಾವನ್ನಪ್ಪಿದ ಘಟನೆ ಹರಪನಹಳ್ಳಿ ತಾಲ್ಲೂಕಿನ ಕಡತಿ ಗ್ರಾಮದಲ್ಲಿ ನಡೆದಿದೆ. ಹರ್ನಾಳು ಗ್ರಾಮದ ಅರುಣ (22) ಸಾವನ್ನಪ್ಪಿದ ಯುವಕ.

ಕಡತಿ ಗ್ರಾಮದಲ್ಲಿ ಗುರುವಾರ ಜಾತ್ರೆ ಇದ್ದ ಹಿನ್ನೆಲೆಯಲ್ಲಿ ಜಾತ್ರೆಗೆ ಯುವಕ ಬಂದಿದ್ದ. ಕಡತಿ ಗ್ರಾಮದ ಪಕ್ಕದಲ್ಲಿರುವ ತುಂಗಭದ್ರಾ ಹೊಳೆಯಲ್ಲಿ ಈಜಲು ಹೋದಾಗ ನೀರಿನಲ್ಲಿ ಕೊಚ್ಚಿ ಹೋಗಿದ್ದಾನೆ.

ಯುವಕನ ಮೃತದೇಹವನ್ನು ಅಗ್ನಿಶಾಮಕ ಸಿಬ್ಬಂದಿ ಹುಡುಕಾಟ ನಡೆಸಿದರು. ಬಹಳ ಸಮಯದ ನಂತರ ಮೃತದೇಹ ಪತ್ತೆಯಾಗಿದೆ. ಸ್ಥಳಕ್ಕೆ ಹಲವಾಗಲು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಯುವಕನ ಮೃತದೇಹವನ್ನು ನೋಡಿ ಆತನ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಹಲವಾಗಿಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗಾಂಜಾ ವಶ : ಬಂಧನ


ದಾವಣಗೆರೆ, ಮಾ.26- ಪ್ರತ್ಯೇಕ ಎರಡು ಪ್ರಕರಣಗಳಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳು ನಗರದಲ್ಲಿ ಒಟ್ಟು 390 ಗ್ರಾಂ ಒಣ ಗಾಂಜಾ ಹಾಗೂ ಒಂದು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡು ಇಬ್ಬರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಹೊಸಪೇಟೆ ವಿಭಾಗದ ಅಬಕಾರಿ ಜಂಟಿ ಆಯುಕ್ತರ ನಿರ್ದೇಶನದ ಮೇರೆಗೆ ಅಬಕಾರಿ ಉಪ ಆಯುಕ್ತ ಬಿ.ಶಿವಪ್ರಸಾದ್ ಮಾರ್ಗದರ್ಶನದಲ್ಲಿ ಅಬಕಾರಿ ಉಪಾ ಧೀಕ್ಷಕ ಕೆ.ಎಲ್. ನಾಗರಾಜ್ ನೇತೃತ್ವದಲ್ಲಿ ಅಬಕಾರಿ ನಿರೀಕ್ಷಕಿ ಜಿ.ಬಿ. ವಿದ್ಯಾ ರಾಷ್ಟ್ರೀಯ ಹೆದ್ದಾರಿ-4 ರಸ್ತೆಯ ಪಕ್ಕದಲ್ಲಿರುವ ಹಳೇ ಕುಂದುವಾಡ ಗ್ರಾಮದಿಂದ ದಾವಣಗೆರೆ ಕಡೆ ಹೋಗುವ ಸರ್ವೀಸ್ ರಸ್ತೆಯ ಹತ್ತಿರ ದಾಳಿ ನಡೆಸಿ, ಬಾಷಾ ನಗರದ ಹೊನ್ನೂರ್ ಅಲಿ ಎಂಬಾತನನ್ನು ಬಂಧಿಸಿದ್ದು, ಈತ ಅಕ್ರಮವಾಗಿ 280 ಗ್ರಾಂ ಒಣ ಗಾಂಜಾವನ್ನು ಮಾರಾಟ ಮಾಡುತ್ತಿದ್ದಾಗ ಪತ್ತೆ ಹಚ್ಚಿದ್ದಾರೆ.

ಅಂತೆಯೇ ಅಬಕಾರಿ ನಿರೀಕ್ಷಕ ವಿನೋದ್ ಕಳಸಪ್ಪ ಗೋಳ್ ಮತ್ತು ಸಿಬ್ಬಂದಿಗಳ ತಂಡವು ನಗರದ ಹದಡಿ ರಸ್ತೆಯ ರಾಷ್ಟ್ರೀಯ ಹೆದ್ದಾರಿ-4ರ ಬ್ರಿಡ್ಜ್ ಕೆಳಭಾಗದಲ್ಲಿ ಹದಡಿ ಕಡೆಯಿಂದ ನಗರದ ಕಡೆಗೆ ಬರುವ ರಸ್ತೆಯಲ್ಲಿ ದಾಳಿ ನಡೆಸಿ, ಹಿರಿಯೂರು ತಾಲ್ಲೂಕಿನ ಕೆ.ಎಂ. ಕೊಟ್ಟಿಗೆ ಗ್ರಾಮದ ಫಸಲ್ ಎಂಬಾತನನ್ನು ಬಂಧಿಸಿದ್ದು, ಈತ ದ್ವಿಚಕ್ರ ವಾಹನದಲ್ಲಿ ಮಾರಾಟದ ಉದ್ದೇಶಕ್ಕಾಗಿ 110 ಗ್ರಾಂ ಒಣಗಿದ ಕಡ್ಡಿ ಹಾಗೂ ಬೀಜ ಮಿಶ್ರಿತ ಗಾಂಜಾ ಸೊಪ್ಪನ್ನು ಹೊಂದಿರುವುದನ್ನು ಪತ್ತೆ ಹಚ್ಚಿದ್ದಾರೆ.

ಈ ಎರಡೂ ಪ್ರಕರಣಗಳಿಂದ ಒಟ್ಟು 390 ಗ್ರಾಂ ಒಣ ಗಾಂಜಾವನ್ನು ವಶಪಡಿಸಿಕೊಂಡಿದ್ದು, ಅಂದಾಜು 7,750 ರೂ. ಮೌಲ್ಯದ ಗಾಂಜಾ ಮತ್ತು ದ್ವಿಚಕ್ರ ವಾಹನ ವಶಪಡಿಸಿಕೊಂಡು ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿರುವುದಾಗಿ ಜಿಲ್ಲೆಯ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಬಿ. ಶಿವಪ್ರಸಾದ್ ತಿಳಿಸಿದ್ದಾರೆ.

## ಹಳೇಬಾತಿ ಬಳಿಯ ರಸ್ತೆ ಅಪಘಾತದಲ್ಲಿ ಹಳೇಕುಂದುವಾಡದ ಬೈಕ್ ಸವಾರನ ಸಾವು



ದಾವಣಗೆರೆ,ಮಾ.26- ನಗರದ ರಾಷ್ಟ್ರೀಯ ಹೆದ್ದಾರಿ 4ರ ಹಳೇಬಾತಿಯ ಬ್ರಿಡ್ಜ್ ಬಳಿ ಇಂದು ರಾತ್ರಿ 11.30ರ ಸಮಯದಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಹಳೇಕುಂದುವಾಡದ ರೈತ ಮಿಟ್ಲಕಟ್ಟೆ ಮಲ್ಲಿಕಾರ್ಜುನ ಮೃತಪಟ್ಟಿದ್ದಾರೆ.

ಕಾರ್ಯ ನಿಮಿತ್ತ ಹರಿಹರಕ್ಕೆ ಹೋಗಿ, ವಾಪಸ್ ತಮ್ಮ ಮೋಟಾರ್ ಬೈಕಿನಲ್ಲಿ ಹಳೇಬಾತಿ ಮುಖಾಂತರ ಹಳೇಕುಂದುವಾಡಕ್ಕೆ ಬರುತ್ತಿದ್ದ ಸಂದರ್ಭದಲ್ಲಿ ಕೆಟ್ಟು ನಿಂತಿದ್ದ ಲಾರಿಗೆ ಅಪ್ಪಳಿಸಿದ ಪರಿಣಾಮವಾಗಿ ಈ ಅಪಘಾತ ನಡೆದಿದೆ ಎಂದು ಹೇಳಲಾಗಿದೆ.

ಮೃತರಿಗೆ ಸುಮಾರು 45 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 27ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಹಳೇಕುಂದುವಾಡದಲ್ಲಿ ನಡೆಯಲಿದೆ.

## ಮಗುಚಿ ಬಿದ್ದ ಟ್ರ್ಯಾಕ್ಟರ್: ಚಾಲಕ ಬಚಾವ್




ದಾವಣಗೆರೆ, ಮಾ.26- ಚಲಿಸುತ್ತಿದ್ದ ಟ್ರ್ಯಾಕ್ಟರ್ ಚಾಲನೆಯ ನಿಯಂತ್ರಣ ತಪ್ಪಿ ಹೊಲದಲ್ಲಿ ಮಗುಚಿ ಬಿದ್ದ ಪರಿಣಾಮ ಅದರ ಅಡಿ ಸಿಲುಕಿದ್ದ ಚಾಲಕನೋರ್ವ ಗ್ರಾಮಸ್ಥರ ಸಮಯ ಪ್ರಜ್ಞೆಯಿಂದ ಪವಾಡ ಸದೃಶ ರೀತಿಯಲ್ಲಿ ಪಾರಾಗಿರುವ ಘಟನೆ ಹರಿಹರ ತಾಲ್ಲೂಕಿನ ಇಂಗಳಗುಂದಿ ಬಳಿ ನಡೆದಿದೆ.

ಬದುಕಿರೋ ಯುವಕನನ್ನು ಇಂಗಳಗುಂದಿ ಗ್ರಾಮದ ಯೋಗೇಶ್ ಎಂದು ಹೇಳಲಾಗಿದೆ. ಇಂಗಳಗುಂದಿಯಿಂದ ಹುಲಿಗಿನಹೊಳೆಯ ಬಸವೇಶ್ವರ ಜಾತ್ರೆಗೆ ಹೊರಟಿದ್ದ ಯುವಕ ವೇಗವಾಗಿ ಹೋಗುತ್ತಿರುವಾಗ ನಿಯಂತ್ರಣ ತಪ್ಪಿದ ಟ್ರ್ಯಾಕ್ಟರ್ ಭತ್ತದ ಗದ್ದೆಗೆ ಉರುಳಿದ ಬೆನ್ನಲ್ಲೇ ಇಂಜಿನ್ ಅಡಿ ಯುವಕ ಸಿಲುಕಿ ಅರ್ಧಗಂಟೆಗೂ ಅಧಿಕ ಕಾಲ ಸಾವು - ಬದುಕಿನ ಮಧ್ಯ ಹೋರಾಟ ನಡೆಸುತ್ತಾ ನರಳಾಡಿದ್ದಾನೆ. ಇದನ್ನು ಗಮನಿಸಿದ ಗ್ರಾಮಸ್ಥರು ಜೆಸಿಬಿ ಸಹಾಯದಿಂದ ಟ್ರ್ಯಾಕ್ಟರ್ ಮೇಲೆತ್ತಿ ಯುವಕನನ್ನು ಬದುಕಿಸಿದರು.

## ಕೊರೊನಾ ತಡೆಗೆ ಮಾಸ್ಕ್ ಧರಿಸಿ

**(1ನೇ ಪುಟದಿಂದ)** ಸಾರ್ವಜನಿಕರು ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಮೂಲಕ ಕೊರೊನಾ ರೋಗವನ್ನು ತಡೆಗಟ್ಟಲು ಸಹಕರಿಸಬೇಕು ಎಂದು ಹೇಳಿದರು. ಈಗಾಗಲೇ ಸರ್ಕಾರದ ಆದೇಶವನ್ನು ಪಾಲಿಸಲು ಎಲ್ಲಾ ವಾಹನಗಳಲ್ಲಿ ಓಡಾಡುವ ಸವಾರರಿಗೆ, ಅಂಗಡಿಯ ಮಾಲೀಕರಿಗೆ, ಸರ್ಕಾರಿ ಕಚೇರಿಯ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಮಾಸ್ಕ್ ಧರಿಸಿ, ಕೆಲಸ ಮಾಡುವಂತೆ ಸೂಚನೆ ನೀಡಲಾಗಿದೆ. ನಿರ್ಲಕ್ಷ್ಯ ತೋರಿದವರ ಮೇಲೆ ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಹೇಳಿದರು.

## ಹತ್ತು ಸಿಡಿ ಬಂದರೂ ಎದುರಿಸುತ್ತೇನೆ

**(1ನೇ ಪುಟದಿಂದ)** ಬಯಲು ಮಾಡುತ್ತೇನೆ ಎಂದು ರಮೇಶ್ ಕಿಡಿಕಾರಿದ್ದಾರೆ.

ಮೈ ಮಾರಿಕೊಳ್ಳುವ ವ್ಯಕ್ತಿಯಿಂದ ನಾನು ಪಾಠ ಕಲಿಯಬೇಕಿಲ್ಲ. ಸಮಾಜ ಸೇವೆಯಲ್ಲಿ ಇದ್ದೇನೆ, ಸಕ್ರಿಯ ರಾಜಕೀಯದಲ್ಲಿದ್ದೇನೆ. ನನ್ನ ವಿರುದ್ಧ ನಡೆದಿರುವ ಪಿತೂರಿಯ ಹಿಂದಿರುವ ಕಿಂಗ್‌ಪಿನ್ ಅನ್ನು ಜೈಲಿಗೆ ಕಳಿಸದೇ ಬಿಡುವುದಿಲ್ಲ ಎಂದು ಅವರು ಹೇಳಿದ್ದಾರೆ. ದೂರಿಗೆ ಸಂಬಂಧಿಸಿದಂತೆ ವಕೀಲರ ಜತೆ ಸಮಾಲೋಚನೆ ನಡೆಸಿದ್ದೇನೆ. ನನ್ನ ವಿರುದ್ಧ ದಾಖಲಾಗುವ ಎಫ್‌ಐಆರ್ ಬಗ್ಗೆ ಮೊದಲು ತನಿಖೆ ನಡೆಸುವಂತೆ ಪೊಲೀಸರನ್ನು ಕೋರುತ್ತೇನೆ. ಅವರು ಕರೆದಾಗ ವಿಚಾರಣೆಗೆ ಹಾಜರಾಗುತ್ತೇನೆ. ತನಿಖೆ ಮುಗಿದು, ಸತ್ಯಾಂಶ ಹೊರಬರಲಿ ಎಂದವರು ಹೇಳಿದ್ದಾರೆ.

ನಾನು ತಪ್ಪೇ ಮಾಡಿಲ್ಲ. ನಾನ್ಯಾಕೆ ಹೆದರಲಿ? ಈ ಸಿಡಿಯ ಹಿಂದೆ ಇರುವ ಮಹಾನ್ ವ್ಯಕ್ತಿಯ ಹೆಸರು ಬಹಿರಂಗಪಡಿಸುವಂತೆ ಮುಖ್ಯಮಂತ್ರಿ ಹಾಗೂ ಗೃಹ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದ್ದೇನೆ. ಆದರೆ, ಇದುವರೆಗೂ ಅವರು ಆ ಮಹಾನ್ ನಾಯಕನ ಹೆಸರು ಬಹಿರಂಗ ಮಾಡಿಲ್ಲ. ನಾನೇ ಇದನ್ನು ಬಹಿರಂಗ ಮಾಡುತ್ತೇನೆ. ಇನ್ನು ಅವರ ಆಟ ಮುಗಿಯಿತು. ನನ್ನ ಆಟ ಶುರುವಾಗಲಿದೆ. ಮುಂದೆ ನೋಡಿ ಎಂದು ಜಾರಕಿಹೊಳಿ ಹೇಳಿದ್ದಾರೆ.


॥ ಶ್ರೀ ಬಸವೇಶ್ವರ ಪ್ರಸನ್ನ ॥ ॥ ಶ್ರೀ ಮೈಲಾರ ಲಿಂಗೇಶ್ವರ ಪ್ರಸನ್ನ ॥

**ಹರ ಗಣಾರಾಧನೆ ಆಹ್ವಾನ ಪತ್ರಿಕೆ**



ಹರಿಹರ ತಾಲ್ಲೂಕು ಸಂಕ್ಲೀಪುರ ಗ್ರಾಮದ ವಾಸಿ,
**ಶ್ರೀಮತಿ ಚಿಂದಿಗೌಡ್ರು ಚಂದ್ರಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 19-03-2021ನೇ ಶುಕ್ರವಾರ ಬೆಳಿಗ್ಗೆ 9-40ಕ್ಕೆ ನಮ್ಮ ಪೂಜ್ಯ ಪತಿಯವರಾದ
**ಶ್ರೀ ಚಿಂದಿಗೌಡ್ರ ನಂಜಪ್ಪ**
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಹರ ಗಣಾರಾಧನೆ'ಯನ್ನು**
**ದಿನಾಂಕ 27.03.2021ನೇ ಶನಿವಾರ ಬೆಳಿಗ್ಗೆ 10.30 ಕ್ಕೆ**
**ಹರಿಹರ ತಾಲ್ಲೂಕು, ಸಂಕ್ಲೀಪುರ ಗ್ರಾಮದಲ್ಲಿರುವ**
**ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಚಂದ್ರಮ್ಮ ✦ ಶ್ರೀಮತಿ ಲತಾ, ದಿ॥ ರಾಜಪ್ಪ ಮತ್ತು ಮಕ್ಕಳು, ಮಿಟ್ಲಕಟ್ಟೆ
✦ ಶ್ರೀಮತಿ ಪುಷ್ಪಾ, ಶ್ರೀ ಚಿಂದಿಗೌಡ್ರ ಜಗದೀಶ ಮತ್ತು ಮಕ್ಕಳು ✦ ಶ್ರೀಮತಿ ನಂದಿನಿ, ಶ್ರೀ ಚಿಂದಿಗೌಡ್ರ ಬಸವನಗೌಡ ಮತ್ತು ಮಕ್ಕಳು
✦ ಶ್ರೀಮತಿ ಕಾವ್ಯ, ದಿ॥ ಚಿಂದಿಗೌಡ್ರು ವಿಜಯಕುಮಾರ ಮತ್ತು ಮಕ್ಕಳು ✦ ಎಸ್.ಕೆ. ರುದ್ರಪ್ಪ ಚಿಂದಿಗೌಡ್ರು, KEB ಮತ್ತು ಸಹೋದರರು ಹಾಗೂ ಮಕ್ಕಳು
✦ ಕೊಟ್ರಪ್ಪ ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು ✦ ಸಿ. ನಾಗೇಂದ್ರಪ್ಪ ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು
✦ ಸಿ.ಎನ್. ಬಸವನಗೌಡ್ರು ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು ✦ ಜಿ.ಎಂ. ನಾಗನಗೌಡ್ರು ಗುಡದಹಳ್ಳಿ ಮತ್ತು ಸಹೋದರರು ಹಾಗೂ ಮಕ್ಕಳು
✦ ಚಿಂದಿಗೌಡ್ರ ನಿಂಗಪ್ಪ ಮತ್ತು ಸಹೋದರರು ಹಾಗೂ ಮಕ್ಕಳು ✦ ಸಿ.ಆರ್. ಚನ್ನಬಸಪ್ಪ ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು
✦ ಸಿ.ಎನ್. ಪರಮೇಶ್ವರಪ್ಪ ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು ✦ ಸಿ.ಎಸ್. ಪರಮೇಶ್ವರಪ್ಪ ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು
✦ ಗಣೇಶ್ ಬಿ.ಕೆ. ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು, ಮಾಲೀಕರು, ಶ್ರೀ ಅನ್ನಪೂರ್ಣೇಶ್ವರಿ ಹೋಟೆಲ್, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ.
ಹಾಗೂ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಚಿಂದಿಗೌಡ್ರ ವಂಶಸ್ಥರು, ಸಂಕ್ಲೀಪುರ ಹಾಗೂ ಅಪಾರ ಬಂಧು-ಮಿತ್ರರು. ಮೊ. : 78290 11762

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ನೇತ್ರದಾನಿ ಶರಣಯ್ಯ ಹೆಚ್.ಎಂ. ವಡೇರಹಳ್ಳಿಮಠ ನಿಧನ**




ದಾವಣಗೆರೆ ತಾಲ್ಲೂಕು ಹುಣಸೇಕಟ್ಟೆ ಗ್ರಾಮದ ವಾಸಿ ನೇತ್ರದಾನಿ
**ಶರಣಯ್ಯ ಹೆಚ್.ಎಂ. ವಡೇರಹಳ್ಳಿಮಠ (86)**
ಅವರು ದಿನಾಂಕ 26.03.2021 ರಂದು ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಮೂವರು ಪುತ್ರರು, ಸಹೋದರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.03.2021 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಹುಣಸೇಕಟ್ಟೆ ಗ್ರಾಮದಲ್ಲಿ ನೆರವೇರಲಿದೆ.
ಇಂತಿ ದುಃಖತಪ್ತರು
**99009 06773, 73490 38176**



॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ ಆಂಜನೇಯ ಬಡಾವಣೆ ವಾಸಿ,
ದಿ॥ ಶ್ರೀ ಎ.ಆರ್. ಇಂದ್ರರಾಜಪ್ಪನವರ
ಧರ್ಮಪತ್ನಿ ಶ್ರೀಮತಿ ಸುವರ್ಣಮ್ಮ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 15.03.2021ನೇ ಸೋಮವಾರ
ಬೆಳಿಗ್ಗೆ 07.35 ಗಂಟೆಗೆ ನನ್ನ ಪತಿಯವರಾದ
**ಶ್ರೀ ಎ.ಆರ್. ಇಂದ್ರರಾಜಪ್ಪ**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 27.03.2021ನೇ ಶನಿವಾರ ಬೆಳಿಗ್ಗೆ 10.30 ಕ್ಕೆ ನಿವೃತ್ತ ನೌಕರರ ಭವನ, ಎಂ.ಸಿ.ಸಿ. 'ಬಿ' ಬ್ಲಾಕ್, 12ನೇ ಕ್ರಾಸ್, ಬಾಪೂಜಿ ಹೈಸ್ಕೂಲ್ ಹತ್ತಿರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು,
✦ ಶ್ರೀಮತಿ ಸುವರ್ಣಮ್ಮನವರು ✦ ಶ್ರೀಮತಿ ಪದ್ಮ ಹೇಮಂತ ಐ.ಆರ್.
✦ ಶ್ರೀಮತಿ ಸುಧಾ ಕೆ.ಸಿ. ಬಸವರಾಜ್ ✦ ಶ್ರೀಮತಿ ಸುಮ ಜಿ. ಲಿಂಗರಾಜ್
✦ ಶ್ರೀಮತಿ ಆಶಾ, ವಿ.ಜಿ. ನರೇಂದ್ರ ✦ ಶ್ರೀ ಎ.ಆರ್. ಮುರುಗೇಂದ್ರಪ್ಪ
✦ ಶ್ರೀ ಎ.ಆರ್. ತೋಟಪ್ಪ ✦ ಶ್ರೀ ಎ.ಆರ್. ಉಜ್ಜನಪ್ಪ ✦ ಶ್ರೀ ಎ.ಆರ್. ಸಿದ್ದಪ್ಪ
✦ ಶ್ರೀ ಎ.ಆರ್. ರೇವಣಸಿದ್ದಪ್ಪ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಆನೆಕೊಂಡ ರೇವಕ್ಕ ವಂಶಸ್ಥರು ಹಾಗೂ
✦ ಶಾಮನೂರು ಗಿರಿಯವ್ವಳರ ವಂಶಸ್ಥರು ಮತ್ತು ಬಂಧು-ಮಿತ್ರರು.


## ಕ್ಷುಲ್ಲಕ ಕಾರಣ: ಕೊಲೆಗೆ ಯತ್ನ

ದಾವಣಗೆರೆ, ಮಾ.26- ಕ್ಷುಲ್ಲಕ ಕಾರಣಕ್ಕೆ ಸ್ನೇಹಿತರಿಬ್ಬರ ನಡುವೆ ಜಗಳ ನಡೆದು ಸ್ನೇಹಿತನ ಕೊಲೆಗೆ ಯತ್ನಿಸಿದ ಘಟನೆ ಇಲ್ಲಿನ ಕೆಟಿಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿಂದು ನಡೆದಿದೆ.

ಸೈಯದ್ ಅಫ್ರಿದಿ ಹಲ್ಲೆಗೊಳಗಾದವ. ಸ್ನೇಹಿತ ನೂರುಲ್ಲಾ ಎಂಬಾತ ಮಾರಣಾಂತಿಕವಾಗಿ ಹಲ್ಲೆ ಮಾಡಿ, ಕೊಲೆಗೆ ಯತ್ನಿಸಿದ್ದಾನೆ ಎನ್ನಲಾಗಿದೆ. ಈ ಇಬ್ಬರು ಕೆಟಿಜೆ ವಾಸಿಗಳು. ಹಲ್ಲೆಗೊಳಗಾದ ಸೈಯದ್ ಅಫ್ರಿದಿ ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಈತ ಚೇತರಿಸಿಕೊಳ್ಳುತ್ತಿದ್ದಾನೆ. ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ನೂರುಲ್ಲಾ ವಿರುದ್ಧ ದೂರು ದಾಖಲಾಗಿದೆ.

# ವಿದ್ಯಾ ದೇಗುಲಕ್ಕೊಂದು ನಮನ



'ಆಚಾರ್ಯ ದೇವೋಭವ' ಎಂಬ ಉಕ್ತಿಯಂತೆ, ಪುರಾತನ ಕಾಲದಿಂದಲೂ ನಮ್ಮ ಸಂಸ್ಕೃತಿಯಲ್ಲಿ ಗುರುಗಳಿಗೆ ಉನ್ನತ ಸ್ಥಾನವಿದೆ. 'ವಿದ್ಯೆ ಇಲ್ಲದವನ ಮುಖ ಹದ್ದಿಗೆ ಸಮಾನ' ಎಂಬ ಸರ್ವಜ್ಞನ ನುಡಿಯಂತೆ ವಿದ್ಯೆ ಮಕ್ಕಳ ಜೀವನದ ಒಂದು ಉನ್ನತ ಘಟ್ಟ.

ಶಾಲೆ ಎಂದರೆ ನಿಜಕ್ಕೂ ಕೂಡ ನಮಗೆ ನಮ್ಮ ಶಾಲಾ ದಿನಗಳು ನೆನಪಾಗುತ್ತವೆ. ವಿದ್ಯಾರ್ಥಿ ಜೀವನ ವನ್ನು ಸುವರ್ಣ ದಿನಗಳಿಗೆ ಹೋಲಿಸ ಲಾಗಿದೆ. ಇಂತಹ ಅಮೂಲ್ಯ ದಿನಗಳಿಗೆ ಕೋವಿಡ್ -19 ರಿಂದ ಕೊಡಲಿ ಪೆಟ್ಟು ಬಿದ್ದಂತಾಗಿದೆ.

2020ನೇ ವರ್ಷವೂ ಪ್ರತಿಯೊಬ್ಬರಿಗೂ ಒಂದಲ್ಲಾ ಒಂದು ಪಾಠವನ್ನು ಕಲಿಸಿದೆ. ವಿದ್ಯಾರ್ಥಿಗಳ ಜೊತೆ-ಜೊತೆಗೆ ಪೋಷಕರು ಕೂಡ ಸಾಕಷ್ಟು ಪಾಠ ಕಲಿತರು. ಶಾಲೆ ಮತ್ತು ಗುರುಗಳ ಮೌಲ್ಯ ಗೊತ್ತಾದದ್ದು ಈ ಸಮಯದಲ್ಲೇ. ಲಾಕ್‌ಡೌನ್ ನಂತರ ಶಾಲೆ ಆರಂಭವಾದ ಮೇಲೆ ಮಕ್ಕಳ ಶೈಕ್ಷಣಿಕ ಚಟುವಟಿಕೆ ಗಮನಿಸಿದರೆ ಬಹಳ ಶೋಚನೀಯವೆನಿಸುತ್ತಿದೆ.

ಆನ್‌ಲೈನ್ ಕ್ಲಾಸ್‌ಗಳಲ್ಲಿ ಶಿಕ್ಷಕರ ಪಾಠಗಳನ್ನು ಗಮನಿಸಿದಾಗ, ವಿದ್ಯಾಸಂಸ್ಥೆಯು ಹಾಕಿದ ಪರಿಶ್ರಮ ಮೆಚ್ಚುಗೆಯಾಯಿತು. ಮಕ್ಕಳ ಸರ್ವತೋ ಮುಖ ಬೆಳವಣಿಗೆಗೆ ವಿದ್ಯಾಲಯ ಹಾಗೂ ಶಿಕ್ಷಕರ ಪಾತ್ರವೇ ಬಹುದೊಡ್ಡದು.

8 ತಿಂಗಳ ಆನ್‌ಲೈನ್ ಕ್ಲಾಸ್ ಹಾಗೂ ಮನೆಯ ಶಿಕ್ಷಣದಿಂದ ಮಕ್ಕಳ ಬೌದ್ಧಿಕ ಮಟ್ಟ ಕುಸಿದಿದೆ. ಶೇ. 95ಕ್ಕಿಂತ ಹೆಚ್ಚು ಅಂಕ ಪಡೆಯುತ್ತಿದ್ದ ಮಕ್ಕಳು ಇಂದಿನ ಶೈಕ್ಷಣಿಕ ಚಟುವಟಿಕೆ ನೋಡಿ ದರೆ, ಶಾಲೆಯು ನೀಡುತ್ತಿದ್ದ ಜ್ಞಾನದ ಮೌಲ್ಯ ತಿಳಿಯುತ್ತದೆ. ಇಷ್ಟು ವರ್ಷಗಳು ಶಾಲೆಯು ಮಾಡಿದ ಕೆಲಸವನ್ನು ಪೋಷಕರು ಕೇವಲ 6 ತಿಂಗಳು ಮಾಡುವುದು ಕಷ್ಟವೇ ಆಯಿತು. ಅದರಲ್ಲೂ ಕರ್ತವ್ಯ ನಿರತ (working women) ಪೋಷಕರ ಪರಿಸ್ಥಿತಿ ಇನ್ನೂ ಗಂಭೀರವೇ ಆಯಿತು. ಕೇವಲ ಇದು ಮಕ್ಕಳ ಶೈಕ್ಷಣಿಕ ಚಟು ವಟಿಕೆಗೆ ಹಾನಿ ಮಾಡಿದ್ದಷ್ಟೇ ಅಲ್ಲದೆ, ಮಕ್ಕಳ ಮಾನ ಸಿಕ ಸ್ಥಿತಿ ಹಾಗೂ ದೈಹಿಕ ಸ್ಥಿತಿಯೇ ಬೇರೆಯಾಗುತ್ತದೆ. ಕೆಲವು ಪೋಷಕರು ಹೇಳುವಂತೆ ತುಂಬಾ ಮಕ್ಕಳು ಮಾನಸಿಕ ಖಿನ್ನತೆಗೂ ಒಳಗಾಗುತ್ತಿದ್ದಾರೆ.

ಎಲ್ಲಾ ವರ್ಗದವರ ಮೇಲೆಯೂ ಕೋವಿಡ್-19 ಪ್ರಭಾವ ಬೀರಿದರೂ ಕೂಡ, ವಿದ್ಯಾರ್ಥಿಗಳ ಜೀವನವೇ ತುಂಬಾ ಜರ್ಜರಿತವಾಗಿದ್ದು, ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳುವಂತೆ 'ಹಿಂದೆ ಆದದ್ದೆಲ್ಲಾ ಒಳ್ಳೆಯದಕ್ಕೆ, ಮುಂದೆ ಆಗುವುದು ಒಳ್ಳೆಯದಕ್ಕೆ' ಎನ್ನುವಂತೆ, ಈ ದಿನಗಳಲ್ಲಿಯೇ ನಿಜಕ್ಕೂ ವಿದ್ಯಾಸಂಸ್ಥೆ ಮತ್ತು ಶಿಕ್ಷಕರ ಮೌಲ್ಯ ತಿಳಿದದ್ದು.

ಇನ್ನು ಮುಂದೆ ಇಂತಹ ಯಾವುದೇ ವಿಕೋಪಗಳು ಬಾರದಿರಲೆಂದು ಪ್ರಾರ್ಥಿಸುತ್ತಾ, ಮುಂದಿನ ವಿದ್ಯಾರ್ಥಿಗಳ ಜೀವನ ಸುಗಮವಾಗಿ ಸಾಗಲೆಂದು ಎಲ್ಲರೂ ಆಶಿಸೋಣ.

- ಅನಿತಾ ಬಿ., ಪೋಷಕರು
ಶ್ರೀ ಸಿದ್ಧಗಂಗಾ ಶಾಲೆ, ದಾವಣಗೆರೆ.
9844483379

# ಕೊರೊನಾ ಕಾಲದಲ್ಲಿ ಖಿನ್ನತೆ, ಭ್ರಾಂತಿ...

## ಮಾನಸಿಕ ಆರೋಗ್ಯದ ಕಾಳಜಿ ವಹಿಸಲು ಪರಿಣಿತರ ಕರೆ

ನವದೆಹಲಿ, ಮಾ. 26– ಒಂದು ವರ್ಷದ ಹಿಂದೆ ದೇಶದಲ್ಲಿ ಕೊರೊನಾ ತಡೆಯಲು ದೀರ್ಘಾವಧಿ ಲಾಕ್‌ಡೌನ್ ಹೇರಿಕೆ ಮಾಡಲಾಗಿತ್ತು. ಆರ್ಥಿಕ, ಸಾಮಾಜಿಕ ಸೇರಿದಂತೆ ಹಲವಾರು ವಲಯಗಳಲ್ಲಿ ಏರಿಳಿತವಾದ ಈ ಸಮಯದಲ್ಲಿ ಮಾನಸಿಕ ಆರೋಗ್ಯಕ್ಕೂ ಹೊಡೆತ ಬಿದ್ದು ಸಾಕಷ್ಟು ಜನರು ಖಿನ್ನತೆಯಿಂದ ಮನೋಭ್ರಾಂತಿ ಯವರೆಗೆ ಹಲವಾರು ಸಮಸ್ಯೆಗಳನ್ನು ಎದುರಿಸಿದ್ದರು.

ಲಕ್ಷಾಂತರ ವಿದ್ಯಾರ್ಥಿಗಳು, ಶಿಕ್ಷಕರು, ಕಾರ್ಮಿಕರು, ಉನ್ನತ ಉದ್ಯಮಿಗಳು, ಯುವಕರು ಹಾಗೂ ಹಿರಿಯರು ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುವುದು ಸುಲಭವಾಗಿರಲಿಲ್ಲ. ಏಕಾಂಗಿತನ, ಖಿನ್ನತೆ ಹಾಗೂ ಉದ್ಯೋಗ ನಷ್ಟದಿಂದ ಹಲವರು ಮಾನಸಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು ಹಾಗೂ ಅವರು ನೆರವಿಗಾಗಿಯೂ ಮೊರೆ ಇಟ್ಟಿದ್ದರು.

ಕೊರೊನಾ ಸೋಂಕಿನ ಏರಿಳಿತದ ನಡುವೆ, ಮಾನಸಿಕ ಅಸ್ವಸ್ಥತೆಯ ಸಮಸ್ಯೆಯೂ ಮುಂದುವರೆದಿದೆ. ಐ.ಟಿ. ವೃತ್ತಿಪರರಾದ ಕೋಲ್ಕೊತಾದ ಕುಂದನ್ ಸಾಹಿ ಲಾಕ್‌ಡೌನ್ ಕಾಲದಿಂದ ಉಂಟಾದ ನಿದ್ರಾ ವೇಳಾಪಟ್ಟಿಯ ಏರುಪೇರಿನಿಂದ ಇನ್ನೂ ಹೊರ ಬರಲು ಸಾಧ್ಯವಾಗಿಲ್ಲ. ಮನೋ ವೈದ್ಯರ ನೆರವು ಪಡೆಯುತ್ತಿರುವುದಾಗಿ ಅವರು ಹೇಳಿದ್ದಾರೆ. ಅವರಂತೆ ಇನ್ನೂ ಹಲವಾರು ಟೆಕಿಗಳು ಸಮಸ್ಯೆ ಎದುರಿಸುತ್ತಿದ್ದಾರೆ.

ಸ್ನೇಹಿತರು, ಕುಟುಂಬದವರು ಹಾಗೂ ಸಹೋದ್ಯೋಗಿಗಳಿಂದ ದೂರವಾದ ಹಲವರು ಏಕಾಂಗಿತನದ ಚಿಪ್ಪಿಗೆ ಸಿಲುಕಿದರು. ಹಲವರು ಆತ್ಮಹತ್ಯಾ ಸೆಳೆತದಿಂದ ಹೊರ ಬರುವ ಹೋರಾಟ ನಡೆಸಿದರು. ಕೆಲವರು ಆತ್ಮಹತ್ಯೆಯನ್ನೂ ಮಾಡಿಕೊಂಡಿದ್ದಾರೆ.



ಲಾಕ್‌ಡೌನ್ ಆರಂಭವಾದ ನಂತರ ಮಾನಸಿಕ ಅಸ್ವಸ್ಥತೆ ಏರುಮುಖವಾಗಿದೆ. ಕೊರೊನಾದಿಂದ ಮಾನ ಸಿಕ ಪರಿಣಾಮಗಳು ತೀವ್ರವಾಗಿವೆ ಎಂದು ಹೈದರಾಬಾದ್‌ನ ಅಪೋಲೋ ಟೆಲಿಹೆಲ್ತ್ ಸಿಇಒ ವಿಕ್ರಮ್ ತಪ್ಲೂ ತಿಳಿಸಿದ್ದಾರೆ.

ಸೋಂಕಿಗೆ ಸಿಲುಕುವ ಭೀತಿ, ಸಾಮಾಜಿಕ ಒಂಟಿತನ ಹಾಗೂ ಆತ್ಮೀ ಯರನ್ನು ಕಳೆದುಕೊಂಡ ನೋವುಗಳ ಜೊತೆಗೆ ನಿರುದ್ಯೋಗ ಮತ್ತು ಆದಾಯ ನಷ್ಟಗಳೂ ಸೇರಿಕೊಂಡು ಮಾನಸಿಕ ಅಸ್ವಸ್ಥತೆಯ ಪ್ರಕರಣಗಳು ಉಲ್ಬಣ ವಾಗಿವೆ ಎಂದವರು ಹೇಳಿದ್ದಾರೆ.

ಕೊರೊನಾ ಸಮಯದಲ್ಲಿ ಮಾನಸಿಕ ಸ್ವಾಸ್ಥ್ಯವನ್ನು ಮೂಲ ಅಂಶ ಎಂದು ಪರಿಗಣಿಸದೇ ಹೋದರೆ ದೀರ್ಘಾವಧಿಯಲ್ಲಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹೆಚ್ಚು ಬೆಲೆ ತೆರಬೇಕಾಗುತ್ತದೆ ಎಂದವರು ಎಚ್ಚರಿಸಿದ್ದಾರೆ.

2021ರ ಫೆಬ್ರವರಿಯವರೆಗೆ 3,000 ಜನರು ಮಾನಸಿಕ ಆರೋಗ್ಯದ ಕುರಿತು ಆಪ್ತಸಮಾಲೋಚನೆಗೆ ಒಳಗಾಗಿದ್ದಾರೆ. ಇವರಲ್ಲಿ ಬಹುತೇಕರು ಖಿನ್ನತೆಯಿಂದ ಬಳಲುತ್ತಿದ್ದು 20ರಿಂದ 30 ವಯಸ್ಸಿನವರಾಗಿದ್ದಾರೆ ಎಂದು ಚಂಡೀಘಡದ ಪಿಜಿಐಎಂಇಆರ್‌ನ ಮಾನಸಿಕ ಚಿಕಿತ್ಸೆ ವಿಭಾಗದ ಮುಖ್ಯಸ್ಥ ಸಂದೀಪ್ ಗ್ರೋವರ್ ತಿಳಿಸಿದ್ದಾರೆ.

ಶಾಲೆ ಹಾಗೂ ಕಚೇರಿಗಳೆರಡೂ ಮನೆಯಲ್ಲೇ ಎನ್ನುವಂತಾದ ಕಾರಣ ಈ ವಯೋಮಾನದವರು ನಿರ್ಬಂಧಕ್ಕೆ ಗುರಿಯಾಗಿ ಉದ್ವಿಗ್ನತೆಗೆ ಒಳಗಾಗಿದ್ದಾರೆ. ಇದೇ ವೇಳೆ ಭೀತಿ ರೋಗಗಳೂ ಹೆಚ್ಚಾಗಿವೆ. ದೇಶದ ಉಳಿದೆಡೆಗಳಲ್ಲೂ ಇದೇ ರೀತಿಯ ಪರಿಸ್ಥಿತಿ ಇದೆ ಎಂದವರು ಹೇಳಿದ್ದಾರೆ.

ಕೊರೊನಾ ಸೋಂಕಿತರಿಗೆ ಕಳಂಕ ಹಚ್ಚಿದ ಕಾರಣ ರೋಗಿಗಳು ಹಾಗೂ ಕುಟುಂಬದವರ ಸಂಕಷ್ಟಗಳು ಉಲ್ಬಣಿ ಸಿವೆ ಎಂದು ಚೆನ್ನೈನ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್‌ನ ನಿರ್ದೇಶಕ ಪೂರ್ಣ ಚಂದ್ರಿಕ ತಿಳಿಸಿದ್ದಾರೆ.

ಕೊರೊನಾ ಸೋಂಕು ಆರಂಭ ವಾದ ದಿನಗಳಲ್ಲಿ ನಾವು ಸೋಂಕಿಗೆ ಸಿಲುಕಬಹುದು ಎಂಬ ಹೆದರಿಕೆ ಸಾಕಷ್ಟು ಜನರಲ್ಲಿತ್ತು. ಈಗಲೂ ಸಾಕಷ್ಟು ಜನರು ಅದೇ ಮಾನಸಿಕ ಒತ್ತಡದಲ್ಲಿದ್ದಾರೆ. ಲಾಕ್‌ಡೌನ್ ನಂತರ ಐ.ಟಿ. ವಲಯದಲ್ಲಿ ಉದ್ಯೋಗ ಕಳೆದುಕೊಂಡವರಲ್ಲಿ ಸಾಕಷ್ಟು ಜನ ಮಾನಸಿಕ ಒತ್ತಡಕ್ಕೆ ಸಿಲುಕಿದ್ದಾರೆ ಎಂದು ಬೆಂಗಳೂರಿನ ನಿಮ್ಹಾನ್ಸ್‌ನ ಪ್ರಭಾ ಚಂದ್ರ ತಿಳಿಸಿದ್ದಾರೆ.

ಲಾಕ್‌ಡೌನ್ ಅವಧಿಯಲ್ಲಿ ಮಾನಸಿಕ ಅಸ್ವಸ್ಥ ರೋಗಿಗಳು, ವಿಶೇಷ ಅಗತ್ಯವಿರುವ ಮಕ್ಕಳು, ವಲಸೆ ಕಾರ್ಮಿ ಕರು ಹಾಗೂ ಲಾಕ್‌ಡೌನ್ ಕಾರಣದಿಂದ ಒಂಟಿಯಾಗಿರುವ ಹಿರಿಯ ನಾಗರಿಕರಿಂದ ಮಾನಸಿಕ ಬೆಂಬಲಕ್ಕಾಗಿ 73 ಲಕ್ಷ ಕರೆಗಳು ಬಂದಿದ್ದವು ಎಂದು ಕೇರಳ ಸಾಮಾಜಿಕ ಸುರಕ್ಷತಾ ಮಿಷನ್ ಕಾರ್ಯಕಾರಿ ನಿರ್ದೇಶಕ ಮೊಹಮ್ಮದ್ ಅಶೀಲ್ ತಿಳಿಸಿದ್ದಾರೆ.

ಲಾಕ್‌ಡೌನ್ ಸಮಯದಲ್ಲಿ ಆದ ಮಾನಸಿಕ ಸಮಸ್ಯೆಗಳ ಕುರಿತು ವಿವರ ನೀಡಿರುವ ಮುಂಬೈನ ಮಾನಸಿಕ ಚಿಕಿತ್ಸಕ ಮನೋಜ್ ಭಟವಾಡೇಕರ್, 12 ವರ್ಷದ ಆಟಿಸ್ಟಿಕ್ ಸಮಸ್ಯೆಯ ಬಾಲಕನೋರ್ವ ನಡೆಯುವ ಅಗತ್ಯವಿತ್ತು. ನಡೆಯದೇ ಇದ್ದರೆ ಆತ ಹಿಂಸಾತ್ಮಕವಾಗುತ್ತಿದ್ದ. ಈ ಬಗ್ಗೆ ಪೋಷಕರಷ್ಟೇ ಅಲ್ಲದೇ ಸ್ಥಳೀಯ ಪೊಲೀಸರು, ಹೌಸಿಂಗ್ ಸೊಸೈಟಿಯ ಆಡಳಿತ ಮಂಡಳಿ ಮನವೊಲಿಸಿ ಬಾಲಕ ನಡೆಯಲು ಅವಕಾಶ ಮಾಡಿಕೊಡಲಾಯಿತು ಎಂದಿದ್ದಾರೆ.

ಮಾನಸಿಕ ಒತ್ತಡಕ್ಕೆ ಪರಿಹಾರ ಕಂಡುಕೊಳ್ಳದೇ ಹಾಗೆ ಬಿಟ್ಟರೆ ಅದು ಆತ್ಮಹತ್ಯಾ ಪ್ರವೃತ್ತಿಗೂ ಕಾರಣವಾಗು ತ್ತದೆ ಎಂದು ಲಖ್ನೌದ ಕೆ.ಜಿ. ಎಂ.ಯು.ನ ಹೆಚ್ಚುವರಿ ಉಪನ್ಯಾಸಕ ಆದರ್ಶ್ ತ್ರಿಪಾಠಿ ಹೇಳಿದ್ದಾರೆ.

ಕೊರೊನಾ ಮತ್ತೆ ಹೆಚ್ಚಾಗುತ್ತಿರುವು ದರಿಂದ, ನಿರ್ಬಂಧಗಳನ್ನು ಹೇರುವ ಮಾತುಗಳು ಕೇಳಿ ಬರುತ್ತಿವೆ. ಮತ್ತೆ ಲಾಕ್‌ಡೌನ್ ಸಮಸ್ಯೆ ಎದುರಿಸಬೇಕಾಗಿ ಬಂದರೆ, ಮಾನಸಿಕ ವಿಷಯದ ಕುರಿತು ಅತಿ ಹೆಚ್ಚು ಗಮನ ಹರಿಸಬೇಕಿದೆ ಎಂದು ಮಾನಸಿಕ ಆರೋಗ್ಯ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ಶರಣು, ಶರಣಾರ್ಥಿ ಕಾರ್ಯಕ್ರಮ

ರಾಣೇಬೆನ್ನೂರಿನ ದೊಡ್ಡಪೇಟೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ಕೂಡಲಸಂಗಮ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮಿಗಳ ಶರಣು, ಶರಣಾರ್ಥಿ ಕಾರ್ಯಕ್ರಮ ನಡೆಯಲಿದೆ ಎಂದು ಸಮಾಜದ ಜಿಲ್ಲಾ ಕಾರ್ಯದರ್ಶಿ ಸಿದ್ದು ಚಿಕ್ಕಬಿದರಿ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶೆಪ್ಪನವರ, ಶಾಸಕರಾದ ಬಸನಗೌಡ ಯತ್ನಾಳ, ಅರುಣಕುಮಾರ ಪೂಜಾರ, ಅರವಿಂದ ಬೆಲ್ಲದ, ಸಿದ್ದು ಸವದಿ, ಮಾಜಿ ಶಾಸಕ ಸೋಮಣ್ಣ ಬೇವಿನಮರದ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

## ಕೂಡ್ಲಿಗಿ : ಧರ್ಮೇಂದ್ರ ನಾಯಕ್ ನೇಮಕ



ಕೂಡ್ಲಿಗಿ, ಮಾ.26- ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾನೂನು, ಮಾನವ ಹಕ್ಕುಗಳು ಮತ್ತು ಮಾಹಿತಿ ಹಕ್ಕು ವಿಭಾಗದ ಕಾರ್ಯದರ್ಶಿಯಾಗಿ ಚಿಕ್ಕಜೋಗಿಹಳ್ಳಿಯ ಜೆ.ಎ. ಧರ್ಮೇಂದ್ರ ನಾಯಕ್ ಅವರನ್ನು ನೇಮಕ ಮಾಡಲಾಗಿದೆ ಎಂದು ವಿಭಾಗದ ಅಧ್ಯಕ್ಷ ಎ.ಎಸ್. ಪೊನ್ನಣ್ಣ ತಿಳಿಸಿದ್ದಾರೆ. ಕೆಪಿಸಿಸಿ ಸದಸ್ಯರು, ಕಾಂಗ್ರೆಸ್ ಜನಪ್ರತಿನಿಧಿಗಳು, ಕಾರ್ಯಕರ್ತರು ಧರ್ಮೇಂದ್ರ ನಾಯಕ್ ಅವರಿಗೆ ಶುಭ ಕೋರಿದ್ದಾರೆ.

## ದೃಶ್ಯ ಕಲಾ ಮಹಾವಿದ್ಯಾಲಯದ ಪ್ರಗತಿಗೆ ಪ್ರಯತ್ನ

### ಸಂಸದ ಜಿ.ಎಂ.ಸಿದ್ದೇಶ್ವರ



ದಾವಣಗೆರೆ, ಮಾ. 26 - ವಿದ್ಯಾನಗರದಲ್ಲಿರುವ ದೃಶ್ಯ ಕಲಾ ಮಹಾವಿದ್ಯಾಲಯದ ಪ್ರಗತಿಗೆ ಶ್ರಮಿಸುವುದಾಗಿ ಇಂದು ದೃಶ್ಯ ಕಲಾ ಮಹಾವಿದ್ಯಾಲಯಕ್ಕೆ ಭೇಟಿ ನೀಡಿದ ಸಂಸದ ಜಿ.ಎಂ.ಸಿದ್ದೇಶ್ವರ ಭರವಸೆ ನೀಡಿದರು.

ಪ್ರಪಂಚದಾದ್ಯಂತ ಕಲಾತ್ಮಕ ಚಿತ್ರ ಕಲೆಗಳಿಗೆ ಹೆಚ್ಚು ಬೇಡಿಕೆಯಿದ್ದು, ಇರುವ ಚಿತ್ರ ಕಲಾವಿದರನ್ನು ಪ್ರೋತ್ಸಾಹಿಸುವುದರ ಜೊತೆಗೆ ಆಸಕ್ತಿ ಇರುವ ಕಲಾವಿದರನ್ನು ಸೃಜಿಸುವ ಕೆಲಸ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ನಗರದ ದೃಶ್ಯ ಕಲಾ ಮಹಾವಿದ್ಯಾಲಯದ ಪ್ರಗತಿಗೆ ಹೆಚ್ಚಿನ ಕಾಳಜಿ ವಹಿಸುವುದಾಗಿ ಹೇಳಿದರು.

ಇಲ್ಲಿನ ಕೆಲಸಗಳ ಬಗ್ಗೆ ಪ್ರಸ್ತಾವನೆ ನೀಡಿದರೆ ಸರ್ಕಾರದ ಮಟ್ಟದಲ್ಲಿ ಅನುದಾನ ಬಿಡುಗಡೆಗೆ ಪ್ರಯತ್ನಿಸುತ್ತೇನೆ. ಇದರ ಜೊತೆಗೆ ಮಹಾವಿದ್ಯಾಲಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಸಾರ್ವಜನಿಕರಿಗೆ ಬಿಂಬಿಸುವ ಕೆಲಸ ಆಗಬೇಕಿದೆ ಎಂದರು.

ದೃಶ್ಯ ಕಲಾ ಮಹಾವಿದ್ಯಾಲಯವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಅದರ ಬಗ್ಗೆ ಜನಪ್ರತಿನಿಧಿಗಳ ಕಾಳಜಿ ಹೆಚ್ಚಬೇಕಿದೆ. ಈ ನಿಟ್ಟಿನಲ್ಲಿ ಒಮ್ಮೆ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಸಮಿತಿಯವರು ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ ಸಂಸದರು ಇಂದು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ದೃಶ್ಯ ಕಲಾ ಮಹಾವಿದ್ಯಾಲಯದ ಪುನರುತ್ಥಾನ ಸಮಿತಿಯ ಬಿ.ಎನ್.ಮಲ್ಲೇಶ್, ವಿಶ್ವವಿದ್ಯಾನಿಲಯ ಸಿಂಡಿಕೇಟ್ ಮಾಜಿ ಸದಸ್ಯ ಸಿ.ಹೆಚ್.ಮರುಗೇಂದ್ರಪ್ಪ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ, ಸಿಂಡಿಕೇಟ್ ಮಾಜಿ ಸದಸ್ಯ ಹೆಚ್.ಎನ್.ಶಿವಕುಮಾರ್, ವ್ಯಂಗ್ಯ ಚಿತ್ರ ಬರಹಗಾರ ಹೆಚ್.ಬಿ.ಮಂಜುನಾಥ್, ಮಹಾನಗರ ಪಾಲಿಕೆ ಮಾಜಿ ಸದಸ್ಯ ಬಾಮ ಬಸವರಾಜಯ್ಯ, ದಾವಣಗೆರೆ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಶ್ರೀಮತಿ ಗಾಯತ್ರಿ ದೇವರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಶ್ರೀ ಆಂಜನೇಯ ಸೌಹಾರ್ದ ಸಹಕಾರಿಯ ನೂತನ ಶಾಖೆಗಳ ಉದ್ಘಾಟನೆ



ದಾವಣಗೆರೆ, ಮಾ. 26 - ಕುಕ್ಕುವಾಡದ ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ನಿಯಮಿತ ಇದರ ನೂತನ 5ನೇ ಶಾಖೆಯನ್ನು ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ತಿಳವಳ್ಳಿ ಗ್ರಾಮದಲ್ಲಿ ಹಾಗೂ ಹೊನ್ನಾಳಿಯಲ್ಲಿ 6ನೇ ಶಾಖೆಯನ್ನು ಇತ್ತೀಚೆಗೆ ಉದ್ಘಾಟಿಸಲಾಯಿತು.

ತಿಳವಳ್ಳಿ ಗ್ರಾಮದಲ್ಲಿ ಈಚೆಗೆ ನಡೆದ ನೂತನ ಶಾಖೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷ ಜಿ.ಎಂ. ರುದ್ರಗೌಡ್ರು, ಆಡಳಿತ ಮಂಡಳಿಯ ಸದಸ್ಯರಾದ ಬಿ.ಹೆಚ್. ಶಿವನಗೌಡ್ರು, ಕೆ.ಶರಣಪ್ಪ, ಕೆ.ಟಿ. ಚಂದ್ರಶೇಖರಪ್ಪ, ಟಿ.ಎಂ.ಕರಿಬಸಪ್ಪ, ಪಿ. ಎನ್.ಮಹೇಂದ್ರ, ಕೊಪ್ಪದ್ ಹಾಗೂ ಚಿಕ್ಕಬಾಸೂರು ಮಲ್ಲಿಕಾರ್ಜುನಗೌಡ್ರು ಅತಿಥಿಗಳಾಗಿ ಭಾಗವಹಿಸಿದ್ದರು.

ಹೊನ್ನಾಳಿಯ ಸಂತೇ ಮೈದಾನದ ಎದುರಿನ ಬಿಲ್ಡಿಂಗ್‌ನಲ್ಲಿ ಈಚೆಗೆ ನಡೆದ ನೂತನ ಶಾಖೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಭಾಗವಹಿಸಿದ್ದರು.

## ಹನಗವಾಡಿಯಲ್ಲಿ ಇಂದು ಅಂತರರಾಷ್ಟ್ರೀಯ ಕಾರ್ಯಾಗಾರ

ಕರ್ನಾಟಕ ರಾಜ್ಯ ಸರ್ಕಾರಿ ಕಾಲೇಜುಗಳ ಎಸ್ಸಿ, ಎಸ್ಟಿ ಶಿಕ್ಷಕರ ಅಸೋಸಿಯೇಷನ್ ಬೆಂಗಳೂರು, ಕರ್ನಾಟಕ ರಾಜ್ಯ ಎಸ್ಸಿ, ಎಸ್ಟಿ ಅಧ್ಯಾಪಕರ ಫೋರಂ, ಕರ್ನಾಟಕ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರ ಕಲ್ಯಾಣ ಅಸೋಸಿ ಯೇಷನ್ ಬೆಂಗಳೂರು ಹಾಗೂ ಕಾಲೇಜು ಶಿಕ್ಷಣ ಎಸ್ಸಿ, ಎಸ್ಟಿ ಅಧ್ಯಾಪಕರು ಹಾಗೂ ಅಧ್ಯಾಪಕೇತರರ ಅಸೋಸಿಯೇಷನ್ ಮೈಸೂರು ವಿಭಾಗ ಇವರ ಆಶ್ರಯದಲ್ಲಿ ಇಂದು ಅಂತರರಾಷ್ಟ್ರೀಯ ಕಾರ್ಯಾಗಾರದ ಎರಡನೇ ದಿನದ ಕಾರ್ಯಕ್ರಮ ಹರಿಹರ ತಾಲ್ಲೂಕು ಹನಗವಾಡಿ ಬಳಿ ಇರುವ ಬಿ. ಕೃಷ್ಣಪ್ಪ ಮೆಮೋರಿಯಲ್ ಮೈತ್ರಿ ಧಾಮದಲ್ಲಿ ನಡೆಯಲಿದೆ.

ಇಂದು ಬೆಳಿಗ್ಗೆ 9.30 ಕ್ಕೆ 'ಅಂಬೇಡ್ಕರ್, ನಾಲೆಡ್ಜ್ ಮತ್ತು ಸೋಷಿಯಲ್ ರಿಫಾರ್ಮೇಷನ್ : ಎ ಡಿಸ್ಕೋರ್ಸ್' ವಿಷಯ ಕುರಿತು, ಬೆಳಿಗ್ಗೆ 11 ಕ್ಕೆ 'ಕಾನ್‌ಸ್ಟಿಟ್ಯೂಷನ್ ಅಂಡ್ ರಿಜರ್ವೇಷನ್ : ಪಾಸ್ಟ್, ಪ್ರೆಸೆಂಟ್ ಅಂಡ್ ಫ್ಯೂಚರ್' ವಿಷಯ ಕುರಿತು ನಂತರ ಮಧ್ಯಾಹ್ನ 12.30 ಕ್ಕೆ 'ಸೋಷಿಯಲ್ ಜಸ್ಟೀಸ್ ಅಂಡ್ ರೆಪ್ರೆಸೆಂಟೇಷನ್ ಆಫ್ ಎಸ್ಸಿ, ಎಸ್ಟಿ ಪ್ರೊಫೆಸರ್ಸ್' ವಿಷಯ ಕುರಿತು ಗೋಷ್ಠಿಗಳು ನಡೆಯಲಿವೆ. ಮಧ್ಯಾಹ್ನ 2 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದಲ್ಲಿ ನೆಹರೂ ಓಲೇಕಾರ್, ಡಾ. ಕರಿಬಸಪ್ಪ, ಡಾ. ಹನುಮಂತಪ್ಪ, ಡಾ. ಅನಿತಾ ಎಂ.ಎಸ್, ಡಾ. ರಾಜು ಬಿ. ಎಲ್., ಡಾ ಗುರುಬಸವರಾಜ ಪಂಡಿತ್ ಭಾಗವಹಿ ಸುವರು. ಅಧ್ಯಕ್ಷತೆಯನ್ನು ಡಾ. ಪುಟ್ಟರಾಜು ವಹಿಸುವರು.

## ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಎಲ್.ಡಿ. ಗೋಣಪ್ಪ ಅಧಿಕಾರ ಸ್ವೀಕಾರ



ದಾವಣಗೆರೆ, ಮಾ.26- ಮಹಾನಗರ ಪಾಲಿಕೆ ಸಾರ್ವಜನಿಕ, ಆರೋಗ್ಯ ಮತ್ತು ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಎಲ್.ಡಿ. ಗೋಣಪ್ಪ ಅವರು ನಿನ್ನೆ ಅಧಿಕಾರ ವಹಿಸಿಕೊಂಡರು. ಈ ಸಂದರ್ಭದಲ್ಲಿ ಏರ್ಪಡಿಸಿದ್ದ ಪೂಜಾ ಕಾರ್ಯಕ್ರಮಕ್ಕೆ ಆಗಮಿಸಿದ್ದ ಜಿಲ್ಲಾ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಯಶವಂತರಾವ್ ಜಾಧವ್ ಅವರನ್ನು ಗೋಣಪ್ಪ ಅವರು ಸನ್ಮಾನಿಸಿದರು. ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ಸದಸ್ಯ ಸ್ವಾಗಿ ಶಾಂತಕುಮಾರ್, ಆಶ್ರಯ ಮಾಜಿ ಸದಸ್ಯರಾದ ಆನಂದ ಹಿರೇಮಠ, ಡಿ. ಹನುಮಂತಪ್ಪ, ಜಿ. ಪ್ರಕಾಶ್, ಪರಶುರಾಮ್ ಮತ್ತಿತರರಿದ್ದರು.

## ಹರಿಹರದಲ್ಲಿ ಇಂದು ಉಪನ್ಯಾಸ

ಪರಸ್ಪರ ಬಳಗ ಹರಿಹರ ಇವರ ಆಶ್ರಯದಲ್ಲಿ ಅಂಬೇಡ್ಕರ್‌ರವರ ಚಿಂತನೆಗಳ ಮಾಸಿಕ ಉಪನ್ಯಾಸ ಮಾಲಿಕೆಯ ಉದ್ಘಾಟನಾ ಸಮಾರಂಭ. ಸಮಯ : ಬೆಳಿಗ್ಗೆ 10.30 ಕ್ಕೆ, ಸ್ಥಳ : ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣ. ಉದ್ಘಾಟನೆ : ಡಾ. ಬಂಜಗೆರೆ ಜಯಪ್ರಕಾಶ್. ಅಧ್ಯಕ್ಷತೆ : ಜೆ. ಕಲೀಂ ಬಾಷ. ಪ್ರೊ. ಅತಿಥಿಗಳು : ಹೆಚ್.ಎ.ಭಿಕ್ಷಾವರ್ತಿಮಠ. ಪ್ರೊ. ಸಿ.ವ್ಹಿ. ಪಾಟೀಲ್, ಆರ್.ಟಿ. ಪ್ರಶಾಂತ್, ರಾಮಚಂದ್ರ ಕಲಾಲ್, ಡಾ. ಎಸ್.ಹೆಚ್. ಪ್ಯಾಟಿ, ಹೆಚ್.ಕೆ. ಕೊಟ್ರಪ್ಪ, ಹುಲಿಕಟ್ಟಿ ಚನ್ನಬಸಪ್ಪ.

## ಆರೋಗ್ಯ ಸಿಬ್ಬಂದಿಗಳಿಗೆ ಬೆದರಿಕೆ

ಹರಪನಹಳ್ಳಿ, ಮಾ.26- ತಾಲ್ಲೂಕಿನಲ್ಲಿ ಕೊರೊನಾ ಸೋಂಕಿತರನ್ನು ಗುರುತಿಸಿ, ಕ್ವಾರಂಟೈನ್ ಮಾಡಲು ಮುಂದಾದ ಆರೋಗ್ಯ ಇಲಾಖೆ ಸಿಬ್ಬಂದಿ ಮೇಲೆ ದೌರ್ಜನ್ಯ ಮಾಡುವುದಾಗಿ ಎಚ್ಚರಿಕೆ ನೀಡುತ್ತಿರುವ ಘಟನೆಗಳು ಜರುಗುತ್ತಿದ್ದು, ಆರೋಗ್ಯ ಸಿಬ್ಬಂದಿ ಅರಿವು ಮೂಡಿಸಲು ಹರಸಾಹಸ ಪಡುತ್ತಿದ್ದಾರೆ.

ಕೊರೊನಾ ಅಲೆ ನಿಧಾನ ಗತಿಯಲ್ಲಿ ಕಾಲಿಡುತ್ತಿದ್ದು, ಸಾರ್ವಜನಿಕರಿಗೆ ಅರಿವು ಮೂಡಿಸಲು ಮುಂದಾದ ಆರೋಗ್ಯ ಸಿಬ್ಬಂದಿಗಳಿಗೆ ನಿಂದಿಸುತ್ತಿರುವ ಘಟನೆಗಳು ಜರುಗುತ್ತಿವೆ. ಇದನ್ನರಿತ ತಾಲ್ಲೂಕು ವೈದ್ಯಾಧಿಕಾರಿ ಡಾ. ವೆಂಕಟೇಶ್ ಮಾತನಾಡಿ, ಸಾರ್ವಜನಿಕರಲ್ಲಿ ಕೊರೊನಾ ಸೋಂಕಿನ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದ್ದು, ಸೋಂಕಿತರು ಆರೋಗ್ಯ ಇಲಾಖೆ ಸಿಬ್ಬಂದಿಗಳೊಂದಿಗೆ ಶಾಂತಿಯಿಂದ ನಡೆದುಕೊಂಡು ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ. ಈಗಾಗಲೇ ತಾಲ್ಲೂಕಿನಲ್ಲಿ ಎರಡಂಕಿಯಲ್ಲಿ ಕೊರೊನಾ ಸೋಂಕಿತರು ದಾಖಲಾಗಿದ್ದಾರೆ. ಮುತ್ತಿಗೆ, ಉದಗಟ್ಟಿ, ಮತ್ತಿಹಳ್ಳಿ ಹಾಗೂ ಪಟ್ಟಣದಲ್ಲಿ ನಾಲ್ವರು ಸೋಂಕಿತರನ್ನು ಗುರುತಿಸಲಾಗಿದೆ ಎಂದರು.

## ನಗರದಲ್ಲಿ ಇಂದು ವಿಶ್ವ ರಂಗಭೂಮಿ ದಿನಾಚರಣೆ

ವಿಸ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮವು ವನಿತಾ ಸಮಾಜದ ಸತ್ಯಸಾಯಿ ರಂಗಮಂದಿರದಲ್ಲಿ ಇಂದು ಸಂಜೆ 6.30ಕ್ಕೆ ನಡೆಯಲಿದೆ.

ಕರ್ನಾಟಕ ನಾಟಕ ಅಕಾಡೆಮಿ ಮತ್ತು ಭೂಮಿಕಾ - ವನಿತಾ ರಂಗ ವೇದಿಕೆ ಇವರ ಜಂಟಿ ಆಶ್ರಯದಲ್ಲಿ ಏರ್ಪಾಡಾಗಿರುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವನಿತಾ ಸಮಾಜದ ಗೌರವಾಧ್ಯಕ್ಷರೂ ಆಗಿರುವ ಮಾಜಿ ಸಚಿವೆ ಸಿ. ನಾಗಮ್ಮ ಕೇಶವಮೂರ್ತಿ ವಹಿಸುವರು.

ಕಲಾವಿದರೂ, ನಾಟಕ ಅಕಾಡೆಮಿ ಸದಸ್ಯರೂ ಆಗಿರುವ ರವೀಂದ್ರ ಅರಳಗುಪ್ಪಿ , ಹಿರಿಯ ರಂಗಕರ್ಮಿಗಳೂ ಆದ ಸಾಹಿತಿ ಬಾ.ಮ. ಬಸವರಾಜಯ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಭೂಮಿಕಾ-ವನಿತಾ ರಂಗ ವೇದಿಕೆ ಕಾರ್ಯದರ್ಶಿ ಶ್ರೀಮತಿ ಬಿ.ಟಿ. ಜಾಹ್ನವಿ, ಉಪಾಧ್ಯಕ್ಷೆ ಶ್ರೀಮತಿ ಸತ್ಯಭಾಮ ಮಂಜುನಾಥ್, ಖಜಾಂಚಿ ಶ್ರೀಮತಿ ಹೆಚ್.ಎನ್. ಸುಧಾ ಅವರುಗಳು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿರುವರು.

ಸಮಾರಂಭದ ನಂತರ ಡಾ. ಚಂದ್ರಶೇಖರ ಕಂಬಾರ ಅವರು ರಚಿಸಿ, ಎಸ್.ಎಲ್. ಸಂತೋಷ್ ಅವರು ನಿರ್ದೇಶಿಸಿರುವ 'ಭಾರತಾಂಬೆ' ನಾಟಕ ಪ್ರದರ್ಶನ ಮತ್ತು ರಂಗಗೀತೆಗಳು ಜರುಗಲಿವೆ.

## ಇಂದು ಶ್ರೀ ಕೋಡಿ ಚೌಡೇಶ್ವರಿ ದೇವಿ ಆರಾಧನೆ

ದಾವಣಗೆರೆ ತಾಲ್ಲೂಕು ಬಸವನಾಳ್ ಗೊಲ್ಲರಹಟ್ಟಿಯ ಸುಕ್ಷೇತ್ರದಲ್ಲಿ ಶ್ರೀ ಕೋಡಿ ಚೌಡೇಶ್ವರಿ ದೇವಿಯ ಆರಾಧನಾ ಮಹೋತ್ಸವ ಇಂದು ನಡೆಯುವುದು.

ಇಂದು ಪ್ರಾತಃಕಾಲ 5 ಗಂಟೆಗೆ ಶ್ರೀ ದೇವಿಗೆ ಅಭಿಷೇಕ, ಬೆಳಿಗ್ಗೆ 9 ಗಂಟೆಗೆ ಅಗ್ನಿಕೆಂಡ, ನಂತರ ಬೇವು ಉಡುವುದು, ಜವಳ, ಹರಕೆ ಮತ್ತು ತುಲಾಭಾರ ಕಾಣಿಕೆ ಹಾಗೂ ಭಕ್ತಾದಿಗಳಿಂದ ಶ್ರೀ ದೇವಿಗೆ ಉಡಿತುಂಬುವ ಕಾರ್ಯಕ್ರಮ ನಡೆಯುವುದು.

ಕಾರ್ಯಕ್ರಮದ ಅಂಗವಾಗಿ ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 4 ಗಂಟೆಗೆ ಬೆಲ್ಲದ ಬಂಡಿ ಕಾರ್ಯಕ್ರಮವಿದೆ.

## ವಿಶ್ವ ವನ, ಜಲ ಮತ್ತು ವಾತಾವರಣ ದಿನ



### ರಾಣೇಬೆನ್ನೂರು

ರಾಣೇಬೆನ್ನೂರು, ಮಾ.26- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ವನ, ಜಲ ಮತ್ತು ವಾತಾವರಣ ದಿನವನ್ನು ಆಚರಿಸಲಾಯಿತು.

ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ವಿ.ಬಿ. ಕುಂಬಾರ ಮಾತನಾಡಿ, ಪ್ರತಿಯೊಬ್ಬರು ತಮ್ಮ ಆದ್ಯ ಕರ್ತವ್ಯವೆಂದು ತಿಳಿದು ಗಿಡ, ಮರ ಬೆಳೆಸಿ ಜಲ ಸಂರಕ್ಷಣೆ ಮಾಡಿದರೆ ಮಾತ್ರ ಭೂಮಿ ಮೇಲೆ ನೆಮ್ಮದಿ, ಆರೋಗ್ಯ ಜೀವನ ನಡೆಸಲು ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ ಪ್ರಾಂಶುಪಾಲರಾದ ಪ್ರೊ. ಲಿಂಗರಾಜ ಸಂಗಳದ ಮಾತನಾಡಿ, ಪರಿಸರ ವಿಲ್ಲದೆ ನಾವಿಲ್ಲ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಎಂದರು.

ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ವಿ.ವಿ. ಕುರ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ. ಐ.ಓ. ಪೂಜಾರ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಚಾಲಕ ಪ್ರೊ. ಎಸ್.ಬಿ. ಪಾಟೀಲ, ಎ.ಬಿ. ಕುಮಾರ, ಡಾ. ವೆಂಕಟೇಶ ಪ್ರೊ. ಅಯ್ಯನಗೌಡ್ರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತಿದ್ದರು. ಗೀತಾ ಕೋಟೆಣ್ಣನವರು ವಂದಿಸಿದರು.

## ಹರಿಹರ : ನಾಳೆ ನೀಲಕಂಠೇಶ್ವರ ಸ್ನೇಹ ಬಳಗದಿಂದ ಮಹಿಳಾ ದಿನಾಚರಣೆ

ಹರಿಹರ, ಮಾ.26- ನಗರದ ನೀಲಕಂಠೇಶ್ವರ ಸ್ನೇಹ ಬಳಗ ಟ್ರಸ್ಟ್‌ನ ಮಹಿಳಾ ಮಂಡಳಿಯಿಂದ ನಾಳೆ ದಿನಾಂಕ 28ರ ಭಾನುವಾರ ಸಂಜೆ 4 ಕ್ಕೆ ಸಮೀಪದ ಗುತ್ತೂರಿನ ಶ್ರೀ ಶಕ್ತಿ ಹಿರಿಯ ನಾಗರಿಕರ ವಸತಿ ನಿಲಯದಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಅಧ್ಯಕ್ಷ ಅರುಣ ಗಂಗಾಧರ್ ಕೊಟಗಿ ತಿಳಿಸಿದರು.

ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕಾರ್ಯಕ್ರಮದ ಸಾನ್ನಿಧ್ಯವನ್ನು ತುಮ್ಮಿನಕಟ್ಟೆಯ ಶ್ರೀ ಗುರು ಮಾರ್ಕಂಡೇಶ್ವರ ಪದ್ಮಶಾಲಿ ಗುರುಮಠದ ಶ್ರೀ ಪ್ರಭುಲಿಂಗ ಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕರುಗಳಾದ ಹೆಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ಗದುಗಿನ ಕುರುಹಿನಶೆಟ್ಟಿ ಸಮಾಜದ ಹಿರಿಯ ಮುಖಂಡ ಎಂ.ಸಿ. ಅಲಿ, ದಾವಣಗೆರೆಯ ಎಚ್.ಆರ್. ನಾಗಭೂಷಣ್, ರಮೇಶ್ ಗಣಪ, ಪೌರಾಯುಕ್ತರಾದ ಎಸ್.ಲಕ್ಷ್ಮಿ, ಯುವ ಮುಖಂಡ ನಂದಿಗಾವಿ ಎನ್.ಎಚ್. ಶ್ರೀನಿವಾಸ್, ಹಿರಿಯ ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ ಆಗಮಿಸಲಿದ್ದು, ಅರುಣಾ ಗಂಗಾಧರ್ ಕೊಟಗಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಮಂಜುಳಾ ಆರ್. ಅಗಡಿ ಮಾತನಾಡಿ, ಈ ಬಾರಿ ಶ್ರೀ ಶಕ್ತಿ ವೃದ್ಧಾಶ್ರಮದ ಮಹಿಳಾ ಕೊಠಡಿಗೆ 40 ಇಂಚಿನ ಹೊಸ ಟಿ.ವಿ.ಯನ್ನು ಕೊಡುಗೆಯಾಗಿ ನೀಡಲಿರುವುದಾಗಿ ತಿಳಿಸಿದರು.

ಅಧ್ಯಕ್ಷ ಅರುಣಾ ಗಂಗಾಧರ್ ಕೊಟಗಿ, ಉಪಾಧ್ಯಕ್ಷೆ ಕಾಮಾಕ್ಷಿ ವಿ.ಅಗಡಿ, ಪ್ರಧಾನ ಕಾರ್ಯದರ್ಶಿ ಮಂಜುಳಾ ಆರ್. ಅಗಡಿ, ಜಂಟಿ ಕಾರ್ಯದರ್ಶಿ ಕವಿತಾ ಪಿ.ಕೊಟಗಿ, ಖಜಾಂಚಿ ರೇಣುಕಾ ಪಿ.ಖಲಿಜಿ, ಸಂಘಟನಾ ಕಾರ್ಯದರ್ಶಿ ಜಯಮ್ಮ ಪಿ.ಅಗಡಿ, ನಿರ್ದೇಶಕರಾದ ನಿರ್ಮಲ ಅಳವಂಡಿ, ಸುಧಾ ಶ್ಯಾವಿ, ಶಾಂತ ಲಕ್ಷ್ಮಣ ಆಲೂರು ಇನ್ನಿತರರಿದ್ದರು.

## ನಾಳೆ ಮದ್ಯದ ಅಂಗಡಿ ಲೈಸೆನ್ಸ್‌ದಾರರ ಸಭೆ

ದಾವಣಗೆರೆ, ಮಾ.26 - ಎಂಎಸ್‌ಐಎಲ್ ಬ್ರಾಂಡಿ ಅಂಗಡಿಗಳನ್ನು ಮಂಜೂರು ಮಾಡದಂತೆ ಮತ್ತು ಹಿಂದೆ ನಷ್ಟ ಅನುಭವಿಸಿ ಮದ್ಯದಂಗಡಿಗಳನ್ನು ಮುಚ್ಚಿರುವವರಿಗೆ ಮತ್ತೊಮ್ಮೆ ಪುನರ್ ಪರವಾನಿಗೆ ನೀಡಿ ಪ್ರಾರಂಭಿಸಲು ಅವಕಾಶ ಮಾಡಿಕೊಡುವಂತೆ ಸರ್ಕಾರದ ಗಮನ ಸೆಳೆಯಲು ನಾಡಿದ್ದು ದಿನಾಂಕ 28 ರಂದು ಬೆಳಿಗ್ಗೆ 11 ಕ್ಕೆ ನಗರದ ಚೇತನಾ ಹೋಟೆಲ್ ಕಾಂಪ್ಲೆಕ್ಸ್‌ನಲ್ಲಿರುವ ಹೋಟೆಲ್ ಶಿವಾನಿಯಲ್ಲಿ ಸಭೆ ಕರೆಯಲಾಗಿದೆ.

ಈ ಹಿಂದೆ ಅಂಗಡಿ ಕಳೆದುಕೊಂಡ ಪರವಾನಿಗೆದಾರರು ಹಾಗೂ ಹಿರಿಯ ಅನುಭವಿ ಮುಖಂಡರ ಸಮ್ಮುಖದಲ್ಲಿ ಸಭೆ ಕರೆಯಲಾಗಿದ್ದು, ನೊಂದಿರುವ ಲೈಸೆನ್ಸ್‌ದಾರರು ಸಭೆಯಲ್ಲಿ ಭಾಗವಹಿಸುವಂತೆ ಜಿ.ಹೆಚ್. ನಾಗರಾಜ್ ಅವರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಮೊ: 9481161164 ಗೆ ಸಂಪರ್ಕಿಸಲು ತಿಳಿಸಲಾಗಿದೆ.

## ರಿಯಾಯ್ತಿ ಪಡೆದು ಕಂತಿನ ಹಣ ಪಾವತಿಸಲು ಸೂಚನೆ

ದಾವಣಗೆರೆ, ಮಾ.26- ಕೃಷಿ ಉದ್ದೇಶಗಳಿಗೆ ಸಾಲ ಪಡೆದು ಇದೇ ತಿಂಗಳ ಅಂತ್ಯಕ್ಕೆ ಮಾರ್ಚ್ 31 ತಗಾದೆ ಕಂತು ಬಂದಿರುವ ರೈತರು, ವಾಯ್ದೆ ಶೇ.3 ಬಡ್ಡಿ ದರದಲ್ಲಿ ಕಂತಿನ ಹಣ ಪಾವತಿಸಿದಲ್ಲಿ ಸರ್ಕಾರದ ಬಡ್ಡಿ ರಿಯಾಯ್ತಿ ದೊರೆಯಲಿದೆ.

ತಪ್ಪಿದಲ್ಲಿ ಪೂರ್ತಿ ಬಡ್ಡಿಯೊಂದಿಗೆ ಇತರೇ ವೆಚ್ಚಗಳೊಂದಿಗೆ ಪಾವತಿಸಬೇಕಾಗುತ್ತದೆ. ಕಾರಣ ಸರ್ಕಾರದ ರಿಯಾಯ್ತಿ ಪಡೆದು ತಕ್ಷಣ ಕಂತಿನ ಹಣ ಪಾವತಿಸಲು ಸೂಚಿಸಿದೆ.

ಕೃಷಿ ಉದ್ದೇಶದಲ್ಲಿ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರು ಈ ಹಿಂದೆ ಸರ್ಕಾರ ಬಡ್ಡಿ ಮನ್ನಾ ಯೋಜನೆ ನೀಡಿದಾಗ್ಯೂ ಪಡೆದ ಸಾಲವನ್ನು ಪಾವತಿಸದೆ, ನಿರ್ಲಕ್ಷ್ಯ ವಹಿಸಿದ ಸಾಲಗಾರರು ಮಾ.31 ರೊಳಗೆ ಪೂರ್ತಿ ಸುಸ್ತಿ ಹಾಗೂ ಕಂತಿನ ಹಣ ಪಾವತಿಸಲು ಕೋರಿದೆ.

ತಪ್ಪಿದಲ್ಲಿ ಮುಂದಿನ ದಿನಗಳಲ್ಲಿ ಕಾನೂನು ಕ್ರಮ ಜರುಗಿಸಿ ವಸೂಲಿ ಮಾಡಲಾಗುವುದು. ರೈತರು ತಕ್ಷಣ ಸುಸ್ತಿ ಮೊತ್ತ ಪಾವತಿಸಿ, ಶೇ.3 ಬಡ್ಡಿ ದರದಲ್ಲಿ ಹೊಸ ಸಾಲ ಪಡೆದುಕೊಳ್ಳುವಂತೆ ತಾಲ್ಲೂಕಿನ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಕೆ.ಬಿ. ಸಿದ್ದೇಶ್ ಹಾಗೂ ವ್ಯವಸ್ಥಾಪಕ ಟಿ.ಎನ್. ಭೂಷಣ್ ತಿಳಿಸಿದ್ದಾರೆ.

## ಹರಿಹರ : ಕಸಾಪ ಚುನಾವಣೆ 29 ರಿಂದ ನಾಮಪತ್ರ ಸಲ್ಲಿಕೆ

ಹರಿಹರ, ಮಾ.26- ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸಿದ್ದು, ಚುನಾವಣಾ ವೇಳಾಪಟ್ಟಿ ಹೀಗಿದೆ.

ಮಾರ್ಚ್ 25 ರ ಗುರುವಾರ ಅಂತಿಮ ಮತದಾರರ ಪಟ್ಟಿ ಪ್ರಕಟಿಸಿದ್ದು, ನಾಮಪತ್ರವನ್ನು ಮಾರ್ಚ್ 29 ರ ಸೋಮವಾರದಿಂದ ಏಪ್ರಿಲ್ 7 ರ ಬುಧವಾರದ ವರೆಗೆ ಸ್ವೀಕರಿಸಲಾಗುವುದು. ಏಪ್ರಿಲ್ 8 ಗುರುವಾರ ಬೆಳಿಗ್ಗೆ 11 ರಿಂದ ನಾಮಪತ್ರ ಪರಿಶೀಲನೆ ನಡೆಯಲಿದೆ.

ಏಪ್ರಿಲ್ 12 ಸೋಮವಾರದವರಿಗೆ ಮಧ್ಯಾಹ್ನ 3 ಗಂಟೆಯೊಳಗೆ ನಾಮಪತ್ರ ಹಿಂತೆಗೆದುಕೊಳ್ಳಬಹುದು. ಅಂತಿಮ ನಾಮಪತ್ರ ಪಟ್ಟಿಯನ್ನು ಏ.12 ರಂದು ಪ್ರಕಟಿಸಲಾಗುವುದು. ಮೇ 9 ರ ಭಾನುವಾರ ಬೆಳಿಗ್ಗೆ 8 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ. ಮತದಾನ ಮುಗಿದ ನಂತರ ಅಂದೇ ಮತ ಎಣಿಕೆ ನಡೆಯಲಿದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

## ಇಂದು ಯಕ್ಷೋತ್ಸವ

ಶ್ರೀ ಕುಂದಾವರ ರಘುರಾಮ ಶೆಟ್ಟಿ ಪ್ರತಿಷ್ಠಾನ ನೂಜಾಡಿ, ಕುಂದಾಪುರ ತಾಲ್ಲೂಕು ಇವರ ಆಶ್ರಯದಲ್ಲಿ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಪ್ರತಿಷ್ಠಾನದ ದಶಮಾನೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ, ಯಕ್ಷಗಾನ ತಾಳ ಮದ್ದಳೆ ಮತ್ತು ಯಕ್ಷಗಾನ ಪ್ರದರ್ಶನ, ಯಕ್ಷಗಾನ ತರಬೇತಿ ಶಿಬಿರ 'ಯಕ್ಷೋತ್ಸವ' ಕಾರ್ಯಕ್ರಮವನ್ನು ಯಕ್ಷರಂಗ ಯಕ್ಷಗಾನ ಸಂಸ್ಥೆ ಇವರ ಸಹಯೋಗ ದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಬೆಳಿಗ್ಗೆ 10.35 ಕ್ಕೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಪ್ರೊ. ಎಂ.ಎ. ಹೆಗಡೆ ಉದ್ಘಾಟಿಸುವರು. ಮಲ್ಯಾಡಿ ಪ್ರಭಾಕರ ಶೆಟ್ಟಿ ಅಧ್ಯಕ್ಷತೆ ವಹಿಸುವರು. ವಿಶೇಷ ಆಹ್ವಾನಿತರಾಗಿ ಕುಂದಾಪುರದ ರಘುರಾಮ ಶೆಟ್ಟಿ, ಸುಬ್ರಹ್ಮಣ್ಯ ಧಾರೇಶ್ವರ ಭಾಗವಹಿಸುವರು.

ಮುಖ್ಯ ಅತಿಥಿಗಳಾಗಿ ಡಾ. ಎಂ.ಜಿ. ಈಶ್ವರಪ್ಪ, ಸಿ.ಎ. ಉಮೇಶ್ ಶೆಟ್ಟಿ, ರವಿಚಂದ್ರ, ಬಿ. ವಾಮದೇವಪ್ಪ ಭಾಗವಹಿಸುವರು.

# ಯುವ ಜನಾಂಗದಲ್ಲಿ ಧಾರ್ಮಿಕ ಪ್ರಜ್ಞೆ ಜಾಗೃತಗೊಳ್ಳಲಿ

### ಶ್ರೀ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವದಲ್ಲಿ ರಂಭಾಪುರಿ ಶ್ರೀ ಕರೆ



ಬಾಳೇಹೊನ್ನೂರು, ಮಾ.26- ಯುವ ಜನಾಂಗದಲ್ಲಿ ಅದ್ಭುತ ಶಕ್ತಿಯಿದೆ. ಉತ್ತಮ ಸಂಸ್ಕಾರ ಮತ್ತು ಸದ್ವಿಚಾರಗಳನ್ನು ಬೆಳೆಸಿದರೆ ಗುಣಾತ್ಮಕ ಕಾರ್ಯಗಳನ್ನು ಮಾಡಲು ಸಾಧ್ಯವಾಗುವುದೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯ ಪಟ್ಟರು.

ಶ್ರೀ ರಂಭಾಪುರಿ ಪೀಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾ ರಥೋತ್ಸವದ ಅಂಗವಾಗಿ ಜರುಗಿದ ಯುವ ಜನಾಂಗದಲ್ಲಿ ಧರ್ಮ ಪ್ರಜ್ಞೆ ಚಿಂತನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಯೌವ್ವನಾವಸ್ಥೆಯಲ್ಲಿ ಬಹಳ ಜಾಗರೂಕತೆಯಿಂದ ಬದುಕು ಕಟ್ಟಿಕೊಳ್ಳಬೇಕಾಗಿದೆ, ಸಂಸ್ಕಾರ ಮತ್ತು ಅವುಗಳ ಪರಿಪಾಲನೆಯಿಂದ ಸುಖ, ಶಾಂತಿಯ ಬದುಕನ್ನು ರೂಪಿಸಿಕೊಳ್ಳಲು ಪ್ರಯತ್ನಿಸಬೇಕೆಂದರು.

ಸಾನ್ನಿಧ್ಯ ವಹಿಸಿದ್ದ ಶ್ರೀ ಕೇದಾರ ಜಗದ್ಗುರು ಭೀಮಾಶಂಕರ ಭಗವತ್ಪಾದರು ತಮ್ಮ ಆಶೀರ್ವಚನದಲ್ಲಿ ವೀರಶೈವ ಧರ್ಮದಲ್ಲಿ ಬುದ್ಧಿಗಿಂತ ಸಂಸ್ಕಾರಕ್ಕೆ ಬಹಳಷ್ಟು ಮಹತ್ವ ಕೊಟ್ಟಿದ್ದಾರೆ. ತತ್ವ, ಸಿದ್ಧಾಂತಗಳ ಅರಿವಿನ ಹಾದಿಯಲ್ಲಿ ನಡೆದಾಗ ಸಶಕ್ತ ಜೀವನ ಪಡೆಯಲು ಸಾಧ್ಯವಾಗುತ್ತದೆ ಎಂದರು.

ಮೈಸೂರು ಜಪದಕಟ್ಟೆ ಮಠದ ಮುಮ್ಮಡಿ ಚಂದ್ರಶೇಖರ ಶ್ರೀಗಳು ಸಿದ್ಧಾಂತ ಶಿಖಾಮಣಿ ಭಾವಾರ್ಥ ನಿರೂಪಣೆ ಕೃತಿ ಬಿಡುಗಡೆ ಮಾಡಿದರು. ಹಣವಾಳ ಗ್ರಾ.ಪಂ. ಸದಸ್ಯ ಸೋಮನಾಥಯ್ಯ ಕುಲಕರ್ಣಿ ಮಾತನಾಡಿದರು. ಶೃಂಗೇರಿ ಶಾಸಕ ಟಿ.ಡಿ. ರಾಜೇಗೌಡರು ಸಮಾರಂಭ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಸಣ್ಣ ನೀರಾವರಿ ಇಲಾಖೆ ಕಾರ್ಯದರ್ಶಿ ಸಿ. ಮೃತ್ಯುಂಜಯ ಸ್ವಾಮಿ, ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ. ಬೇಲೂರು ರಾಘವೇಂದ್ರ ಶೆಟ್ಟಿ, ಶಿವಮೊಗ್ಗ ಶ್ರೀ ಬಸವೇಶ್ವರ ವೀರಶೈವ ಸೇವಾ ಸಂಘದ ಅಧ್ಯಕ್ಷ ಎನ್.ಜೆ. ರಾಜಶೇಖರ್ ಭಾಗವಹಿಸಿದ್ದರು.

ಕಣ್ವಕುಪ್ಪಿ ಗವಿಮಠದ ಡಾ. ನಾಲ್ವಿ ಶಾಂತಲಿಂಗ ಶ್ರೀಗಳು ಮಾತನಾಡಿದರು. ಹುಲಿಕೆರೆ ದೊಡ್ಡಮಠದ ವಿರೂಪಾಕ್ಷಲಿಂಗ ಶ್ರೀಗಳು, ಚಳಗೇರಿ ವೀರಸಂಗಮೇಶ್ವರ ಶ್ರೀಗಳು, ತರೀಕೆರೆ ತಾಲ್ಲೂಕು ವೀರಶೈವ ಸಮಾಜದ ಅಧ್ಯಕ್ಷ ಎಂ.ಬಿ. ಗಿರಿರಾಜು, ಚಿಕ್ಕಮಗಳೂರು ತಾಲ್ಲೂಕು ವೀರಶೈವ ಸಮಾಜದ ಅಧ್ಯಕ್ಷ ಬಿ.ಎ. ಶಿವಶಂಕರ್, ಬೆಂಗಳೂರಿನ ಬಸವರಾಜ ಕನಕಪುರ, ಹುಬ್ಬಳ್ಳಿಯ ವೀರೇಶ ಪಾಟೀಲ ಹಾಗೂ ದೇವರ ಹಿಪ್ಪರಗಿಯ ಬಾಳಯ್ಯ ಇಂಡಿಮಠ, ಅವರನ್ನು ಗುರು ರಕ್ಷೆ ಇತ್ತು ಹಾರೈಸಲಾಯಿತು.

ಸುಳ್ಯ, ಶಿರಕೋಳ, ಮಳಲಿ, ಸಂಗೊಳ್ಳಿ, ಎಂ. ಚಂದರಗಿ ಶ್ರೀಗಳು ಸೇರಿದಂತೆ ನಾಡಿನ 25 ಕ್ಕೂ ಹೆಚ್ಚು ಶ್ರೀಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಅಂದು ಬೆಳಿಗ್ಗೆ ಉಭಯ ಜಗದ್ಗುರುಗಳವರಿಂದ ಧರ್ಮ ಧ್ವಜಾರೋಹಣ ನೆರವೇರಿತು. ಹರಿದ್ರಾ ಲೇಪನ ಪೂಜೆಯೊಂದಿಗೆ ಶ್ರೀ ವೀರಭದ್ರಸ್ವಾಮಿ ಚಿಕ್ಕ ರಥೋತ್ಸವ ಜರುಗಿತು. ಸಿದ್ಧರಬೆಟ್ಟ, ಸುಳ್ಯ, ಶಿರಕೋಳ, ಮಳಲಿ, ಸಂಗೊಳ್ಳಿ ಮೊದಲಾದ ಮಠಾಧೀಶರು ಪಾಲ್ಗೊಂಡಿದ್ದರು.

## ದೊಡ್ಡಬಾತಿ : ಇಂದು ರೇವಣಸಿದ್ದೇಶ್ವರ ಮಹಾರಥೋತ್ಸವ



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದಲ್ಲಿ ಇಂದು ರಾತ್ರಿ 12 ಕ್ಕೆ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ರಥೋತ್ಸವ ಜರುಗುವುದು. ಬೆಳಿಗ್ಗೆ ಶ್ರೀ ಬೀರಲಿಂಗೇಶ್ವರ ಸ್ವಾಮಿ ಮತ್ತು ಆವರಗೊಳ್ಳದ ವೀರಭದ್ರೇಶ್ವರ ಸ್ವಾಮಿ ಒಡಗೂಡಿ ಕೋಟೆಯ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ದಯಮಾಡಿಸುವುದು. ನಂತರ ಹೆಣ್ಣು ಮಕ್ಕಳಿಗೆ ಶಸ್ತ್ರಕಾರ್ಯ, ಅರ್ಚಕರ ಮನೆಯಿಂದ ಅರಿಶಿಣ ಎಣ್ಣೆ ಸಮೇತ ಬೆಟ್ಟಕ್ಕೆ ದಯಮಾಡಿಸಿ, ಉಚ್ಚಯ ಕಾರ್ಯ ನಡೆಯುವುದು. ರಾತ್ರಿ 12 ಕ್ಕೆ ರಥೋತ್ಸವ ಜರುಗುವುದು. ಭಕ್ತರು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಜೊತೆಗೆ ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ದೇವಸ್ಥಾನ ಕಮಿಟಿಯವರು ಕೋರಿದ್ದಾರೆ.

## ಮಲೇಬೆನ್ನೂರು: ಇಂದು ಯುವ ಕಾಂಗ್ರೆಸ್ ಸಭೆ

ಇಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಸಂಜೆ 6.30ಕ್ಕೆ ಯುವ ಕಾಂಗ್ರೆಸ್ ಕಾರ್ಯಕರ್ತರ ಸಭೆ ಕರೆಯಲಾಗಿದೆ ಎಂದು ಮಲೇಬೆನ್ನೂರು ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಜಫ್ರುಲ್ಲಾ ತಿಳಿಸಿದ್ದಾರೆ.

ಶಾಸಕ ಎಸ್. ರಾಮಪ್ಪ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಎಲ್.ಬಿ. ಹನುಮಂತಪ್ಪ ಇನ್ನಿತರರು ಭಾಗವಹಿಸಲಿದ್ದಾರೆ.

## ರಾಜ್ಯ - ರಾಷ್ಟ್ರೀಯ ವಾರ್ತೆ

### ಬಾಂಗ್ಲಾ ಸ್ವಾತಂತ್ರ್ಯ ಬೆಂಬಲಿಸಿ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದೆ



ಢಾಕಾ, ಮಾ. 26 - ಬಾಂಗ್ಲಾದೇಶದ 50ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಆ ದೇಶಕ್ಕೆ ಭೇಟಿ ನೀಡಿ ಅಭಿನಂದಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ತಮ್ಮ ರಾಜಕೀಯ ಜೀವನದ ಮೊದಲ ಪ್ರತಿಭಟನೆಗಳಲ್ಲಿ ಬಾಂಗ್ಲಾದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದೂ ಸೇರಿದೆ ಎಂದಿದ್ದಾರೆ.

ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟ ನನ್ನ ಯಾನದ ಮಹತ್ವದ ಕ್ಷಣವೂ ಆಗಿದೆ. ನಾನು ಮತ್ತು ನನ್ನ ಸಹೋದ್ಯೋಗಿಗಳು ಭಾರತದಲ್ಲಿ ಸತ್ಯಾಗ್ರಹ ನಡೆಸಿದ್ದವು. 20ರ ಹರೆಯದ ಆರಂಭದಲ್ಲಿ ಬಾಂಗ್ಲಾದೇಶ ಸ್ವಾತಂತ್ರ್ಯ ಹೋರಾಟಕ್ಕಾಗಿ ಸತ್ಯಾಗ್ರಹ ನಡೆಸಿ ಜೈಲಿಗೆ ಹೋಗಿದ್ದೆ ಎಂದವರು ತಿಳಿಸಿದ್ದಾರೆ.

ಬಾಂಗ್ಲಾ ದೇಶದ ಪಿತಾಮಹ ಶೇಖ್ ಮುಜೀಬುರ್ ರೆಹಮಾನ್ ಅವರ ಗೌರವಾರ್ಥ 'ಮುಜೀಬ್ ಜಾಕೆಟ್' ಧರಿಸಿದ್ದ ಪ್ರಧಾನಿ ಮೋದಿ, ಬಾಂಗ್ಲಾ ಅಧ್ಯಕ್ಷ ಅಬ್ದುಲ್ ಹಮೀದ್ ಹಾಗೂ ಪ್ರಧಾನ ಮಂತ್ರಿ ಶೇಖ್ ಹಸೀನಾ ಅವರ ಜೊತೆ ಢಾಕಾದಲ್ಲಿ ಆಯೋಜಿಸಲಾಗಿದ್ದ ಸ್ವಾತಂತ್ರ್ಯ ಸಮಾರಂಭದಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ, ಈ ಮಹಾನ್ ದೇಶಕ್ಕಾಗಿ ಸೈನಿಕರು ಮಾಡಿದ ಬಲಿದಾನವನ್ನು, ಅವರ ಶೌರ್ಯ ಮತ್ತು ಸಾಹಸಗಳನ್ನು ಎಂದೂ ಮರೆಯುವುದಿಲ್ಲ ಎಂದು ತಿಳಿಸಿದರು.

### ಕೇರಳ : ಜಾರಿ ನಿರ್ದೇಶನಾಲಯದ ವಿರುದ್ಧ ನ್ಯಾಯಿಕ ತನಿಖೆ

ತಿರುವನಂತಪುರಂ, ಮಾ. 26 – ಬಂಗಾರ ಹಾಗೂ ಡಾಲರ್ ಕಳ್ಳಸಾಗಣೆ ಪ್ರಕರಣದ ತನಿಖೆಯ ಹಾದಿ ತಪ್ಪಿಸಿದ ಆರೋಪದ ಮೇಲೆ ಜಾರಿ ನಿರ್ದೇಶನಾಲಯ ಸೇರಿದಂತೆ ಕೇಂದ್ರೀಯ ಸಂಸ್ಥೆಗಳ ವಿರುದ್ಧ ನ್ಯಾಯಿಕ ತನಿಖೆ ನಡೆಸಬೇಕು ಎಂದು ಶಿಫಾರಸ್ಸು ಮಾಡಲು ಕೇರಳದ ಎಡರಂಗ ಸರ್ಕಾರ ನಿರ್ಧರಿಸಿದೆ. ಕೆಲ ದಿನಗಳ ಹಿಂದಷ್ಟೇ ಜಾರಿ ನಿರ್ದೇಶನಾಲಯದ ಕೆಲ ಅಧಿಕಾರಿಗಳ ವಿರುದ್ಧ ಅಪರಾಧ ದಳ ಎಫ್.ಐ.ಆರ್. ದಾಖಲಿಸಿತ್ತು.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಅಧ್ಯಕ್ಷತೆಯಲ್ಲಿ ಆನ್‌ಲೈನ್ ಮೂಲಕ ನಡೆಸಲಾದ ವಿಶೇಷ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ನಿವೃತ್ತ ನ್ಯಾಯಮೂರ್ತಿ ಕೆ.ವಿ. ಮೋಹನ್ ಅವರ ನೇತೃತ್ವದ ಆಯೋಗ ತನಿಖೆ ನಡೆಸಲಿದೆ ಎಂದು ನಿರ್ಧರಿಸಲಾಗಿದೆ.

ಆದರೆ, ಏಪ್ರಿಲ್ 6ರಂದು ಚುನಾವಣೆ ನಡೆಯಲಿರುವುದರಿಂದ ನೀತಿ ಸಂಹಿತೆ ಜಾರಿಯಲ್ಲಿದ್ದು, ಈ ಕ್ರಮಕ್ಕಾಗಿ ಚುನಾವಣಾ ಆಯೋಗದ ಅನುಮತಿಯನ್ನು ರಾಜ್ಯ ಸರ್ಕಾರ ಕೇಳಲಿದೆ. ಈ ಬಗ್ಗೆ ಹೇಳಿಕೆ ನೀಡಿರುವ ವಿದೇಶಾಂಗ ವ್ಯವಹಾರಗಳ ಖಾತೆ ಅಧೀನ ಸಚಿವ ವಿ. ಮುರಳೀಧರನ್, ಜಾರಿ ನಿರ್ದೇಶನಾಲಯದ ವಿರುದ್ಧ ನ್ಯಾಯಿಕ ತನಿಖೆ ನಡೆಸುವುದು ಶತಮಾನದ ತಮಾಷೆಯಾಗಿದೆ ಎಂದಿದ್ದಾರೆ.

ನಿವೃತ್ತ ನ್ಯಾಯಮೂರ್ತಿಯೊಬ್ಬರಿಗೆ ಅವರು ಬೊಕ್ಕಸದಿಂದ ವೇತನ ನೀಡಬಹುದಷ್ಟೇ. ನ್ಯಾಯಿಕ ಆಯೋಗದ ತನಿಖೆಯಿಂದ ಎಂದಾದರೂ ದೋಷಿಗಳನ್ನು ಪತ್ತೆ ಮಾಡಿ ಶಿಕ್ಷೆ ಒದಗಿಸಲಾಗಿದೆಯೇ? ಇದು ರಾಜ್ಯ ಸರ್ಕಾರದ ಕೊನೆ ತಂತ್ರ ಎಂದವರು ಹೇಳಿದ್ದಾರೆ.

ಇದು ರಾಜ್ಯ ಸರ್ಕಾರದ ಚುನಾವಣಾ ಪ್ರಚಾರದ ಭಾಗ. ಸರ್ಕಾರದ ಕ್ರಮ ಹಾಸ್ಯಾಸ್ಪದವಾಗಿದೆ ಎಂದು ರಾಜ್ಯಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ರಮೇಶ್ ಚೆನ್ನಿತಲ ಹೇಳಿದ್ದಾರೆ.

### ಟಾಟಾ ಸಮೂಹಕ್ಕೆ ಸೈರಸ್ ಮಿಸ್ತ್ರಿ ನೇಮಕ ತಳ್ಳಿ ಹಾಕಿದ ಸುಪ್ರೀಂ

ನವದೆಹಲಿ, ಮಾ. 26 - ಸೈರಸ್ ಮಿಸ್ತ್ರಿ ಅವರನ್ನು ಟಾಟಾ ಸಮೂಹದ ಕಾರ್ಯಕಾರಿ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ರಾಷ್ಟ್ರೀಯ ಕಂಪನಿ ಕಾಯ್ದೆಗಳ ಮೇಲ್ಮನವಿ ನ್ಯಾಯಾಧೀಕರಣ (ಎನ್‌ಸಿಎಲ್‌ಎಟಿ) ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಇದು ಟಾಟಾ ಸಮೂಹಕ್ಕೆ ದೊರೆತ ದೊಡ್ಡ ಜಯವಾಗಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ತೀರ್ಪು ನೀಡಿದ್ದು, ಎನ್‌ಸಿಎಲ್‌ಎಟಿ 2019ರ ಡಿಸೆಂಬರ್ 18ರಂದು ಹೊರಡಿಸಿದ ಆದೇಶವನ್ನು ತಳ್ಳಿ ಹಾಕಿದೆ.

### ಭಾರತಕ್ಕೆ ಜಪಾನ್‌ನಿಂದ 233 ಶತಕೋಟಿ ಯೆನ್ ಸಾಲ

ನವದೆಹಲಿ, ಮಾ. 26 – ದೆಹಲಿಯ ಮೆಟ್ರೋದ ನಾಲ್ಕನೇ ಹಂತ ಸೇರಿದಂತೆ ಹಲವಾರು ಪ್ರಮುಖ ಮೂಲಭೂತ ಸೌಲಭ್ಯ ಯೋಜನೆಗಳಿಗೆ 233 ಶತಕೋಟಿ ಯೆನ್ ಸಾಲ ನೀಡುವುದನ್ನು ಜಪಾನ್ ಅಂತಿಮಗೊಳಿಸಿದೆ. ಹಣಕಾಸು ಸಹಯೋಗದಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ ವ್ಯೂಹಾತ್ಮಕ ಭಾಗಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಲು ನೀಡಲಾಗುವ 4.01 ಶತಕೋಟಿ ಯೆನ್ ಅನುದಾನ ಸಹ ಇದರಲ್ಲಿ ಸೇರಿದೆ. ಬೆಂಗಳೂರು ಮೆಟ್ರೋ ರೈಲು ಯೋಜನೆಯ ಎರಡನೇ ಹಂತಕ್ಕೆ 52.03 ಶತಕೋಟಿ ಯೆನ್ ಹಾಗೂ ದೆಹಲಿ ಮೆಟ್ರೋದ ನಾಲ್ಕನೇ ಹಂತಕ್ಕೆ 119.97 ಶತಕೋಟಿ ಯೆನ್ ಸಾಲ ನೀಡಲಾಗುವುದು.

ದೆಹಲಿ ಮೆಟ್ರೋ ಯೋಜನೆಗೆ ಜಪಾನ್ ಆರಂಭದಿಂದಲೂ ನೆರವು ನೀಡುತ್ತಾ ಬರುತ್ತಿದೆ. ಈ ಯೋಜನೆಗೆ 1997ರಿಂದ ಜಪಾನ್ 47 ಸಾವಿರ ಕೋಟಿ ರೂ.ಗಳ ನೆರವು ನೀಡಿದೆ.

### ಪ್ರಧಾನಿ ಮೋದಿ ಭೇಟಿ ವಿರುದ್ಧ ಪ್ರತಿಭಟನೆ ; ನಾಲ್ವರ ಸಾವು

ಢಾಕಾ, ಮಾ. 26 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಬಾಂಗ್ಲಾದೇಶ ಭೇಟಿ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಚಿತ್ತಗಾಂಗ್ ಪೊಲೀಸರು ರಬ್ಬರ್ ಗುಂಡು ಹಾರಿಸಿದಾಗ ನಾಲ್ವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಪು ಪೊಲೀಸ್ ಠಾಣೆಗೆ ನುಗ್ಗಿ ವ್ಯಾಪಕ ಧ್ವಂಸ ನಡೆಸಿದಾಗ ಅಶ್ರುವಾಯು ಹಾಗೂ ರಬ್ಬರ್ ಗುಂಡು ಹಾರಿಸಬೇಕಾಯಿತು ಎಂದು ಪೊಲೀಸ್ ಅಧಿಕಾರಿ ರಫೀಕುಲ್ ಇಸ್ಲಾಮ್ ತಿಳಿಸಿದ್ದಾರೆ. ಢಾಕಾದಲ್ಲೂ ಸಹ ಮೋದಿ ಭೇಟಿಯ ವಿರುದ್ಧ ಪ್ರತಿಭಟನೆ ನಡೆದಿದ್ದು, ಇಬ್ಬರು ಪತ್ರಕರ್ತರು ಸೇರಿದಂತೆ ಹತ್ತಾರು ಜನ ಘರ್ಷಣೆಯಲ್ಲಿ ಗಾಯಗೊಂಡಿದ್ದಾರೆ.

### ಲಸಿಕೆ ಇನ್ನಷ್ಟು ವಿಸ್ತರಿಸಲು ಪರಿಶೀಲನೆ

ನವದೆಹಲಿ, ಮಾ. 26 - ಕೊರೊನಾ ಲಸಿಕೆ ಪಡೆಯಲು ಇನ್ನಷ್ಟು ವಯೋಮಾನದವರಿಗೆ ಅವಕಾಶ ನೀಡಲು ಪರಿಶೀಲಿಸಲಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ತಿಳಿಸಿದ್ದಾರೆ. ಏಪ್ರಿಲ್ 1ರಿಂದ 45 ವರ್ಷ ಮೀರಿದ ಪ್ರತಿಯೊಬ್ಬರೂ ಲಸಿಕೆ ಪಡೆಯಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಜನರು ಭಾರತದಲ್ಲಿ ತಯಾರಿಸಲಾದ ಲಸಿಕೆಗಳನ್ನು ಅಪ್ಪಿಕೊಂಡಿದ್ದಾರೆ. ಇದರಿಂದಾಗಿ ಕಳೆದ ನಾಲ್ಕು ದಿನಗಳಲ್ಲಿ ಕನಿಷ್ಠ ಒಂದು ಕೋಟಿ ಲಸಿಕೆಗಳನ್ನು ಪಡೆಯಲಾಗಿದೆ ಎಂದವರು ಹೇಳಿದ್ದಾರೆ.

ಜನವರಿ 16ರಿಂದ ಲಸಿಕಾ ಅಭಿಯಾನ ಆರಂಭಿಸಲಾಗಿದೆ. ಪ್ರಸಕ್ತ 60 ವರ್ಷ ಮೀರಿದವರು ಹಾಗೂ 45 ವರ್ಷ ಮೀರಿದ ಸಹ ಅಸ್ವಸ್ಥತೆ ಹೊಂದಿರುವವರಿಗೆ ಲಸಿಕೆ ನೀಡಲಾಗುತ್ತಿದೆ. ಏಪ್ರಿಲ್ 1ರಿಂದ 45 ವರ್ಷ ಮೀರಿದ ಎಲ್ಲರೂ ಲಸಿಕೆ ಪಡೆಯಬಹುದು. ಸಮಾಜದ ಇನ್ನಷ್ಟು ವರ್ಗದವರಿಗೆ ಲಸಿಕೆ ನೀಡಲು ಅನುಮತಿ ನೀಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ ಎಂದವರು ಹೇಳಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ. : 98453 17181

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ ಪೂರ್ವ 30x40, ದಕ್ಷಿಣ 50x80, 50x120, 30x50, 40x60, ಪಶ್ಚಿಮ 38x40, ವಾಜಪೇಯಿ ಬಡಾವಣೆ, ಪಶ್ಚಿಮ 30x40, ಡಾಲರ್ಸ್ ಕಾಲೋನಿ ಉತ್ತರ 30x40, ದಕ್ಷಿಣ 30x40 ಸೈಟ್‌ಗಳು ಕೊಡುವುದಕ್ಕೆ, ತೆಗೆದುಕೊಳ್ಳುವುದಕ್ಕೆ ಸಂಪರ್ಕಿಸಿ
99457 02495 ಐಗೂರು ವಿಜಯ್‌ಕುಮಾರ್
95911 60520 ಸುರೇಶ್

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
30x40 East, 30x40 North, 30x40 West, 30x40 South, 40x60 East, 40x60 North
ಐನಳ್ಳಿ ಚನ್ನಬಸಪ್ಪ ಏಜೆಂಟ್
93410 14130, 99166 12110

**ಕಾರುಗಳು ಬೇಕಾಗಿವೆ**
ಸೆಕೆಂಡ್ ಹ್ಯಾಂಡ್ ಕಾರುಗಳು ಮಾರಾಟಕ್ಕೆ ಬೇಕಾಗಿವೆ. ಸಂಪರ್ಕಿಸಿ : ಬೂಸ್ನೂರ್ ಕಿರಣ್
98440-63409, 97315-63409

**ಸೈಟ್‌ಗಳು ಮಾರಾಟಕ್ಕಿವೆ**
ಮನೆಗಳು ಬಾಡಿಗೆಗೆ/ಲೀಜಿಗೆ ಇವೆ
ಎಂ.ಸಿ.ಸಿ. 'ಬಿ' ಬ್ಲಾಕ್ ಮಮಾಸ್ ಜಾಯಿಂಟ್ ರಸ್ತೆಯಲ್ಲಿ ಸೆಮಿ ಕಮರ್ಷಿಯಲ್ 22x60 ಬಿಲ್ಡಿಂಗ್, ವಿದ್ಯಾನಗರ ತರಳಬಾಳು ಬಡಾವಣೆಯಲ್ಲಿ 3 ಬೆಡ್‌ರೂಂ ಮನೆ ಬಾಡಿಗೆಗೆ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಬೂಸ್ನೂರ್ : 98440-63409

**ಮನೆಗಳು ಮಾರಾಟಕ್ಕಿವೆ**
ಕುವೆಂಪು ಬಡಾವಣೆ ಪೂರ್ವ 40x60, ಸಿದ್ದವೀರಪ್ಪ ಬಡಾವಣೆ ದಕ್ಷಿಣ 30x40 ಮೇಲೆ & ಕೆಳಗೆ, ಪೂರ್ವ 30x46, ವಿನಾಯಕ ಬಡಾವಣೆ (ವಿದ್ಯಾನಗರ) ಪೂರ್ವ 40x60 ಡುಪ್ಲೆಕ್ಸ್, ಉತ್ತರ, 30x40 ಮೇಲೆ ಕೆಳಗೆ, ಎಲ್.ಐ.ಸಿ ಕಾಲೋನಿ ಮೇಲೆ ಕೆಳಗೆ ಮನೆ
ಮನೆ ಕೊಡುವುದಕ್ಕೆ, ತೆಗೆದುಕೊಳ್ಳುವುದಕ್ಕೆ ಸಂಪರ್ಕಿಸಿ
99457 02495 ಐಗೂರು ವಿಜಯ್‌ಕುಮಾರ್
95911 60520 ಸುರೇಶ್

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ ಮತ್ತು ಸುತ್ತ-ಮುತ್ತ ಲೇಔಟ್‌ನಲ್ಲಿ 30x40 East, 30x40 South, 40x58 South, 49x58 South, 30x50 South, 30x45 North west corner
ಐನಳ್ಳಿ ಚನ್ನಬಸಪ್ಪ ಏಜೆಂಟ್
93410 14130
99166 12110

**House For Rent**
Single Bed Room, Hall, Kitchen, Water suply all facility Behind, KSRTC Busstand beside, Veena Clinic, Bhagat singh Nagara, Davanagere.
99161 79106
93410 95651

**ಕೆಲಸಕ್ಕೆ ಬೇಕಾಗಿದ್ದಾರೆ**
ಹೊಸದಾಗಿ ಪ್ರಾರಂಭಿಸುತ್ತಿರುವ ಖಾನಾವಳಿಗೆ ಅಡುಗೆ ಭಟ್ಟರು, ಸಹಾಯಕರು, ಇತರೆ ಕೆಲಸಕ್ಕೆ ಪುರುಷರು/ಮಹಿಳೆಯರು ಬೇಕಾಗಿದ್ದಾರೆ.
76767 60615
98800 38922

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ ಪಶ್ಚಿಮ 40x75, 40x35, 30x40, 30x50 ಪೂರ್ವ 30x50, ಎಸ್.ಎಸ್. ಹೈಟೆಕ್ ಬಡಾವಣೆ ಪೂರ್ವ 30x40 ಪಶ್ಚಿಮ 30x50, ಶಿವಕುಮಾರಸ್ವಾಮಿ ಬಡಾವಣೆ ಪೂರ್ವ 40x60, ಬಸವೇಶ್ವರ ಲೇಔಟ್ ಪೂರ್ವ 30x40 ಪಶ್ಚಿಮ 40x60
ಸೈಟ್‌ಗಳು ಕೊಡುವುದಕ್ಕೆ, ತೆಗೆದುಕೊಳ್ಳುವುದಕ್ಕೆ ಸಂಪರ್ಕಿಸಿ
99457 02495 ಐಗೂರು ವಿಜಯ್‌ಕುಮಾರ್
95911 60520 ಸುರೇಶ್

**ಮನೆಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್ ಪೂರ್ವ 30x40, 30x45 ಪಶ್ಚಿಮ, 30x40 (ಡುಪ್ಲೆಕ್ಸ್), ಎಸ್.ಎಸ್. ಬಡಾವಣೆ ಅಥಣಿ ಕಾಲೇಜ್ ರೋಡ್, ಪೂರ್ವ 30x40 (ಡುಪ್ಲೆಕ್ಸ್), ಬಾಲಾಜಿ ಲೇಔಟ್ ಪಶ್ಚಿಮ 30x50, ಪೂರ್ವ 30x50
ಮನೆ ಕೊಡುವುದಕ್ಕೆ, ತೆಗೆದುಕೊಳ್ಳುವುದಕ್ಕೆ ಸಂಪರ್ಕಿಸಿ
99457 02495 ಐಗೂರು ವಿಜಯ್‌ಕುಮಾರ್
95911 60520 ಸುರೇಶ್

**ಮನೆ ಲೀಸ್‌ಗೆ ಇದೆ**
1st Floor 2BHK ಎಲ್ಲಾ ಸೌಲಭ್ಯಗಳಿರುವ ಹಾಗೂ, 2nd floor 1BHK ಎಲ್ಲಾ ಸೌಲಭ್ಯಗಳಿರುವ ಮನೆಗಳು ಲೀಸ್‌ಗೆ ಇವೆ. ಆಸಕ್ತರು ಸಂಪರ್ಕಿಸಿ: ನಂ 389/G-54, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಹಿಂಭಾಗ, ಜಯನಗರ 'ಎ' ಬ್ಲಾಕ್, ದಾವಣಗೆರೆ.
98447 10844, 88843 62134

**ಮಳಿಗೆಗಳು ಬಾಡಿಗೆಗೆ ಇವೆ**
#818/2 ಚೌಡೇಶ್ವರಿ ದೇವಸ್ಥಾನದ ಹತ್ತಿರ ಶ್ರೀ ಮಲ್ಲಿಕಾರ್ಜುನ ಸಾಮಿಲ್ ಎದುರು, ಬಂಬೂ ಬಜಾರ್ ದಾವಣಗೆರೆಯಲ್ಲಿ ಉತ್ತಮ ಸೌಕರ್ಯವಿರುವ 3 ಮಳಿಗೆಗಳು ಬಾಡಿಗೆಗೆ ಇವೆ.
97315 21477
83105 90581

**ಕೆಲಸಕ್ಕೆ ಬೇಕಾಗಿದ್ದಾರೆ**
ಮಿಥುನ್ ಆಪ್ಟಿಕಲ್‌ಗೆ Optometrist (ದೃಷ್ಟಿ ಮಾಪನಕಾರ) ಬೇಕಾಗಿದ್ದಾರೆ. ದಾವಣಗೆರೆ
76767 60615
98803 00615

**ವೇದಾಂತ ಫೌಂಡೇಷನ್**
PUC, Any Degree & ITI, Diploma ಪಾಸಾದಂತಹ ವಿದ್ಯಾರ್ಥಿಗಳಿಗೆ Skill Training & Bank Course Training ಅನ್ನು ನೀಡಿ ಪ್ರತಿಷ್ಠಿತ ಬ್ಯಾಂಕ್ & ಕಂಪನಿಗಳಲ್ಲಿ ಕೆಲಸವನ್ನು ದೊರಕಿಸಲಾಗುವುದು.
90667 66580
96869 26580

**ರೂಂ ಬಾಡಿಗೆಗೆ ಇದೆ**
ದಾವಣಗೆರೆಯ ಡಿ.ಸಿ.ಎಂ. ಟೌನ್‌ಶಿಪ್ ಹಿಂಭಾಗ ರಾಜೇಂದ್ರ ಬಡಾವಣೆಯಲ್ಲಿ ಸಿಂಗಲ್ ರೂಂ ಖಾಲಿ ಇದೆ. (with Attach Bathroom & Kitchen) ಉದ್ಯೋಗಸ್ಥ ಮಹಿಳಾ/ಪುರುಷರಿಗೆ ಮೊದಲ ಆದ್ಯತೆ. ಆಸಕ್ತರು ಸಂಪರ್ಕಿಸಿ
78299 14494
98802 94988

**ಸೈಟ್ ಮಾರಾಟಕ್ಕಿದೆ**
ನವೋದಯ ಸ್ಕೂಲ್ ಹಿಂಭಾಗ 30x50 ಉತ್ತರ ದಿಕ್ಕಿನ ಸೈಟ್ ಮಾರಾಟಕ್ಕಿದೆ.
4400/SQFT
86181 82332

**ಮನೆ ಬಾಡಿಗೆಗಿದೆ**
2 BHK with Solar, LPG Line, Corporation & Borewell Water ಫಸ್ಟ್ ಫ್ಲೋರ್, ಹೊಸ ಮನೆ, ಎಸ್.ಎಸ್. ಬಡಾವಣೆ ಬಿ ಬ್ಲಾಕ್, ಬಂಟರ ಭವನದ ಹಿಂಭಾಗ ಬಾಡಿಗೆಗಿದೆ
87225 41967, 98442 41311

**ತಕ್ಷಣ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 8000/- ಊಟ, ಮಲಗಲು ಜಾಗ ಉಚಿತ. ಕೆಲಸ ನೆಲ, ಬಾತ್‌ರೂಂ ಇತರೆ ಕ್ಲಿನಿಂಗ್. ಸಂಪರ್ಕಿಸಿ
97400 98047, 97400 98064

**ಮನೆ ಬಾಡಿಗೆಗೆ**
ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ, ಅಮೃತಾನಂದಮಯಿ ಶಾಲೆ ಹತ್ತಿರ, ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
72046 33418
74115 87570

**ಸೈಟ್ ಮಾರಾಟಕ್ಕಿದೆ**
ಎಂ.ಬಿ. ಸಿಟಿ, 2ನೇ ಹಂತದಲ್ಲಿ ಬರುವ ಸೈಟ್ ನಂ 58 ಪೂರ್ವ ಮತ್ತು ಉತ್ತರ ಕಾರ್ನರ್ ಸೈಟ್ ಮಾರಾಟಕ್ಕಿದೆ.
ಅಳತೆ 35+38/2 X 50 =1825 ಚ.ಅಡಿ
97418 11355
94480 18007

**Site For Sale**
30x40 Commercial Corner M.N.K. Mahalakshmi Lay out Avaragere. 30x40 Karanataka Housing Board K.H.B. Davanagere.
80731 78139

**ಮನೆ& ರೂಂಗಳು ಬಾಡಿಗೆ/ಲೀಸ್‌ಗಿವೆ**
ವಿನೋಬನಗರ, 4ನೇ ಮೇನ್, 3ನೇ ಕ್ರಾಸ್‌ನಲ್ಲಿ ಮನೆ ಮತ್ತು ರೂಂಗಳು ಬಾಡಿಗೆ/ಲೀಸ್‌ಗಿವೆ.
98442 41311, 87225 41967

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ತಕ್ಷಣ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ ಇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 16000/- ಊಟ, ರೂಂ ಉಚಿತ.
97400 98064, 97400 98047

**Easy Loan through online**
Above 16000 salary personal loan through online
Without IT Return Business Loan Through Online
Housing loan and Mortgage Loan available including revenue property
63614 28175

**ವಧು ಬೇಕಾಗಿದೆ**
ವಯಸ್ಸು : 34, ಎತ್ತರ : 5.6 ಶಿಕ್ಷಣ : ಬಿ.ಎ., ಬಿ.ಇಡಿ., ಎಂ.ಎ. ದಾವಣಗೆರೆಯಲ್ಲಿ ಸರ್ಕಾರಿ ಕೆಲಸದಲ್ಲಿರುವ ವರನಿಗೆ ಯಾವುದೇ ಜಾತಿಯ ಸುಂದರವಾದ ವಧು ಬೇಕಾಗಿದೆ. ವಧುವಿಗೆ ಮುಂದಿನ ಶಿಕ್ಷಣಕ್ಕೆ, ಕೆಲಸಕ್ಕೆ ಸೇರಲು ಹಾಗೂ ವೈಯಕ್ತಿಕವಾಗಿ ಸಹಾಯ ಮಾಡಲಾಗುವುದು, ಎತ್ತರ ಮತ್ತು ಸುಂದರ ವಧುವಿಗೆ ಆದ್ಯತೆ. ಶೀಘ್ರ & ಸರಳ ವಿವಾಹಕ್ಕೆ ಸಂಪರ್ಕಿಸಿ :
99456 82243

**ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ : ಅಶೋಕ ರೋಡ್, ದಾವಣಗೆರೆ.
99806 12203
82173 35653

**ಸಿಮೆಂಟ್/ಬ್ರಿಕ್ ಮೋಲ್ಡಿಂಗ್ ಮಿಷಿನ್ ಮಾರಾಟಕ್ಕಿದೆ.**
1060 ಮಾಡೆಲ್
93807 13883

**ಆಫೀಸ್/ಮನೆ ಕೆಲಸಕ್ಕೆ**
ಪಿಯುಸಿ ಪಾಸ್ ಆದ ಸದೃಢ ಸಸ್ಯಹಾರಿ ಯುವಕ ಆಫೀಸ್/ಮನೆ ಕೆಲಸ ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ. ಆಸಕ್ತರು ಸಂಪರ್ಕಿಸಿರಿ. ದಿವ್ಯಯೋಗ ಮಂದಿರ, ದಾವಣಗೆರೆ.
94827 31081

**ಜಗಳೂರಿನಲ್ಲಿ ಜಮೀನು ಬೇಕಾಗಿದೆ**
ಜಗಳೂರು ಅಕ್ಕಪಕ್ಕದಲ್ಲಿ ಜಮೀನು (ಹೊಲ) ಬೇಕಾಗಿದೆ. ಸಂಪರ್ಕಿಸಿ :
ಮೊ. : 99643 99129

**ಮನೆ ಮಾರಾಟಕ್ಕಿದೆ**
ಸರಸ್ವತಿ ಬಡಾವಣೆಯಲ್ಲಿ ತುಳಸಿ ಆಯುರ್ವೇದಾಲಯದ ಹತ್ತಿರ 20x30 ಅಳತೆಯುಳ್ಳ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
90198 88512
97405 93969

**ಮನೆ ಬಾಡಿಗೆಗೆ ಇದೆ**
1ನೇ ಮಹಡಿ, ಸಿಂಗಲ್ ಬೆಡ್ ರೂಂ, 25x18 ಅಳತೆಯ ಉತ್ತರ ಮುಖವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ: #3428/M-126, 'ಬಸವಶ್ರೀ' ನಿಲಯ, ಬಸವೇಶ್ವರ ನಗರ, ದಾವಣಗೆರೆ.
ಮೊ: 97312 76324
94494 02488

**ಸೈಟು ಬೇಕಾಗಿದೆ**
ಲೋಕಿಕೆರೆ ರೋಡ್ ನ್ಯೂ ಸರ್ ಎಂ.ವಿ. ಕಾಲೇಜ್ ಹತ್ತಿರ 30x40 ಉತ್ತರ ಅಥವಾ ಪೂರ್ವಕ್ಕೆ ಸೈಟ್ ಬೇಕಾಗಿದೆ.
98444 06587

**ಜಾಗ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 3ನೇ ಮುಖ್ಯರಸ್ತೆ, ಚೇತನ ಹೋಟೆಲ್ ಹತ್ತಿರ, 80×30 ಅಡಿ ಅಳತೆಯ ಜಾಗ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
ಮೊ. : 97310 55765

**ಬೇಕಾಗಿದ್ದಾರೆ**
ದಾವಣಗೆರೆ ಸುತ್ತಮುತ್ತ ಸೆಕ್ಯೂರಿಟಿ, ರಿಸಪ್ಷನಿಸ್ಟ್ (Reception) ರೂಂ ಬಾಯ್, ಕ್ಲೀನರ್ ಬೇಕಾಗಿದ್ದಾರೆ. ಕೆಲವು ಕಡೆ ಊಟದ ವ್ಯವಸ್ಥೆ ಇರುತ್ತದೆ. ಆಕರ್ಷಕ ಸಂಬಳ. ಕೂಡಲೇ ಸಂಪರ್ಕಿಸಿ. ಮತ್ತು ಆಯಾ ಬೇಕಾಗಿದ್ದಾರೆ.
74113 07071, 98806 48207

**ಬೇಕಾಗಿದ್ದಾರೆ**
ಹೆಲ್ಪರ್ಸ್/ಸೇಲ್ಸ್‌ಗೆ ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ನಾಗಣೇಚಿ ಕಟ್ ಪೀಸ್ ಸೆಂಟರ್
#19/1, ಕಾಳಿಕಾದೇವಿ ರೋಡ್, ದಾವಣಗೆರೆ-1.
81055 53341

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 17 ಗುಂಟೆ ಜಮೀನು ಮೇನ್ ರೋಡ್ ಪಕ್ಕ, ಮಿಟ್ಲಕಟ್ಟೆ ಶಾಮನೂರು ರಸ್ತೆ, ಶಾಮನೂರಿಂದ 3 ಕಿ.ಮೀ ಇದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318, 95352 69849

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ Ist Floorನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
82177 72482

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WOMEN'S PARADISE**
**WANTED**
Female Graduate/under graduate having fair sales knowledge is needed
ಸೇಲ್ಸ್ ಹಾಗೂ ಸಹಾಯಕ ಕೆಲಸಕ್ಕೆ ದ್ವಿತೀಯ ಪಿಯುಸಿ ಓದಿರುವ, ಇಂಗ್ಲಿಷ್‌ನಲ್ಲಿ ವ್ಯವಹರಿಸಲು ತಿಳಿದಿರುವ ಮಹಿಳೆ ಬೇಕಾಗಿದ್ದಾರೆ. ಎವಿಕೆ ಕಾಲೇಜ್ ರಸ್ತೆ, ದಾವಣಗೆರೆ.
96204 53208

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಗಾರ್ಡನ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ**
ಸಂಪರ್ಕಿಸಿ : ನೂತನ ಕಾಲೇಜ್, 6000/- ಸಂಬಳ
ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ
ಮೊ. : 97417 23358

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 82173 52453

**ಖಾಲಿ ಜಾಗ ಬಾಡಿಗೆಗೆ ಬೇಕಾಗಿದೆ**
ಸಸ್ಯಹಾರಿ ಹೋಟೆಲ್‌ಗಾಗಿ/ಮೊಬೈಲ್ ಕ್ಯಾಂಟಿನ್‌ಗೆ ಅಥವಾ ರೆಡಿ ಹೋಟೆಲ್ ಬಾಡಿಗೆಗೆ ಬೇಕಾಗಿದೆ. ಸಂಪರ್ಕಿಸಿ
99453 21532


**Smart city Cabs Davanagere**
Etios 4+1 A/c, Minimum 4 Km Rs 100/-, above per kms. Rs 10/- Waiting Charages - 1 Hour Rs. 100/-, 4,8,12 Hour Packages
Call 08192 255555, 99868 18205

**ಉದಯ ಸೂಪರ್ ಬಜಾರ್**
ಹದಡಿ ರಸ್ತೆ, ವಾಣಿ ರೈಸ್ ಮಿಲ್ ಕಾಂಪೌಂಡ್, ದಾವಣಗೆರೆ.
ಶೂ ಮತ್ತು ಚಪ್ಪಲಿಗಳ ಭರ್ಜರಿ ರಿಯಾಯಿತಿ ಮಾರಾಟ
ಚಿಕ್ಕಮಕ್ಕಳಿಗೆ 25%
ದೊಡ್ಡವರಿಗೆ 35%
ಸ್ಟಾಕ್ ಇರುವವರೆಗೆ ಮಾತ್ರ, ತ್ವರೆ ಮಾಡಿ

**WANTED**
A Reputed Science PU College in Davanagere requires Lecturers for the following Subjects
- Physics
- Chemistry
- Mathematics
- Biology
- kannada
- English

Candidates having PG Qualification with 1-5 years of teaching experience may contact us on
99028 49981
96207 68987

# ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಸಿದ್ಧಗಂಗಾ ಶಾಲೆ



ದಾವಣಗೆರೆ, ಮಾ. 26- ಈಚೆಗೆ ನಡೆದ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಶ್ರೀ ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕಿಯರ ವಿಭಾಗದಲ್ಲಿ ಥ್ರೋ-ಬಾಲ್, ಬ್ಯಾಸ್ಕೆಟ್ ಬಾಲ್, ವಾಲಿಬಾಲ್, ಅಥ್ಲೆಟಿಕ್ಸ್ ಹಾಗೂ ಕರಾಟೆ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದು ಒಟ್ಟು 16 ಬಾಲಕಿಯರು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕರ ವಿಭಾಗದಲ್ಲಿ ಖೋ-ಖೋ, ಬ್ಯಾಸ್ಕೆಟ್‌ಬಾಲ್, ಕರಾಟೆ, ಫುಟ್‌ಬಾಲ್, ಟೇಬಲ್ ಟೆನ್ನಿಸ್, ಥ್ರೋಬಾಲ್, ಹಾಗೂ ಅಥ್ಲೆಟಿಕ್ಸ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ಒಟ್ಟು 22 ಬಾಲಕರು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ವಿಜೇತರು :** ಬಾಲಕಿಯರ ವಿಭಾಗದಲ್ಲಿ ಸಹನ ಎಸ್., ಸಹನ (ಅಥ್ಲೆಟಿಕ್ಸ್), ಕವನ, ಖುಷಿ, ಗೀತಾ, ಅಂಜಲಿ, ವರ್ಷ, ನಿಶಾ (ಬ್ಯಾಸ್ಕೆಟ್‌ಬಾಲ್), ಚೈತನ್ಯ, ಲಕ್ಷ್ಮಿ (ವಾಲಿಬಾಲ್), ಲಾವಣ್ಯ, ಆಷಿಯ ರಕ್ಷಿತ (ಕರಾಟೆ), ಜ್ಯೋತಿ, ಸಂಚಿತ (ಖೋ-ಖೋ) ಹಾಗೂ ದರ್ಶಿನಿ (ಥ್ರೋ-ಬಾಲ್).

ಬಾಲಕರ ವಿಭಾಗದಲ್ಲಿ : ಸುದೀಪ, ಕಿರಣ್ (ಖೋ-ಖೋ), ಮೋಹಿತ್ (ಥ್ರೋ-ಬಾಲ್), ಎಲ್. ಯುವರಾಜ್, ಬಿ.ಎಂ. ಮಂಜುನಾಥ್, ಸಿ.ಪಿ. ಮಂಜುನಾಥ್, ದರ್ಶನ್, ಡಿ. ದೀಪಕ್ (ಅಥ್ಲೆಟಿಕ್ಸ್), ಕಲ್ಲೇಶ್ (ಕರಾಟೆ), ಸಂಭ್ರಮ್, ರಾಹುಲ್, ಪವನ್, ಪ್ರಜ್ವಲ್, ಶ್ಯಾಮ್, ವರುಣ್ ಜಾಧವ್, ಜೀವನ್ (ಫುಟ್‌ಬಾಲ್), ಅಬ್ದುಲ್ ಕಲಾಂ ಆಜಾದ್ ಹೆಚ್., ಮಹೇಂದ್ರಕರ್, ಕೆ. ಮಾತರಿಶ್ವ, ಸಿ. ಮಹೇಶ್ (ಬಾಸ್ಕೆಟ್ ಬಾಲ್) ಹಾಗೂ ಸುದರ್ಶನ್, ವಿಕಾಸ್ (ಟೇಬಲ್ ಟೆನ್ನಿಸ್).

# ಕದಳಿ ಮಹಿಳಾ ವೇದಿಕೆಯಿಂದ ದತ್ತಿ ಉಪನ್ಯಾಸ



ದಾವಣಗೆರೆ, ಮಾ. 26- ಕದಳಿ ಮಹಿಳಾ ವೇದಿಕೆ ನಗರ ಘಟಕದಿಂದ ಶುಕ್ರವಾರ 123ನೇ ಕಮ್ಮಟದಲ್ಲಿ ಡಾ. ಶಶಿಕಲಾ ದತ್ತಿ , ಲಿಂ. ಎಳ ಗೌಡ್ರು ಚನ್ನಬಸಮ್ಮ ಮತ್ತು ಎಳ ಗೌಡ್ರು ಬಸಪ್ಪ ದತ್ತಿ ಮತ್ತು ಲಿಂ.ಗೌರಮ್ಮ ಮತ್ತು ವೀರಭದ್ರಯ್ಯ ಹಂಜಿಗಿ ಮಠ ದತ್ತಿ ಕಾರ್ಯಕ್ರಮ ಹಾಗೂ ಉಪನ್ಯಾಸ ವಾಟ್ಸಾಪ್ ಮೂಲಕ ನಡೆಯಿತು.

ಲಿಂಗಾಯತ ಧರ್ಮ ಮಹಾಸಭಾದ ರಾಜ್ಯ ಸಂಚಾಲಕರೂ, ಬಸವ ತತ್ವ ಪ್ರಸಾರಕರೂ ಆದ ಬಸವನಗೌಡ ಗೌಡರ್ '12ನೇ ಶತಮಾನದಲ್ಲಿ ಶರಣರ ವೈಚಾರಿಕ ನಿಲುವು' ವಿಷಯ ಕುರಿತು ಉಪನ್ಯಾಸ ನೀಡಿದರು.

ಶಿಕ್ಷಕಿ ನೇತ್ರಾ ಮಂಜುನಾಥ್ 'ನನಗೆ ಇಷ್ಟವಾದ ವಚನ' ವಿಷಯ ಕುರಿತು ಮಾತನಾಡಿದರು.

ವಿನೋದ ಅಜಗಣ್ಣ ನವರು ಅಧ್ಯಕ್ಷರ ನುಡಿಗಳನ್ನಾಡಿ ವಂದಿಸಿದರು. ಸೌಮ್ಯ ಸತೀಶ್ ಸ್ವಾಗತಿಸಿದರು. ಮಮತಾ ನಾಗರಾಜ್ ದತ್ತಿ ಹಾಗೂ ದತ್ತಿ ದಾನಿಗಳ ಪರಿಚಯ ಮಾಡಿಕೊಟ್ಟರು. ವಸಂತ ಕೆ.ಆರ್.ನಿರೂಪಿಸಿದರು.

# ಆಚರಣೆಗಳಲ್ಲಿ ಹೆಚ್ಚು ಜನ ಸೇರಿದರೆ ನಿರ್ದಾಕ್ಷಿಣ್ಯ ಕ್ರಮ

## ಜನ ಸೇರುವ ಆಚರಣೆಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯುವುದು ಕಡ್ಡಾಯ : ಡಿಸಿ ಬೀಳಗಿ

ದಾವಣಗೆರೆ, ಮಾ. 26- ಜಾತ್ರೆ, ಮದುವೆ, ಹಬ್ಬಗಳು, ಸಮಾರಂಭಗಳು ಮತ್ತು ಇನ್ನಿತರೆ ಧಾರ್ಮಿಕ ಆಚರಣೆ ವೇಳೆ ಸಾರ್ವಜನಿಕರು ಸರ್ಕಾರ ಹೊರಡಿಸಿರುವ ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಹಾಗೂ ನಿಗದಿಪಡಿಸಿದ ಮಿತಿಗಿಂತ ಹೆಚ್ಚು ಜನರು ಸೇರಿದಲ್ಲಿ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಎಚ್ಚರಿಕೆ ನೀಡಿದರು.

ರಾಜ್ಯಾದ್ಯಂತ ಕೊರೊನಾ ನಿಯಂತ್ರಣದ ಹಿನ್ನೆಲೆಯಲ್ಲಿ ಸರ್ಕಾರದ ಮುಖ್ಯ ಮತ್ತು ಅಪರ ಕಾರ್ಯದರ್ಶಿಗಳು, ಎಸ್‌ಪಿ ಮತ್ತು ಸಿಇಓ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಿದ ಸಭೆಯ ಬಳಿಕ ಜಿಲ್ಲಾಧಿಕಾರಿಗಳು ಮಾತನಾಡಿದರು.



ಜಾತ್ರೆ, ಮತ್ತಿತರೆ ಜನ ಸೇರುವ ಯಾವುದೇ ಆಚರಣೆಗೆ ಸಕ್ಷಮ ಪ್ರಾಧಿಕಾರದ ಅನುಮತಿ ಕಡ್ಡಾಯವಾಗಿದೆ. ಅನುಮತಿ ಪಡೆಯದೇ ಆಚರಣೆ ಮಾಡಿದಲ್ಲಿ ಕಾನೂನಿನನ್ವಯ ಕ್ರಮ ಕೈಗೊಳ್ಳಲಾಗುವುದು. ಮಾಸ್ಕ್ ಧರಿಸದೇ ಇರುವವರಿಂದ ದಂಡ ವಸೂಲಿ ಮಾಡಲಾಗುವುದು. ಸಾಮಾಜಿಕ ಅಂತರ ಪಾಲನೆ ಮಾಡದೇ, ಕೋವಿಡ್ ಮಾರ್ಗಸೂಚನೆಗಳನ್ನು ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ಸಾರ್ವಜನಿಕರು ಸರ್ಕಾರದ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಎಚ್ಚರಿಸಿದರು.

ಈ ವೇಳೆ ಎಸ್ಪಿ ಹನುಮಂತರಾಯ, ಜಿ.ಪಂ. ಸಿಇಓ ವಿಜಯ ಮಹಾಂತೇಶ್ ಬಿ. ದಾನಮ್ಮನವರ್, ಎಡಿಸಿ ಪೂಜಾರ ವೀರಮಲ್ಲಪ್ಪ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಡಿಹೆಚ್‌ಓ ಡಾ.ನಾಗರಾಜ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಘವನ್, ಆರ್.ಎಸ್.ಹೆಚ್ ಅಧಿಕಾರಿ ಡಾ.ಮೀನಾಕ್ಷಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ವಿಜಯ್‌ಕುಮಾರ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ ಸೇರಿದಂತೆ, ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

# ಶಿವ ಸೊಸೈಟಿಗೆ ಶ್ರೀಕಾಂತ್, ನಾಗರಾಜಪ್ಪ ಆಯ್ಕೆ



ಹೊನ್ನಾಳಿ, ಮಾ.26- ಪಟ್ಟಣದ ಶಿವ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ನೂತನ ಅಧ್ಯಕ್ಷರಾಗಿ ನ್ಯಾಮತಿಯ ಜೆ. ಶ್ರೀಕಾಂತ್ ಹಾಗೂ ಉಪಾಧ್ಯಕ್ಷರಾಗಿ ಕುಂದೂರಿನ ಎಸ್. ನಾಗರಾಜಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ಕೆ. ಎಂ. ಬಸವಲಿಂಗಪ್ಪ ಹಾಗೂ ಮಾಜಿ ಉಪಾಧ್ಯಕ್ಷೆ ಎಸ್.ಎಂ. ಶಕುಂತಲಾ, ಡಿ.ಎಸ್. ಪ್ರದೀಪ್ ನಿರ್ದೇಶಕರುಗಳಾದ ಎಂ.ಸಿ. ನಾಗೇಂದ್ರಪ್ಪ, ಎಂ.ಜಿ. ಬಸವರಾಜಪ್ಪ, ಕೆ. ಸಿದ್ದೇಶ್ವರಪ್ಪ, ಆರ್. ಸಿ. ಶಂಕರಗೌಡ, ಕೆ.ಎಸ್. ಶಿವಕುಮಾರ್, ಪಿ.ಬಿ. ಶೈಲೇಶ್, ಎಂ.ಆರ್. ವಿಕಾಸ್, ಕೆ.ಜಿ. ಮಂಜುಳಾ, ಕೃಷ್ಣಾನಾಯ್ಕ ಹಾಗೂ ಸೊಸೈಟಿಯ ಕಾರ್ಯದರ್ಶಿ ಎಚ್.ಎನ್. ರುದ್ರೇಶ್ ಉಪಸ್ಥಿತರಿದ್ದರು.

# 'ಅಮರ್ ಜವಾನ್ ಸರ್ಕಲ್' ಎಂದು ನಾಮಕರಣಕ್ಕೆ ಒತ್ತಾಯ

ದಾವಣಗೆರೆ, ಮಾ.26- ನಗರದ ನಿಜಲಿಂಗಪ್ಪ ಬಡಾವಣೆ ಹತ್ತಿರ ಇರುವ ರಿಂಗ್ ರಸ್ತೆ ಕ್ಲಾಕ್ ವೃತ್ತಕ್ಕೆ ಹುತಾತ್ಮ ಯೋಧರ ಸವಿನೆನಪಿಗಾಗಿ 'ಅಮರ್ ಜವಾನ್ ಸರ್ಕಲ್' ಎಂದು ನಾಮಕರಣ ಮಾಡಿ ಹುತಾತ್ಮ ಯೋಧರನ್ನು ಸ್ಮರಿಸಿಕೊಳ್ಳುವ ಒಂದು ಸದಾವಕಾಶವನ್ನು ನಗರದ ಜನತೆಗೆ ಮಾಡಿಕೊಡಬೇಕೆಂದು ಜಿಲ್ಲಾ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಟಿ. ಯುವರಾಜ್ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

ಅಮರ್ ಜವಾನ್ ಸರ್ಕಲ್ ಎಂದು ನಾಮಕರಣ ಮಾಡುವುದರಿಂದ ಇಂದಿನ ಯುವ ಪೀಳಿಗೆಯಲ್ಲಿ ದೇಶ ಭಕ್ತಿಯ ಭಾವನೆ ಬೆಳೆಸಬಹುದಾಗಿದ್ದು, ಈ ವೃತ್ತದ ಪಕ್ಕದಲ್ಲಿ 'ಹುತಾತ್ಮ ಯೋಧರ ಉದ್ಯಾನವನ'ವನ್ನು ಹೊಸದಾಗಿ ನಿರ್ಮಾಣ ಮಾಡುತ್ತಿರುವುದರಿಂದ ಈ ವೃತ್ತಕ್ಕೆ 'ಅಮರ್ ಜವಾನ್ ಸರ್ಕಲ್' ಎಂದು ನಾಮಕರಣ ಮಾಡುವುದರಿಂದ ಹೆಚ್ಚು ಅರ್ಥಪೂಣವಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕುಮಾರಸ್ವಾಮಿ, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಅವರುಗಳಿಗೂ ಸಹ ಮನವಿ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ನಾಗರಿಕ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳಾದ ಗಂಗಾಧರ್, ಪ್ರಕಾಶ್ ಎಸ್., ರಾಮಚಂದ್ರ, ಪ್ರತಾಪ್, ಪ್ರಸನ್ನ ಮತ್ತಿತರರಿದ್ದರು.

# ತರಗನಹಳ್ಳಿ ಬಸವೇಶ್ವರ ರಥೋತ್ಸವ



ಹೊನ್ನಾಳಿ, ಮಾ.26- ತಾಲ್ಲೂಕಿನ ತರಗನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಶ್ರೀ ಬಸವೇಶ್ವರ ದೇವರ ರಥೋತ್ಸವ ಮತ್ತು ಸ್ವಾಮಿಯ ಹೂವಿನ ಅಡ್ಡಪಲ್ಲಕ್ಕಿ ಮಹೋತ್ಸವ ಭಕ್ತರ ಸಮ್ಮುಖದಲ್ಲಿ ನೆರವೇರಿತು.

ವೀರಗಾಸೆ ಕಲಾವಿದರ ನೃತ್ಯ, ವಿವಿಧ ವಾದ್ಯಮೇಳಗಳ ಮಂಗಳಘೋಷ ರಥೋತ್ಸವದ ಸಂಭ್ರಮಕ್ಕೆ ಮೆರುಗು ನೀಡಿದವು. ಅಲಂಕೃತ ರಥಕ್ಕೆ ಭಕ್ತರು ಮಂಡಕ್ಕಿ, ಮೆಣಸಿನಕಾಳು, ಬಾಳೆಹಣ್ಣು ಎಸೆಯುವ ಮೂಲಕ ತಮ್ಮ ಭಕ್ತಿ ಸಮರ್ಪಿಸಿದರು. ರಥ ಮುಂದಕ್ಕೆ ಚಲಿಸಿದ ನಂತರ ಭಕ್ತರು ನೆಲದ ಮೇಲೆ ಬಿದ್ದ ಮೆಣಸಿನ ಕಾಳುಗಳನ್ನು ಆಯ್ದುಕೊಳ್ಳುತ್ತಿದ್ದ ದೃಶ್ಯ ಕಂಡುಬಂತು.

ಮಧ್ಯಾಹ್ನ 3ಕ್ಕೆ ಗ್ರಾಮದಲ್ಲಿ ಬೆಲ್ಲದ ಬಂಡಿ ಮೆರವಣಿಗೆ ನಡೆಯಿತು. ನಂತರ ಓಕಳಿ ಆಡಲಾಯಿತು. ಸಂಜೆ 7ಕ್ಕೆ ಶ್ರೀ ಬಸವೇಶ್ವರ ದೇವರ ಹೂವಿನ ಅಡ್ಡಪಲ್ಲಕ್ಕಿ ಮಹೋತ್ಸವ ನೆರವೇರಿತು. ಗುರುವಾರ ಬೆಳಿಗ್ಗೆ ಸಣ್ಣ ತೇರು (ಉಚ್ಛಾಯ ಮಹೋತ್ಸವ) ರಾಜ ಬೀದಿಗಳಲ್ಲಿ ನಡೆಯಿತು. ಅಂದು ಗ್ರಾಮದ ಮುತ್ತೈದೆಯರು ಕಾಲ್ನಡಿಗೆಯಲ್ಲಿ ದೇವಾಲಯಕ್ಕೆ ತೆರಳಿ ಬಾಯಿ ಬೀಗ ಸೇವೆ ಸಲ್ಲಿಸಿದರು. ಮುತ್ತೈದೆಯರು, ಮಕ್ಕಳು ಉರುಳು ಸೇವೆ ಸಮರ್ಪಿಸಿದರು.

ಹರಕೆ ಹೊತ್ತ ಭಕ್ತರು ಒಣ ಕೊಬ್ಬರಿ ಸುಡುವ ಮೂಲಕ ತಮ್ಮ ಭಕ್ತಿ ಸಮರ್ಪಿಸಿದರು. ಶ್ರೀ ಬಸವೇಶ್ವರ ಸ್ವಾಮಿ ಸೇವಾ ಸಮಿತಿ ಅಧ್ಯಕ್ಷ ಬಸವರಾಜಪ್ಪ, ಸದಸ್ಯರಾದ ಟಿ.ಜಿ. ರಮೇಶ್‌ಗೌಡ, ಹೊಳೆಬಸಪ್ಪ, ದಾಸಪ್ಪರ ಮಹೇಶ್ವರಪ್ಪ, ಕೆ.ಸಿ. ಪ್ರಭಾಕರ್, ಚಂದ್ರಪ್ಪ, ತಿಮ್ಲಾಪುರ ಗ್ರಾಪಂ ಉಪಾಧ್ಯಕ್ಷೆ ಚಂದ್ರಮ್ಮ ಎ.ಕೆ. ರಾಜು, ಸದಸ್ಯ ಶೇಖರಪ್ಪ, ಯುವ ಮುಖಂಡ ಎನ್. ಶಿವರಾಜ್ ಮತ್ತಿತರರು ಉಪಸ್ಥಿತರಿದ್ದರು.

ಟಿ.ಜಿ. ಅರುಣ್‌ಕುಮಾರ್ ಮತ್ತು ಟಿ.ಜಿ. ಜಗದೀಶ್ ಅವರಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ ಡಿ.ಜಿ. ಶಾಂತನಗೌಡ ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತಿ ಸೇವೆ ಸಮರ್ಪಿಸಿದರು.

# ಜಿಲ್ಲಾ ಮಟ್ಟದ ಯುಗಾದಿ ಕವಿಗೋಷ್ಠಿಗೆ ಆಹ್ವಾನ

ದಾವಣಗೆರೆ, ಮಾ. 26- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಏಪ್ರಿಲ್ 11 ರ ಭಾನುವಾರ ಬೆಳಿಗ್ಗೆ 10.35ಕ್ಕೆ ದಾವಣಗೆರೆ ಜಿಲ್ಲಾ ಮಟ್ಟದ ಯುಗಾದಿ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಾಕುಂಚದ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಕವಿಗೋಷ್ಠಿಯಲ್ಲಿ ಭಾಗವಹಿಸುವ ಆಸಕ್ತರು ಏಪ್ರಿಲ್-5 ರೊಳಗೆ ತಮ್ಮ ಹೆಸರು ಊರು, ತಾಲ್ಲೂಕು ಮತ್ತು ಮೊಬೈಲ್ ಸಂಖ್ಯೆಯನ್ನು ವ್ಯಾಟ್ಸಾಪ್ ನಂಬರ್ 9538732777ಗೆ ನೋಂದಾಯಿಸಬಹುದಾಗಿದೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಿ.ಬಿ. ಲೋಕೇಶ್ ತಿಳಿಸಿದ್ದಾರೆ.

ಕವಿಗೋಷ್ಠಿಯಲ್ಲಿ ಭಾಗವಹಿಸಿದ ಸರ್ವರಿಗೂ ನೆನಪಿನ ಕಾಣಿಕೆ, ಪ್ರಮಾಣ ಪತ್ರ ವಿತರಿಸಲಾಗುವುದು ಎಂದು 'ಕಾವ್ಯ-ಕುಂಚ-3' ಕವನ ಸಂಕಲನದ ಪ್ರಧಾನ ಸಂಪಾದಕ ಪಿ.ಕೆ.ನರಸಿಂಹಮೂರ್ತಿ ತಿಳಿಸಿದ್ದಾರೆ.

# ಇಂದು ಮೆಗಾ ಲೋಕ್ ಅದಾಲತ್

ಜಗಳೂರು ಪಟ್ಟಣದಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4.30 ರವರೆಗೆ ನ್ಯಾಯಾಲಯದಲ್ಲಿ ಮೆಗಾ ಲೋಕ್ ಅದಾಲತ್ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅದಾಲತ್‌ನ ಸದುಪಯೋಗ ಪಡೆದುಕೊಳ್ಳಲು ನ್ಯಾಯಾಲಯ ತಿಳಿಸಿದೆ.

ಸದರಿ ಮೆಗಾ ಲೋಕ್ ಅದಾಲತ್ ಮೂಲಕ ಪಕ್ಷಗಾರರು ರಾಜೀಯಾಗಬಲ್ಲ ತಮ್ಮ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಸುಲಭವಾಗಿ ಮತ್ತು ಶೀಘ್ರವಾಗಿ ಯಾವುದೇ ಶುಲ್ಕವಿಲ್ಲದೇ ಇತ್ಯರ್ಥಪಡಿಸಿಕೊಳ್ಳಬಹುದು. ಪಕ್ಷಗಾರರು ನೇರವಾಗಿ ನ್ಯಾಯಾಲಯಕ್ಕೆ ಹಾಜರಾಗಿ ಅಥವಾ ವಿಡಿಯೋ ಕಾನ್ಫರೆನ್ಸ್, ವಿಡಿಯೋ ಕಾಲ್ ಮೂಲಕ ಭಾಗವಹಿಸಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು.

ಚೆಕ್ ಅಮಾನ್ಯ ಪ್ರಕರಣಗಳು, ಬ್ಯಾಂಕ್ ಸಾಲ ವಸೂಲಾತಿ ಪ್ರಕರಣಗಳು, ಮೆಂಟೇನೆನ್ಸ್ ಪ್ರಕರಣಗಳು, ಜೀವನಾಂಶದ ಅರ್ಜಿ ಪ್ರಕರಣಗಳು, ಕೌಟುಂಬಿಕ (ವಿಚ್ಛೇದನ ಹೊರತುಪಡಿಸಿ) ಕಲಹಗಳು, ರಾಜೀಯಾಗಬಲ್ಲ ಅಪರಾಧಿಕ ಪ್ರಕರಣಗಳು, ಕಂದಾಯ ಪ್ರಕರಣಗಳು, ಸಿವಿಲ್ ಪ್ರಕರಣಗಳನ್ನು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಲೋಕ ಅದಾಲತ್‌ನಲ್ಲಿ ಬಗೆಹರಿಸಿಕೊಳ್ಳಬಹುದು.

ಲೋಕ್ ಅದಾಲತ್‌ನಲ್ಲಿ ರಾಜೀ ಮೂಲಕ ಇತ್ಯರ್ಥಪಡಿಸಿಕೊಳ್ಳುವ ಪ್ರಕರಣಗಳಿಗೆ ನ್ಯಾಯಾಲಯದ ಸಂಪೂರ್ಣ ಶುಲ್ಕ ಮರುಪಾವತಿ ಮಾಡಲಾಗುವುದು, ವ್ಯಾಜ್ಯ ಪೂರ್ವ ಪ್ರಕರಣಗಳಿಗೆ ನ್ಯಾಯಾಲಯಗಳ ಶುಲ್ಕ ಕೊಡಬೇಕಾಗಿಲ್ಲ. ಹಾಗೂ ಇಲ್ಲಿ ಇತ್ಯರ್ಥವಾಗುವ ಪ್ರಕರಣಗಳಿಗೆ ಮೇಲ್ಮನವಿ ಇರುವುದಿಲ್ಲ. ಆಸಕ್ತ ಕಕ್ಷಿಗಾರರು ಹೆಚ್ಚಿನ ಮಾಹಿತಿಗಾಗಿ ಇಮೇಲ್ tlscjagalur20@gmail.com, ದೂರವಾಣಿ: 8196227600 ಮೂಲಕ ತಾಲ್ಲೂಕು ಕಾನೂನು ಸೇವೆಗಳ ಸಮಿತಿಯ ಕಛೇರಿಯನ್ನು ಸಂಪರ್ಕಿಸಬಹುದು.

# ಮರುವಿಂಗಡನೆ: 3 ಕ್ಷೇತ್ರಗಳಿಗೆ ಕೊಕ್

ಹೂವಿನಹಡಗಲಿ, ಮಾ.26- ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳ ಮರುವಿಂಗಡನೆ ಆಗಿದ್ದು , ಈ ಮೊದಲು 17 ಕ್ಷೇತ್ರಗಳಿದ್ದರೂ, ಸದಸ್ಯರ ಸಂಖ್ಯೆ ಈಗ 14 ಕ್ಷೇತ್ರಗಳಿಗೆ ಸೀಮಿತವಾಗಿದೆ.

ಈ ಕುರಿತು ರಾಜಕೀಯ ಪಕ್ಷಗಳಾಗಲೀ ಸಾರ್ವಜನಿಕರಾಗಲೀ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ. ಈ ಕ್ಷೇತ್ರಗಳ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಂಡಿರುವ ಸರ್ಕಾರ, ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳಿಗೆ ಈ ಮೊದಲಿದ್ದ ಜನಸಂಖ್ಯೆ ಆಧಾರಿತ ಕ್ಷೇತ್ರಗಳಿಗೆ 12 ಸಾವಿರ ಜನಸಂಖ್ಯೆಯ ನಿಗದಿಪಡಿಸಲಾದರೆ, ಈಗ ಪುನರ್ ವಿಂಗಡನೆ ಹಿನ್ನೆಲೆಯಲ್ಲಿ 15 ಸಾವಿರಕ್ಕೆ ನಿಗದಿಪಡಿಸಿದೆ. ಈ ಕಾರಣಕ್ಕಾಗಿ 3 ಕ್ಷೇತ್ರಗಳು ಬಿಟ್ಟು ಹೋಗಿವೆ ಎಂದು ತಿಳಿದುಬಂದಿದೆ.

ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಐನಳ್ಳಿ, ಸೋವೇನಹಳ್ಳಿ ಮತ್ತು ಹ್ಯಾರಡಾ ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳನ್ನು ರದ್ದುಗೊಳಿಸಲಾಗಿದೆ. ಹಾಗಾಗಿ ಹ್ಯಾರಡಾ ಕ್ಷೇತ್ರವನ್ನು ಕತ್ತೆಬೆನ್ನೂರು, ಕೆ.ಅಯನಳ್ಳಿ ಕ್ಷೇತ್ರವನ್ನು ನಾಗತಿಬಸಾಪುರ, ಸೋವೇನಹಳ್ಳಿ ಕ್ಷೇತ್ರವನ್ನು ಕಾಲ್ವಿ (ಪಶ್ಚಿಮ) ಕ್ಷೇತ್ರಗಳಲ್ಲಿ ವಿಲೀನಗೊಳಿಸಲಾಗಿದೆ.

# ಪ್ರತಿಯೊಬ್ಬರೂ ವರ್ಷಕ್ಕೊಂದು ಗಿಡ ನೆಟ್ಟು ಪೋಷಿಸಿ, ಬೆಳೆಸಬೇಕು




## ಡಾ. ಗಾಯತ್ರಿ ದೇವರಾಜ್

ದಾವಣಗೆರೆ, ಮಾ. 26- ಪರಿಸರ ಸಂರಕ್ಷಣೆ ನಮೆಲ್ಲರ ಹೊಣೆ. ಜಗದ ಎಲ್ಲಾ ಜೀವಿಗಳಿಗೆ ಮೂಲ ಸಂಪನ್ಮೂಲ ಕೇಂದ್ರ ಅರಣ್ಯ. ಇಂದು ಆಧುನಿಕ ಪ್ರಪಂಚದ ಭರಾಟೆಯಲ್ಲಿ ಅರಣ್ಯ ನಾಶದಿಂದ ಹಸಿರು ಮನೆ ಪರಿಣಾಮ ಹೆಚ್ಚಿನ ಆಂತರಿಕ ಉಷ್ಣಾಂಶ, ದಿಕ್ಕು ತಪ್ಪಿದ ಮಾರುತಗಳನ್ನು ನೋಡುತ್ತಿದ್ದೇವೆ. ಆದುದರಿಂದ ಪ್ರತಿಯೊಬ್ಬರೂ ವರ್ಷಕ್ಕೊಂದು ಗಿಡ ನೆಟ್ಟು ಪೋಷಿಸಿ, ಬೆಳೆಸಬೇಕೆಂದು ದಾವಣಗೆರೆ ವಿವಿಯ ಕುಲಸಚಿವರಾದ ಡಾ. ಗಾಯತ್ರಿ ದೇವರಾಜ್ ತಿಳಿಸಿದರು.


ಅವರು ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಬಾಪೂಜಿ ಬಿ ಸ್ಕೂಲ್, ಎಂಬಿಎ ತರಬೇತಿ, ಬಿಐಇಟಿ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಅಂತರರಾಷ್ಟ್ರೀಯ ಅರಣ್ಯ ದಿನದ ಅಂಗವಾಗಿ ನಗರದ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಏರ್ಪಡಿಸಿದ್ದ ನುಗ್ಗೆ ಸಸಿ ನಾಟಿ ಕಾರ್ಯಕ್ರಮ ಏರ್ಪಡಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ದೇವರಾಜ ಟಿ.ಎನ್. ಕೇಂದ್ರದ ಆವರಣದಲ್ಲಿ ಸ್ಥಾಪಿಸಲಾಗಿರುವ ಮಿಯಾವಾಕಿ ಮಿನಿ ಅರಣ್ಯದ ಕುರಿತು ಮಾಹಿತಿಯನ್ನು ನೀಡಿದರು.

ಬಾಪೂಜಿ 'ಬಿ' ಸ್ಕೂಲ್‌ನ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ, ಪ್ರಾಂಶುಪಾಲ ಡಾ. ನವೀನ್ ನಾಗರಾಜ್ ಮಾತನಾಡಿದರು.

ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ, ಪ್ರಾಧ್ಯಾಪಕ ಡಾ. ಸುಜಿತ್, ಡಾ. ಅಶೋಕ, ಡಾ. ಸರೋಜ, ಡಾ. ದಿವ್ಯ ಹಾಗೂ ಕೇಂದ್ರದ ಕೃಷಿ ವಿಸ್ತರಣಾ ವಿಜ್ಞಾನಿ ಜೆ. ರಘುರಾಜ, ಮಣ್ಣು ವಿಜ್ಞಾನ ತಜ್ಞ ಹೆಚ್.ಎಂ. ಸಣ್ಣಗೌಡ್ರ ಮತ್ತಿತರರಿದ್ದರು.

# ಇಂದು ಹರಿಹರಕ್ಕೆ ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ



ಕೂಡಲ ಸಂಗಮದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿಯವರು 2ಎ ಮೀಸಲಾತಿಯ ಹೋರಾಟದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ ಎಲ್ಲಾ ತಾಲ್ಲೂಕುಗಳ ಪಂಚಮಸಾಲಿ ಬಾಂಧವರಿಗೆ ಶರಣು ಶರಣಾರ್ಥಿ ಸಂದೇಶ ನೀಡುವ ಸಲುವಾಗಿ ಹರಿಹರ ನಗರದ ಶ್ರೀ ರಾಘವೇಂದ್ರಸ್ವಾಮಿ ಕಲ್ಯಾಣ ಮಂಟಪಕ್ಕೆ ಇಂದು ಬೆಳಿಗ್ಗೆ 10.30 ಕ್ಕೆ ಆಗಮಿಸಲಿದ್ದಾರೆ. ಎಲ್ಲಾ ಪಂಚಮಸಾಲಿ ಬಾಂಧವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಕೋರಿದ್ದಾರೆ.

# ವೈಯಕ್ತಿಕವಾಗಿ ಹಣ ಪಡೆದಿಲ್ಲ

## ಪಳನಿ ಸ್ವಾಮಿ ಸ್ಪಷ್ಟನೆ

ದಾವಣಗೆರೆ, ಮಾ. 26- ಆಶ್ರಯ ಮನೆ ಅಥವಾ ನಿವೇಶನ ಕೊಡಿಸುವ ಸಲುವಾಗಿ ನಾನು ವೈಯಕ್ತಿಕವಾಗಿ ಯಾರಿಂದಲೂ ಹಣ ಪಡೆದಿಲ್ಲ ಎಂದು ಜಿಲ್ಲೆಯ 3 ಹಾಗೂ 4 ಚಕ್ರಗಳ ಗೂಡ್ಸ್ ವಾಹನಗಳ ಚಾಲಕರು ಮತ್ತು ಮಾಲೀಕರ ಸಂಘದ ಅಧ್ಯಕ್ಷ ಬಿ.ಪಳನಿಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಪಳನಿಸ್ವಾಮಿ ಎಂಬುವವರು ಆಶ್ರಯ ಮನೆಗಳನ್ನು ಕೊಡಿಸುವುದಾಗಿ ಜನರ ಬಳಿ ಹಣಕಾಸು ವ್ಯವಹಾರ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಜನರು ಖಾಸಗಿ ವ್ಯಕ್ತಿಗಳನ್ನು ನಂಬಿ ಹಣ ನೀಡಿ ಮೋಸ ಹೋಗಬಾರದು ಎಂಬ ಜಿಲ್ಲಾಧಿಕಾರಿಗಳ ಹೇಳಿಕೆ ಕುರಿತು ಅವರು ಸ್ಪಷ್ಟನೆ ನೀಡಿದರು.


ನಿವೇಶನ ಹಾಗೂ ವಸತಿ ರಹಿತ ಕುಟುಂಬಕ್ಕೆ ವಸತಿ ಸೌಲಭ್ಯ ಒದಗಿಸಲು ನೀಲಾನಹಳ್ಳಿ ಗ್ರಾಮದಲ್ಲಿ 19 ಎಕರೆ 13 ಗುಂಟೆ ಜಮೀನನ್ನು ಖರೀದಿಸಲು ಸರ್ಕಾರ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಮೊತ್ತವನ್ನು ಮಾಲೀಕರು ಕೇಳಿದ್ದರು.

ಸರ್ಕಾರ ಹೆಚ್ಚು ಮೊತ್ತ ಕೊಡಲು ಒಪ್ಪದಿದ್ದರಿಂದ ಮೇಲಿನ ಹಣವನ್ನು ಅರ್ಜಿದಾರದಿಂದಲೇ ಕೊಡಿಸುವ ಉದ್ದೇಶದಿಂದ ಅರ್ಜಿದಾರರ ಹೆಸರಿನಲ್ಲಿಯೇ ಖಾತೆ ಮಾಡಿಸಿ, ಅವರ ಖಾತೆಯಲ್ಲಿ ಕನಿಷ್ಠ 60 ಸಾವಿರ ರೂ. ಇರುವಂತೆ ಹೇಳಲಾಗಿದೆಯೇ ಹೊರತು, ನಾನು ಯಾರಿಂದಲೂ ವೈಯಕ್ತಿಕವಾಗಿ ಹಣ ಪಡೆದಿಲ್ಲ ಎಂದು ಹೇಳಿದರು.

ಜಿಲ್ಲಾಧಿಕಾರಿಗಳ ಹೇಳಿಕೆ ಬಗ್ಗೆ ಸ್ಪಷ್ಟನೆ ಕೇಳಲು ಬರುವ ಮಂಗಳವಾರ ಸಾರ್ವಜನಿಕರೊಂದಿಗೆ ಡಿಸಿ ಕಚೇರಿಗೆ ತೆರಳುವುದಾಗಿಯೂ ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಜುನಾಥ ಪಿ.ಎಸ್., ಎಸ್.ನಾಗರಾಜ್, ಮಾನಪ್ಪ ಉಪಸ್ಥಿತರಿದ್ದರು.

# ಹರಪನಹಳ್ಳಿಯಲ್ಲಿ ಬಂದ್‌ಗೆ ನೀರಸ ಪ್ರತಿಕ್ರಿಯೆ



ಹರಪನಹಳ್ಳಿ, ಮಾ.26- ಕೇಂದ್ರ ಸರ್ಕಾರ ಜಾರಿಗೊಳಿಸಿರುವ ವಿವಿಧ ತಿದ್ದುಪಡಿಗಳ ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ, ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ, ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ, ರೈತ ಕೃಷಿ ಕಾರ್ಮಿಕರ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಆಶಾ, ಜನಶಕ್ತಿ ರೈತ ಸಂಘಟನೆಗಳು ಹಾಗೂ ವಿವಿಧ ಪ್ರಗತಿ ಪರ ಸಂಘಟನೆಗಳು ಕರೆ ನೀಡಿದ್ದ ಇಂದಿನ ಸ್ವಯಂ ಪ್ರೇರಿತ ಬಂದ್‌ಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಪಟ್ಟಣದಲ್ಲಿ ಔಷಧಿ ಅಂಗಡಿಗಳು, ಸರ್ಕಾರಿ ಕಚೇರಿಗಳು, ಸರ್ಕಾರಿ ಬಸ್, ಖಾಸಗಿ ವಾಹನಗಳ ಓಡಾಟ ಸಾಮಾನ್ಯದಂತಿದ್ದರೆ, ಅಂಗಡಿ ಮುಂಗಟ್ಟುಗಳು ಎಂದಿನಂತೆ ತೆರೆದಿದ್ದವು. ಕೆಪಿಆರ್‌ಎಸ್‌ನ ಹುಲಿಕಟ್ಟೆ ರಾಜಪ್ಪ ಮಾತನಾಡಿ, ಕೇಂದ್ರ ಸರ್ಕಾರದ ರೈತ ಹಾಗೂ ಕೃಷಿ ಕೂಲಿಕಾರರು, ಕಸುಬುದಾರರ ಆಧಾರಿತ ಕೃಷಿ ವಿರೋಧಿ ಮತ್ತು ಕಾರ್ಪೊರೇಟ್ ಕಂಪನಿಗಳ ಪರವಾದ ಕೃಷಿ ಸಂಬಂಧಿತ ಬಿಲ್‌ಗಳನ್ನು ಕೂಡಲೇ ವಾಪಾಸ್ ಪಡೆಯಬೇಕು. ಕರ್ನಾಟಕ ಸರ್ಕಾರ ಈಚೆಗೆ ಘೋಷಿಸಿರುವ ಕೃಷಿ ವಿರೋಧಿ ಹಾಗೂ ಕಾರ್ಮಿಕ ವಿರೋಧಿ ತಿದ್ದುಪಡಿ ಕಾಯ್ದೆ, ಇನ್ನಿತರೆ ಸುಗ್ರೀವಾಜ್ಞೆಗಳನ್ನು ವಾಪಾಸ್ ಪಡೆಯಬೇಕು ಹಾಗೂ ಅವುಗಳನ್ನು ಶಾಸನಗಳನ್ನಾಗಿ ರೂಪಿಸುವ ಪ್ರಯತ್ನಗಳನ್ನು ತಕ್ಷಣವೇ ಕೈಬಿಡಬೇಕು ಎಂದು ಒತ್ತಾಯಿಸಿದರು.

ಸಿ.ಪಿ.ಐ ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಇಡೀ ದೇಶ ಕೋವಿಡ್-19 ರಿಂದ ತೀವ್ರವಾಗಿ ಬಾಧಿತವಾಗಿರುವಾಗ, ಇದರ ಕುರಿತು ಗಮನ ಹರಿಸಿ ಜನತೆಯನ್ನು ರಕ್ಷಿಸುವ ಬದಲು ಇಷ್ಟೊಂದು ಅವಸರವಾಗಿ ಮತ್ತು ಬಲವಂತವಾಗಿ, ಪಾರ್ಲಿಮೆಂಟ್ ನೀತಿಗಳನ್ನು ಉಲ್ಲಂಘಿಸಿ, ಈ ಬಿಲ್‌ಗಳನ್ನು ದೇಶದ ಮೇಲೆ ಹೇರುವ ಅವಶ್ಯಕತೆ ಯಾದರೂ ಏನಿತ್ತು? ಇದೊಂದು ಸಮುದಾಯಗಳ ಮೇಲಿನ ಚಾರಿತ್ರ್ಯಕ ದೌರ್ಜನ್ಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಪಿಎಂ ಕಾರ್ಯದರ್ಶಿ ಹುಲಿಕಟ್ಟೆ ರೆಹಮತ್, ಎಐಎಸ್‌ಎಫ್ ಚಂದ್ರನಾಯ್ಕ, ಸಿಪಿಐ ಎಂ. ಎಲ್. ಸಂದೇರ್ ಪರಶುರಾಮ್, ವಿವಿಧ ಸಂಘಟನೆಯ ಎಂ. ಶಬ್ಬೀರ್, ಬಸವರಾಜ್ ಹಾರಕನಾಳು, ಬಸವರಾಜು ಮಾಡ್ಲಿಗೇರಿ ಇನ್ನಿತರರಿದ್ದರು.

# ಇಂದು ವಿದ್ಯುತ್ ವ್ಯತ್ಯಯ

ನಗರದ ಹೆಚ್.ಕೆ. ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗು ನಿಟುವಳ್ಳಿ ಹೊಸಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು ಮತ್ತು ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ ಸುತ್ತ ಮುತ್ತಲಿನ ಪ್ರದೇಶಗಳು ಹಾಗೂ ಇ.ಎಸ್.ಐ ಆಸ್ಪತ್ರೆ, ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಕೊಮಾರನಹಳ್ಳಿಯಲ್ಲಿ ಇಂದಿನಿಂದ ಕ್ರಿಕೆಟ್ ಟೂರ್ನಿ

ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿ ಫ್ರೆಂಡ್ಸ್ ಕ್ರಿಕೆಟರ್ಸ್ ವತಿಯಿಂದ ಪ್ರಥಮ ಬಾರಿಗೆ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿಯನ್ನು ಇಂದಿನಿಂದ 29 ರವರೆಗೆ ಹಮ್ಮಿಕೊಳ್ಳಲಾಗಿದೆ. ಪ್ರಥಮ ಬಹುಮಾನ 35 ಸಾವಿರ ರೂ. ಹಾಗೂ ಆಕರ್ಷಕ ಟ್ರೋಫಿ ಮತ್ತು ದ್ವಿತೀಯ ಬಹುಮಾನ 25 ಸಾವಿರ ರೂ. ಹಾಗೂ ಆಕರ್ಷಕ ಟ್ರೋಫಿ ಒಳಗೊಂಡಿರುತ್ತದೆ. ಆಸಕ್ತ ತಂಡಗಳು 1500 ರೂ. ಪ್ರವೇಶ ಶುಲ್ಕದೊಂದಿಗೆ ಹೆಸರು ನೋಂದಾಯಿಸುವಂತೆ ಸುನೀಲ್ (97397-80100), ಹಾಲೇಶ್ (99648-84372), ಚೇತನ್ (97393-48424) ಇವರನ್ನು ಸಂಪರ್ಕಿಸುವುದು.

# ಕೃಷಿ ಕಾಯ್ದೆ ಹಿಂಪಡೆಯಲು ಆಗ್ರಹ



ದಾವಣಗೆರೆ ಮಾ. 26 - ರೈತ ವಿರೋಧಿ ಮೂರು ಕರಾಳ ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕೆಂದು ಆಗ್ರಹಿಸಿ, ಸಂಯುಕ್ತ ಹೋರಾಟ ಕರ್ನಾಟಕದ ವತಿಯಿಂದ ಉಪ ವಿಭಾಗಾಧಿಕಾರಿ ಮೂಲಕ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲಾಯಿತು.

ಭಾರತ್ ಬಂದ್ ಬೆಂಬಲಿಸುವ ಜೊತೆಗೆ ರಾಷ್ಟ್ರಮಟ್ಟದ ರೈತ ನಾಯಕ ರಾಕೇಶ್ ಟಿಕಾಯತ್ ಮೇಲಿನ ಕೇಸನ್ನು ರದ್ದುಗೊಳಿಸುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು.

ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕು. ವಿದ್ಯುತ್ ಮಸೂದೆ-2020ನ್ನು ವಾಪಾಸ್ ಪಡೆಯಬೇಕು ಹಾಗೂ ಕೃಷಿ ಉತ್ಪನ್ನಗಳಿಗೆ ಡಾ. ಸ್ವಾಮಿನಾಥನ್ ವರದಿ ಅನ್ವಯ ಕನಿಷ್ಟ ಬೆಂಬಲ ಬೆಲೆ ಖಾತರಿ ಮಾಡುವ ಕಾನೂನು ರಚಿಸುವಂತೆ ಆಗ್ರಹಿಸಿ, ದೆಹಲಿಯಲ್ಲಿ ನಾಲ್ಕು ತಿಂಗಳಿಗೂ ಮೀರಿ ಪ್ರತಿಭಟನೆ ಮಾಡುತ್ತಿರುವ ರೈತರ ಮೇಲೆ ನಡೆಸುತ್ತಿರುವ ದೌರ್ಜನ್ಯ, ದಬ್ಬಾಳಿಕೆ ನಿಲ್ಲಿಸುವಂತೆ ಮನವಿ ಮಾಡಿದರು.

ದೆಹಲಿಯ ಶಾಂತಿಯುತ ಹೋರಾಟಕ್ಕೆ ಕೇಂದ್ರ ಸರ್ಕಾರ ಪ್ರಜಾತಾಂತ್ರಿಕವಾಗಿ ಸ್ಪಂದಿಸದೇ ಇದ್ದಾಗ ದೇಶವ್ಯಾಪಿ ರೈತ ಚಳವಳಿ ತೀವ್ರಗೊಳಿಸಲು ಬೃಹತ್ ಸಭೆಗಳನ್ನು ರೈತ ಸಂಘಟನೆಗಳವರು ಏರ್ಪಡಿಸುತ್ತೇವೆ. ಇದರ ಭಾಗವಾಗಿ ಶಿವಮೊಗ್ಗದಲ್ಲಿ ಕೂಡ ಸಭೆ ನಡೆದಾಗ ಪೊಲೀಸರು ರಾಕೇಶ್ ಟಿಕಾಯತ್ ಮೇಲೆ ಪ್ರಚೋದನಾಕಾರಿ ಭಾಷಣದ ದೂರು ದಾಖಲಿಸಿರುವುದು ಅತ್ಯಂತ ಖಂಡನೀಯ. ಇದು ಸರ್ಕಾರದ ಪ್ರಜಾತಾಂತ್ರಿಕ ಹೋರಾಟವನ್ನು ಹತ್ತಿಕ್ಕುವ ಫ್ಯಾಸಿಸ್ಟ್ ಧೋರಣೆಯಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈ ಕೂಡಲೇ ರಾಕೇಶ್ ಟಿಕಾಯತ್ ಮೇಲಿನ ಮೊಕದ್ದಮೆಗಳನ್ನು ಕೈಬಿಡುವಂತೆ ಒತ್ತಾಯಿಸಿದರು.

ಮನವಿ ಸಲ್ಲಿಸುವ ಸಂದರ್ಭದಲ್ಲಿ ರೈತ ಮುಖಂಡರೂ, ವಿವಿಧ ಸಂಘಟನೆಗಳ ಮುಖಂಡರೂ ಆದ ತೇಜಸ್ವಿ ಪಟೇಲ್, ಅನಿಸ್ ಪಾಷ, ಸತೀಶ್ ಅರವಿಂದ್, ತಿಪ್ಪೇಸ್ವಾಮಿ ಅಣಬೇರು ಮತ್ತಿತರರಿದ್ದರು.

# ಅರಿವು - ಆಚಾರದ ಸಂಗಮದಿಂದ ನಾಡಿನ ಏಳ್ಗೆ

## ಶಿಕ್ಷಣ ಜ್ಞಾನ ಪತ್ರಿಕೆ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಾಣೇಹಳ್ಳಿಯ ಪಂಡಿತಾರಾಧ್ಯ ಶ್ರೀಗಳು



ದಾವಣಗೆರೆ, ಮಾ.26- ಅರಿವು ಹಾಗೂ ಆಚಾರದ ಸಂಗಮದಿಂದ ಮಾತ್ರ ವ್ಯಕ್ತಿ ಹಾಗೂ ನಾಡಿನ ಏಳ್ಗೆ ಸಾಧ್ಯ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಪ್ರತಿಪಾದಿಸಿದರು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಮೊನ್ನೆ ಹಮ್ಮಿಕೊಳ್ಳಲಾಗಿದ್ದ ಶಿಕ್ಷಣ ಜ್ಞಾನ ಪತ್ರಿಕೆಯ ವಾರ್ಷಿಕೋತ್ಸವ ಮತ್ತು ರಾಜ್ಯ ಮಟ್ಟದ ಶೈಕ್ಷಣಿಕ ಸಮಾವೇಶ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಪ್ರಸ್ತುತ ದಿನಗಳಲ್ಲಿ ಅರಿವಿದ್ದರೆ ಆಚಾರವಿಲ್ಲ, ಆಚಾರವಿದ್ದರೆ ಅರಿವಿಲ್ಲ ಎಂಬಂತಾಗಿದೆ. ಹೀಗಾಗಿ ಸಮಾಜದಲ್ಲಿ ಅನೇಕ ಸಮಸ್ಯೆಗಳು ಉಲ್ಬಣ ಗೊಂಡಿವೆ. ವ್ಯಕ್ತಿ ಹಾಗೂ ನಾಡಿನ ಏಳ್ಗೆಯಾಗ ಬೇಕಾದರೆ ಅರಿವು ಮತ್ತು ಆಚಾರ ಸಂಗಮವಾಗ ಬೇಕು. ಅದು ಮೊದಲು ನಮ್ಮ ಮನೆಯಿಂದ ಆರಂಭವಾಗಬೇಕು ಎಂದು ಹೇಳಿದರು.

ಹೊನ್ನು, ಹೆಣ್ಣು ಹಾಗೂ ಮಣ್ಣು ಮಾನವನ ನಿಜವಾದ ಆಸ್ತಿ ಎಂದು ಅನೇಕರು ಭ್ರಮಿಸಿದ್ದಾರೆ. ಆದರೆ ಶರಣರು ಮಾನವನ ನಿಜವಾದ ಆಸ್ತಿ ಜ್ಞಾನ ಎಂದು ಹೇಳಿದ್ದಾರೆ. ಜ್ಞಾನವು ಅರಿವು ಹಾಗೂ ಆಚಾರವನ್ನು ಒಳಗೊಂಡಿದ್ದು. ಕೇವಲ ಅರಿವು ಅಥವಾ ಕೇವಲ ಆಚಾರವಿದ್ದರೆ ಜ್ಞಾನವಾಗದು. ಅರಿವು-ಆಚಾರ ಒಳಗೊಂಡದ್ದು ಮಾತ್ರ ಸುಜ್ಞಾನವಾಗಲು ಸಾಧ್ಯವಿದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಇಂದಿನ ಶಿಕ್ಷಣದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ಕಂಪ್ಯೂಟರ್ ಬಳಕೆಯಿಂದ ಬಹುಮುಖ ಪ್ರತಿಭೆಗಳು ಹೊರಹೊಮ್ಮುತ್ತಿರುವುದು ಹೆಮ್ಮೆ ಪಡುವಂತಹ ಸಂಗತಿ ಎಂದರು.

ಶಿಕ್ಷಣ ಕಲಿತಂತೆ ವಿನಯ, ವಿಧೇಯತೆ, ತಾಳ್ಮೆ ಸಾಮಾಜೀಕರಣ ವ್ಯಕ್ತಿಯಲ್ಲಿ ರೂಪುಗೊಂಡಾಗ ಆರೋಗ್ಯಕರ ಸಮಾಜ ಸಾಧ್ಯ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರೊ. ಕೆ. ಆರ್. ಸಿದ್ದಪ್ಪ, ಒಂದು ಪತ್ರಿಕೆಯ ಬಳಗ ರಾಜ್ಯ ಮಟ್ಟದ ಶೈಕ್ಷಣಿಕ ಸಮಾವೇಶ ನಡೆಸುವುದು ವಿಶೇಷ ಸಂಗತಿ. ಶಿಕ್ಷಣ ಜ್ಞಾನ, ಪತ್ರಿಕೆಯು ಸತತವಾಗಿ 18ನೇ ರಾಜ್ಯ ಮಟ್ಟದ ಶೈಕ್ಷಣಿಕ ಸಮಾವೇಶ ನಡೆಸುವುದರ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ಹಾಗೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಪುರಸ್ಕಾರ ನೀಡುತ್ತಿರುವುದು ಶ್ಲಾಘನೀಯ ಎಂದರು.

ರಾಜ್ಯದ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು. ಪತ್ರಿಕೆಯ ಗೌರವ ಸಂಪಾದಕ ಹೆಚ್. ರಾಮಚಂದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯಸ್ಥರಾದ ಜಸ್ಟಿನ್ ಡಿಸೌಜ, ಚಿಕ್ಕೋಡಿಯ ಎಸ್.ಎಂ ತೇಲಿ, ಗೌರಿಬಿದನೂರಿನ ಬಿ.ಟಿ. ಶಿವಶಂಕರ್, ಶಿರಸಿಯ ಅಂಜನಾ ಭಟ್, ಯಲಹಂಕದ ಸಿ.ಓ. ಪಾಪೇಗೌಡ ಇತರರು ಉಪಸ್ಥಿತರಿದ್ದರು.

ಭದ್ರಾವತಿಯ ಅಪೇಕ್ಷಾ ಮಂಜುನಾಥ ತಂಡ, ಶಿರಸಿಯ ಅನನ್ಯ ಹೆಗಡೆ, ಸಿದ್ಧಗಂಗಾ ಶಾಲಾ ವಿದ್ಯಾರ್ಥಿಗಳು, ಸಂಗೀತ ಶಿಕ್ಷಕರಾದ ಎ. ಸಿದ್ದಪ್ಪ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಯಶಾ ದಿನೇಶ್ ಪ್ರಾರ್ಥಿಸಿದರು. ಎಸ್.ವಿ. ನಾಗರಾಜ್ ಸ್ವಾಗತಿಸಿದರು. ಎಂ. ವನಿತಾ ರಾಜು ನಿರೂಪಿಸಿದರು. ಹೆಚ್. ಎಂ. ಪುಷ್ಪ ಎಸ್. ಚಂದ್ರಕುಮಾರ್ ವಂದಿಸಿದರು.

## ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕೋವಿಡ್ ತಪಾಸಣೆ



ದಾವಣಗೆರೆ, ಮಾ. 26 - ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆಯಿಂದ ನಗರದ ಅಕ್ಕಮಹಾದೇವಿ ಬಾಲಿಕಾ ಮತ್ತು ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ 480 ವಿದ್ಯಾರ್ಥಿಗಳಿಗೆ 19ನೇ ಕೋವಿಡ್ ತಪಾಸಣಾ ಶಿಬಿರವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಣ ಸಂಯೋಜಕ ಡಿ. ನಾಗರಾಜ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ. ಗಾಯತ್ರಿ, ನೋಡಲ್ ಅಧಿಕಾರಿ ಹೆಚ್. ವಿ. ಶ್ರೀನಿವಾಸ್, ಮುಖ್ಯ ಶಿಕ್ಷಕ ಹೆಚ್. ನಿಂಗಪ್ಪ, ದೈಹಿಕ ಶಿಕ್ಷಕಿ ಶ್ರೀಮತಿ ಜ್ಯೋತಿ ಮತ್ತಿತರರು ಉಪಸ್ಥಿತರಿದ್ದರು.

## ಒಂದೇ ವೇದಿಕೆಯಲ್ಲಿ 1008 ಮಹಿಳೆಯರ ಶಿವತಾಂಡವ ಸ್ತೋತ್ರ ಪಠಣ



ದಾವಣಗೆರೆ, ಮಾ.27 - ಶಿವತಾಂಡವ ಸ್ತೋತ್ರ ಪಠಣಕ್ಕಾಗಿ ನಗರದ ಮಹಿಳಾ ತಂಡವು ಕಾಶಿಯ ಆಸೀ ಘಾಟ್‌ನಲ್ಲಿ ಒಂದೇ ವೇದಿಕೆಯಲ್ಲಿ 1008 ಮಹಿಳೆಯರನ್ನೊಳಗೊಂಡ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಮೂಲಕ ಮಹಿಳಾ ದಿನವನ್ನು ಆಚರಿಸಿದ್ದಾರೆ. ಶೋಭಾ ಕೊಟ್ರೇಶ್, ಹೇಮಾವತಿ ಖಂಡೋಬರಾವ್, ಅನು ಅಣಬೂರ್ ಮಠ್, ಕೋಮಲ್, ಬಿ ಎನ್, ಸುಮಿತ್ರಾಬಾಯಿ, ಹೇಮಾವತಿ ಇನ್ನೂ ಕೆಲವರು ಭಾಗವಹಿಸಿದ್ದರು.

## ಯುಬಿಐ ಮಾಜಿ ಸಿಎಂಡಿ ನಿವಾಸಗಳ ಮೇಲೆ ದಾಳಿ

ನವದೆಹಲಿ, ಮಾ. 26 – ಅಕ್ರಮ ಹಣ ಆರೋಪಕ್ಕೆ ಸಂಬಂಧಿಸಿದಂತೆ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ (ಯು.ಬಿ.ಐ.) ಮಾಜಿ ಸಿ.ಎಂ.ಡಿ. ಅರ್ಚನ ಭಾರ್ಗವ ನಿವಾಸಗಳ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ. ಅಕ್ರಮ ಹಣ ತಡೆ ಕಾಯ್ದೆಯ ಅನ್ವಯ ದೆಹಲಿಯಲ್ಲಿರುವ ಎರಡು ಮನೆಗಳ ಮೇಲೆ ದಾಳಿ ನಡೆಸಲಾಗಿದೆ. ಅಕ್ರಮ ಆಸ್ತಿಗೆ ಸಂಬಂಧಿಸಿದಂತೆ ಸಿಬಿಐ 2018 ರಲ್ಲಿ ದಾಖಲಿಸಿದ್ದ ಎಫ್.ಐ.ಆರ್. ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

# ಮುಳಗಾಯಿ ಬೆಲೆ ಕುಸಿತ : ಪುಣ್ಯಕ್ಷೇತ್ರಕ್ಕೆ ರವಾನೆ



ದಾವಣಗೆರೆ, ಮಾ.26- ಮುಳಗಾಯಿ ಬೆಲೆ ಕುಸಿತದಿಂದ ಕಂಗಾಲಾದ ರೈತನೋರ್ವ ನಷ್ಟದ ಬದಲು ಪುಣ್ಯಕ್ಷೇತ್ರಕ್ಕೆ ಕಳುಹಿಸಿದ ಪ್ರಸಂಗ ನಡೆದಿದೆ.

ತಾಲ್ಲೂಕಿನ ರಾಂಪುರದ ಪ್ರಗತಿಪರ ರೈತ ಆರ್.ಜಿ. ಬಸವರಾಜ್ ಒಟ್ಟು 6 ಎಕರೆ ಜಮೀನಿನಲ್ಲಿ 2 ಎಕರೆಯಲ್ಲಿ ಕಳೆದ ಡಿಸೆಂಬರ್‌ನಲ್ಲಿ ಮುಳುಗಾಯಿ ಬೆಳೆದಿದ್ದರು. ಆದರೆ ಮಾರುಕಟ್ಟೆಯಲ್ಲಿ ಬದನೆಕಾಯಿಯನ್ನು ದಲ್ಲಾಳಿಗಳು ಸೇರಿದಂತೆ ವ್ಯಾಪಾರಿಗಳು ಒಂದು ಕೆಜಿಗೆ ಎರಡು ರೂ.ಗೆ ಕೇಳಿದ್ದರಿಂದ ಈ ರೈತ ಕಂಗಾಲಾಗಿ, ಸುಮಾರು 10 ಟನ್‌ನಷ್ಟು ಮುಳುಗಾಯಿಯಲ್ಲಿ 5 ಟನ್‌ನಷ್ಟು ಮುಳುಗಾಯಿ ಯನ್ನು ಮಾರಾಟ ಮಾಡದೇ ಪುಣ್ಯಕ್ಷೇತ್ರ ಧರ್ಮಸ್ಥಳ ಮಂಜುನಾಥನ ದರ್ಶನಕ್ಕೆ ಬರುವ ಭಕ್ತಾದಿಗಳ ಪ್ರಸಾದಕ್ಕೆ ಕಳುಹಿಸಿದ್ದಾರೆ. ಬಂಡವಾಳಕ್ಕೆ ತಕ್ಕಂತೆ ಶೇ. 20ರಷ್ಟು ಸಹ ಹಣ ಬಾರದ ಹಿನ್ನೆಲೆ ಧರ್ಮಸ್ಥಳಕ್ಕೆ ಸುಮಾರು ಐದು ಟನ್ ಮುಳಗಾಯಿಯನ್ನು ರೈತ ಕಳುಹಿಸಿದ್ದಾರೆ.

ನಮ್ಮಿಂದ ಕೆಜಿಗೆ ಎರಡು ರೂ.ಗೆ ಖರೀದಿಸಿ ಗ್ರಾಹಕರಿಗೆ 20 ರೂ.ಗೆ ಮಾರಾಟ ಮಾಡುವ ವ್ಯಾಪಾರಿಗೆ ಲಾಭ ಮಾಡುವ ಬದಲು ಪುಣ್ಯ ಕಾರ್ಯಕ್ಕೆ ಧರ್ಮಸ್ಥಳಕ್ಕೆ ಮುಳಗಾಯಿ ಕಳುಹಿಸುವುದೇ ಲೇಸು ಎಂದು ರೈತ ಬಸವರಾಜ್ ಗುರುವಾರ ರಾತ್ರಿ ಧರ್ಮಸ್ಥಳಕ್ಕೆ ಮುಳಗಾಯಿ ರವಾನೆ ಮಾಡಿದ್ದಾರೆ ಎನ್ನಲಾಗಿದೆ.

ಹೊಲದಲ್ಲಿ ಇನ್ನೂ 5-6 ಟನ್‌ಗಿಂತಲೂ ಅಧಿಕ ಮುಳುಗಾಯಿ ಇದೆ. ಅದನ್ನೂ ತುಮಕೂರಿನ ಶ್ರೀ ಸಿದ್ಧಗಂಗಾ ಮಠಕ್ಕೆ ಕಳಿಸಿಕೊಡುವ ಉದ್ದೇಶವನ್ನು ಈ ರೈತ ಹೊಂದಿದ್ದಾರೆ ಎಂದು ಹೇಳಲಾಗಿದೆ.

## ಜಾರಕಿಹೊಳಿ ಸಾಕ್ಷಿ ಬಹಿರಂಗಕ್ಕೆ ಸಿದ್ದು ಒತ್ತಾಯ

ಬೆಂಗಳೂರು, ಮಾ. 26 - ತಮ್ಮ ಬಳಿ ಇರುವ ಬೆಚ್ಚಿ ಬೀಳಿಸುವ ಸಾಕ್ಷ್ಯವನ್ನು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರು ಬಹಿರಂಗ ಮಾಡಬೇಕು ಎಂದು ಪ್ರತಿಪಕ್ಷ ನಾಯಕ ಸಿದ್ಧರಾಮಯ್ಯ ಒತ್ತಾಯ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಶುಕ್ರವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ರಮೇಶ್ ಜಾರಕಿಹೊಳಿ ಪ್ರಸ್ತಾಪಿಸಿರುವ ಮಹಾನಾಯಕರು ಯಾರು ಎಂದು ನನಗೆ ಗೊತ್ತಿಲ್ಲ. ಕಾಂಗ್ರೆಸ್‌ನಲ್ಲಿ ತುಂಬಾ ಜನ ನಾಯಕರಿದ್ದಾರೆ. ಬಿಜೆಪಿಯಲ್ಲೂ ಮಹಾ ನಾಯಕರಿದ್ದಾರೆ. ಸುಮ್ಮನೆ ಗುಮ್ಮ ಬಿಡಬಾರದು. ಸತ್ಯವನ್ನು ಬಹಿರಂಗಪಡಿಸಬೇಕು ಎಂದರು.

ತಮ್ಮ ಕಿಸೆಯಲ್ಲಿ ಮಹಾನಾಯಕನನ್ನು ಬೆಚ್ಚಿಬೀಳಿಸುವ ಸಾಕ್ಷ್ಯಗಳಿವೆ ಎಂದು ರಮೇಶ್ ಜಾರಕಿಹೊಳಿ ಹೇಳಿದ್ದಾರೆ. ಅದನ್ನು ಅವರು ಕೂಡಲೇ ಬಹಿರಂಗ ಮಾಡಲಿ. ಸಾಕ್ಷ್ಯ ಮುಚ್ಚಿಡುವುದೂ ಅಪರಾಧವಾಗುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು.

ರಮೇಶ್ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟ ಪ್ರಕರಣದಲ್ಲಿ ಯುವತಿ ವಿಡಿಯೋ ಮೂಲಕ ಹೇಳಿಕೆ ನೀಡುತ್ತಿದ್ದಾರೆ. ಎಲ್ಲೋ ಮರೆಯಲ್ಲಿ ನಿಂತು ಹೇಳಿಕೆ ನೀಡುವುದು ಸರಿಯಲ್ಲ. ನೇರವಾಗಿ ಪೊಲೀಸರ ಮುಂದೆ ಹಾಜರಾಗಿ ಸತ್ಯ ಹೇಳಿದರೆ ಅದರ ಗೌರವ ಹೆಚ್ಚುತ್ತದೆ ಎಂದು ನಾನು ಸಲಹೆ ಮಾಡಿದ್ದೆ. ಆ ಯುವತಿ ಮತ್ತು ಆಕೆಯ ಕುಟುಂಬಕ್ಕೆ ರಕ್ಷಣೆ ನೀಡುವಂತೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರ ಜತೆ ದೂರವಾಣಿ ಮೂಲಕ ಮಾತನಾಡಿ ಸಲಹೆ ನೀಡಿದ್ದೇನೆ. ರಾಜ್ಯದ ಪ್ರತಿಯೊಬ್ಬರಿಗೂ ರಕ್ಷಣೆ ನೀಡುವುದು ಸರ್ಕಾರದ ಜವಾಬ್ದಾರಿ ಎಂದು ಅವರು ಹೇಳಿದರು.

ಅತ್ಯಾಚಾರ ಆರೋಪದಡಿ ಪ್ರಕರಣ ದಾಖಲಿಸಬೇಕೆಂದು ಹೇಳಿದ ಬಳಿಕ ಸಿದ್ದರಾಮಯ್ಯ ಅವರ ಮೇಲಿದ್ದ ಗೌರವ ಕಡಿಮೆಯಾಗಿದೆ ಎಂದು ರಮೇಶ್ ಜಾರಕಿಹೊಳಿ ಅವರು ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಸತ್ಯ ಹೇಳುವುದರಿಂದ ಗೌರವ ಕಡಿಮೆಯಾಗುವುದಾದರೆ ನಾನೇನು ಮಾಡಲು ಸಾಧ್ಯ? ಪ್ರತಿಪಕ್ಷದ ನಾಯಕನಾಗಿ, ವಕೀಲನಾಗಿ ಸತ್ಯ ಹೇಳುವುದು ನನ್ನ ಕರ್ತವ್ಯ ಎಂದು ಹೇಳಿದರು.

## ಜಿಲ್ಲಾ ಕಾಂಗ್ರೆಸ್ ವಕ್ತಾರರಾಗಿ ನಾಗರತ್ನಮ್ಮ ಮಲ್ಲೇಶಪ್ಪ



ದಾವಣಗೆರೆ,ಮಾ.26- ಜಿಲ್ಲಾ ಕಾಂಗ್ರೆಸ್ ವಕ್ತಾರರಾಗಿ ಶ್ರೀಮತಿ ನಾಗರತ್ನಮ್ಮ ಮಲ್ಲೇಶಪ್ಪ ಅವರನ್ನು ನೇಮಕ ಮಾಡಲಾಗಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ತಿಳಿಸಿದ್ದಾರೆ. ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅವರುಗಳು ಶಿಫಾರಸ್ಸಿನ ಮೇರೆಗೆ ಕೆಪಿಸಿಸಿ ಅಧ್ಯಕ್ಷ ಡಿ. ಕೆ. ಶಿವಕುಮಾರ್ ಅವರು ಈ ನೇಮಕ ಮಾಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

## ಹನಗವಾಡಿಯಲ್ಲಿಂದು

ಕರ್ನಾಟಕ ರಾಜ್ಯ ಸರ್ಕಾರಿ ಕಾಲೇಜುಗಳ ಎಸ್ಸಿ, ಎಸ್ಟಿ ಶಿಕ್ಷಕರ ಅಸೋಸಿಯೇಷನ್ ಬೆಂಗಳೂರು, ಕರ್ನಾಟಕ ರಾಜ್ಯ ಎಸ್ಸಿ, ಎಸ್ಟಿ ಅಧ್ಯಾಪಕರ ಫೋರಂ, ಕರ್ನಾಟಕ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರ ಕಲ್ಯಾಣ ಅಸೋಸಿಯೇಷನ್ ಬೆಂಗಳೂರು ಹಾಗೂ ಕಾಲೇಜು ಶಿಕ್ಷಣ ಎಸ್ಸಿ, ಎಸ್ಟಿ ಅಧ್ಯಾಪಕರು ಹಾಗೂ ಅಧ್ಯಾಪಕೇತರರ ಅಸೋಸಿಯೇಷನ್ ಮೈಸೂರು ವಿಭಾಗ ಇವರ ಆಶ್ರಯದಲ್ಲಿ ಇಂದು ಅಂತರರಾಷ್ಟ್ರೀಯ ಕಾರ್ಯಾಗಾರದ ಎರಡನೇ ದಿನದ ಕಾರ್ಯಕ್ರಮ ಹರಿಹರ ತಾಲ್ಲೂಕು ಹನಗವಾಡಿ ಬಳಿ ಇರುವ ಬಿ. ಕೃಷ್ಣಪ್ಪ ಮೆಮೋರಿಯಲ್ ಮೈತ್ರಿ ಧಾಮದಲ್ಲಿ ನಡೆಯಲಿದೆ.

ಇಂದು ಬೆಳಿಗ್ಗೆ 9.30 ಕ್ಕೆ 'ಅಂಬೇಡ್ಕರ್, ನಾಲೆಡ್ಜ್ ಮತ್ತು ಸೋಷಿಯಲ್ ರಿಫಾರ್ಮೇಷನ್ : ಎ ಡಿಸ್ಕೋರ್ಸ್' ವಿಷಯ ಕುರಿತು, ಬೆಳಿಗ್ಗೆ 11 ಗಂಟೆಗೆ 'ಕಾನ್ಸ್ಟಿಟ್ಯೂಷನ್ ಅಂಡ್ ರಿಜರ್ವೇಷನ್ : ಪಾಸ್ಟ್, ಪ್ರೆಸೆಂಟ್ ಅಂಡ್ ಫ್ಯೂಚರ್' ವಿಷಯ ಕುರಿತು ನಂತರ ಮಧ್ಯಾಹ್ನ 12.30 ಕ್ಕೆ 'ಸೋಷಿಯಲ್ ಜಸ್ಟೀಸ್ ಅಂಡ್ ರೆಪ್ರೆಸೆಂಟೇಷನ್ ಆಫ್ ಎಸ್ಸಿ, ಎಸ್ಟಿ ಪ್ರೊಫೆಸರ್ಸ್' ವಿಷಯ ಕುರಿತು ಗೋಷ್ಠಿಗಳು ನಡೆಯಲಿವೆ. ಮಧ್ಯಾಹ್ನ 2 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದಲ್ಲಿ ನೆಹರೂ ಓಲೇಕಾರ್, ಡಾ. ಕರಿಬಸಪ್ಪ, ಡಾ. ಹನುಮಂತಪ್ಪ, ಡಾ. ಅನಿತಾ ಎಂ.ಎಸ್, ಡಾ. ರಾಜು ಬಿ.ಎಲ್., ಡಾ ಗುರುಬಸವರಾಜ ಪಂಡಿತ್ ಭಾಗವಹಿಸುವರು. ಅಧ್ಯಕ್ಷತೆಯನ್ನು ಡಾ. ಪುಟ್ಟರಾಜು ವಹಿಸುವರು.

## ಸಂಕೋಳ್ ಕುಟುಂಬದಿಂದ ಮಜ್ಜಿಗೆ ವಿತರಣೆ



ದಾವಣಗೆರೆ,ಮಾ.26- ಶ್ಯಾಬನೂರು ಶ್ರೀ ಆಂಜನೇಯ ರಥೋತ್ಸವದ ಪ್ರಯುಕ್ತ ನಡೆದ ಓಕಳಿ ಕಾರ್ಯಕ್ರಮದಲ್ಲಿ ಸಂಕೋಳ್ ಶ್ರೀ ವಿನಾಯಕ ಟ್ರೇಡರ್ಸ್ ಮಾಲೀಕ ಸಂಕೋಳ್ ಚಂದ್ರಶೇಖರ್ ಅವರು ಉಚಿತ ಮಜ್ಜಿಗೆ ವಿತರಣೆ ವ್ಯವಸ್ಥೆ ಮಾಡಿದ್ದರು. ನಾಗನೂರು, ಶಿರಮಗೊಂಡನಹಳ್ಳಿ, ನಿಟುವಳ್ಳಿ ಮತ್ತಿತರೆ ಕಡೆಗಳಿಂದ ಆಗಮಿಸಿದ್ದ ಭಕ್ತರಿಗೆ ಮಜ್ಜಿಗೆ ವಿತರಿಸಲಾಯಿತು.

## ಹೋಳಿ ಹಬ್ಬ - ಉಪ ಚುನಾವಣೆ ಒಂದೇ ದಿನ ಮತದಾನಕ್ಕೆ ಅಡಚಣೆ : ಗಡಿಗುಡಾಳ್

ದಾವಣಗೆರೆ, ಮಾ. 26 - ಮಹಾನಗರ ಪಾಲಿಕೆಯ ಎರಡು ವಾರ್ಡ್ ಗಳಿಗೆ ನಡೆಯುತ್ತಿರುವ ಉಪ ಚುನಾವಣೆ ಹಾಗೂ ಹೋಳಿ ಹಬ್ಬ ಒಂದೇ ದಿನ ಇರುವುದರಿಂದ ಮತದಾನ ಕಡಿಮೆಯಾಗುವ ಸಾಧ್ಯತೆ ಇದ್ದು, ಜಿಲ್ಲಾಡಳಿತ ಹೋಳಿ ಹಬ್ಬವನ್ನು ಇದೇ ತಿಂಗಳು 29 ರ ಸೋಮವಾರದ ಬದಲಾಗಿ 28 ಭಾನುವಾರ ಆಚರಣೆ ಮಾಡಲು ಆದೇಶಿಸಬೇಕು ಎಂದು ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಮನವಿ ಮಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಮತದಾನ ಪವಿತ್ರ ಕರ್ತವ್ಯವಾಗಿದ್ದು, ಇದನ್ನು ಚಲಾವಣೆ ಮಾಡಲು ತೊಂದರೆ ಆಗಬಾರದು ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.


ಕೆಲಸಕ್ಕೆ ಬೇಕಾಗಿದ್ದಾರೆ




ಹರಿಹರ ನಗರದ ಮುಖ್ಯ ರಸ್ತೆಯ ಶ್ರೀ ಸಿದ್ದೇಶ್ವರ ಎಂಪೈರ್ ಬಿಲ್ಡಿಂಗ್ ಹಾಗೂ ಡಿ. ಸಿದ್ದಪ್ಪ ಅಂಡ್ ಸನ್ಸ್ ( ಮಿಠಾಯಿ) ಕಿರಾಣಿ ಅಂಗಡಿಯ ಮೇಲೆ ನೂತನವಾಗಿ ಆರಂಭವಾಗುವ

ಶ್ರೀ ಸಾಯಿ ಡಿಜಿಟ್ರಾನಿಕ್ಸ್ ಮತ್ತು ಮೊಬೈಲ್

ಎಲೆಕ್ಟ್ರಾನಿಕ್ಸ್ ಮತ್ತು ಮೊಬೈಲ್ಸ್ ಕೆಲಸದಲ್ಲಿ ನುರಿತ ಯುವಕ ಮತ್ತು ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ :

ಅನಿಲ್ ರಾಜ್ ಹಾಗೂ ನವೀನ್ ಕುಮಾರ್

ಫೋ. : 98440 44046- 88849 68883


# ಕೋವಿಡ್ ಅಪಾಯ ತಪ್ಪಿಸಲು ಸಹಕರಿಸಿ



**ಜಗಳೂರು ಪ.ಪಂ ಅಧ್ಯಕ್ಷ ತಿಪ್ಪೇಸ್ವಾಮಿ**

ಜಗಳೂರು,ಮಾ. 26- 60 ವರ್ಷ ಮೇಲ್ಪಟ್ಟ ಹಿರಿಯರು ಹಾಗೂ ಗಂಭೀರ ಆರೋಗ್ಯ ಸಮಸ್ಯೆಯುಳ್ಳ 45 ವರ್ಷ ಮೇಲ್ಪಟ್ಟವರು ಸ್ವಯಂ ಪ್ರೇರಿತರಾಗಿ ಕೋವಿಡ್ ಲಸಿಕೆ ಪಡೆದುಕೊಳ್ಳಬೇಕು. ಜಾಗೃತರಾಗಿ ಎರಡನೇ ಬಾರಿ ಕೋವಿಡ್ ಆಕ್ರಮಣದ ಅಪಾಯವನ್ನು ತಪ್ಪಿಲು ಸಹಕಾರ ನೀಡಬೇಕು ಎಂದು ಪಟ್ಟಣ ಪಂಚಾಯ್ತಿ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ ಕರೆ ನೀಡಿದರು.

ಪಟ್ಟಣದ ಪಟ್ಟಣ ಪಂಚಾಯ್ತಿ ಸಭಾಂಗಣದಲ್ಲಿ ಕರೆದಿದ್ದ ಕೋವಿಡ್ ಲಸಿಕೆ ಪಡೆಯುವ ಕುರಿತ ಜಾಗೃತಿ ಸಭೆಯಲ್ಲಿ ಅವರು ಮಾತನಾಡಿದರು.

ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಮಾರ್ಚ್ 1 ರಿಂದ ಉಚಿತವಾಗಿ ಅರ್ಹರಿಗೆ ಲಸಿಕೆ ನೀಡಲಾಗುತ್ತಿದೆ. ಶೀಘ್ರವಾಗಿ ಅಗತ್ಯ ದಾಖಲೆ ಸಲ್ಲಿಸಿ ನೋಂದಣಿ ಮಾಡಿಸಿ ಲಸಿಕೆ ಪಡೆಯುವಂತೆ ಸಲಹೆ ನೀಡಿದರು.

ಕೋವಿಡ್‌ನಿಂದ ಸಂಪೂರ್ಣ ಮುಕ್ತಿ ಸಿಗದೆ ಪ್ರಕರಣಗಳು ಏರುಗತಿಯಲ್ಲಿ ಉಲ್ಬಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಮಾನದಂಡಗಳನ್ನು ವಿವಾಹ, ಜನ್ಮದಿನ, ಅಂತ್ಯ ಸಂಸ್ಕಾರ, ಜಾತ್ರೆ ಇತರೆ ಸಭೆ ಆಚರಣೆ ಸಮಾರಂಭಗಳಲ್ಲಿ ಸಾರ್ವಜನಿಕರು ಕಡ್ಡಾಯವಾಗಿ ಮಾರ್ಗಸೂಚಿ ಪಾಲಿಸಿ ಎರಡನೇ ಅಲೆಯ ಕೋವಿಡ್ ಮಹಾಮಾರಿ ಆಕ್ರಮಣ ನಿಯಂತ್ರಿಸಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಪಟ್ಟಣದಲ್ಲಿ ಕೊವಿಡ್ 19 ನಿಯಮಗಳನ್ನು ಉಲ್ಲಂಘಿಸಿ ಮಾಸ್ಕ್ ಧರಿಸದೇ ಇದ್ದಲ್ಲಿ ಪಟ್ಟಣ ಪಂಚಾಯಿತಿ ವತಿಯಿಂದ ರೂ.100 ದಂಡ ವಿಧಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ನಾಗವೇಣಿ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ನಾಗರಾಜ್, ಪ.ಪಂ. ಉಪಾಧ್ಯಕ್ಷೆ ಲಲಿತಾ ಶಿವಣ್ಣ, ಸದಸ್ಯರಾದ ದೇವರಾಜ್, ರೇವಣ್ಣ, ರವಿ, ಶಕೀಲ್ ಅಹಮ್ಮದ್, ಪಾಪಲಿಂಗಪ್ಪ, ರಮೇಶ್, ನಾಮನಿರ್ದೇಶಿತ ಸದಸ್ಯ ರುದ್ರಮುನಿ, ಪ. ಪಂ. ಕಂದಾಯ ನಿರೀಕ್ಷಕ ಸಂತೋಷ್, ಆರೋಗ್ಯ ನಿರೀಕ್ಷಕ ಖಿಫಾಯತ್ ಇನ್ನಿತರರಿದ್ದರು.






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte